ಏಪ್ರಿಲ್ 2022

₹ 15/-

# ಯುಗರಶ್ಮಿ

ತ್ರೈಮಾಸಿಕ




- ಸಾಮಾಜಿಕ ಶಾಂತಿ
- ಹ್ಯುಮಾನಿಟಿ ಫಸ್ಟ್
- ಖುರ್‌ಆನ್ ನಿರ್ದೇಶಿಸುವ ಪರದಾ ಪದ್ಧತಿ
- ಬುರ್ಖಾ ಧರಿಸಿ ಆಕ್ಸ್‌ಫರ್ಡ್‌ನಲ್ಲಿ
- ಉಪವಾಸ
- ಮೂರನೇ ಜಾಗತಿಕ ಯುದ್ಧಕ್ಕೆ ಸಂಬಂಧಿಸಿ ಮುನ್ನೆಚ್ಚರಿಕೆ
- ಮಹಾತ್ಮ ಗುರು ನಾನಕ್
- ನೀನು ಮಾಡು – ಮಾಡಬೇಡ

“ಎಲ್ಲೈ ವಿಶ್ವಾಸಿಗಳೇ, ನಿಮ್ಮ ಪೂರ್ವಜರಿಗೆ ವಿಧಿಸಲಾದಂತೆ ನಿಮಗೆ ಸಹ ಉಪವಾಸ ವ್ರತವನ್ನು ವಿಧಿಸಲಾಗಿದೆ – ನೀವು (ನೈತಿಕ ಮತ್ತು ಆಧ್ಯಾತ್ಮಿಕ ನ್ಯೂನತೆಗಳಿಂದ ಸುರಕ್ಷಿತರಾಗುವಂತೆ) ದೋಷಬಾಧೆಯ ಬಗ್ಗೆ ಜಾಗರೂಕರಾಗಲಿಕ್ಕೋಸ್ಕರ.”

– ಪವಿತ್ರ ಖುರ್‌ಆನ್ (2:184)

ವಿಷಯ ಸೂಚಿಕೆ | ಪುಟ


* ವ್ರತಾನುಷ್ಠಾನ 1
* ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು 2
* ಸಾಮಾಜಿಕ ಶಾಂತಿ 3
* ಹ್ಯುಮಾನಿಟಿ ಫಸ್ಟ್ 9
* ಖುರ್‌ಆನ್ ನಿರ್ದೇಶಿಸುವ ಪರದಾ ಪದ್ಧತಿ 14
* ಬುರ್ಖಾ ಧರಿಸಿ ಆಕ್ಸ್‌ಫರ್ಡ್‌ನಲ್ಲಿ 16
* ಉಪವಾಸ 18
* ಮೂರನೇ ಜಾಗತಿಕ ಯುದ್ಧಕ್ಕೆ ಸಂಬಂಧಿಸಿ ಅಹ್ಮದಿಯಾ ಜಮಾಅತಿನ ಸರ್ವೋಚ್ಚ ನೇತಾರರ ಮುನ್ನೆಚ್ಚರಿಕೆ 22
* ಮಹಾತ್ಮ ಗುರು ನಾನಕ್ 26
* ನೀನು ಮಾಡು – ಮಾಡಬೇಡ 28
* ರಷ್ಯಾ – ಉಕ್ರೇನ್ ಬಿಕ್ಕಟ್ಟಿಗೆ ಸಂಬಂಧಿಸಿ ಅಹ್ಮದಿಯಾ ಜಮಾಅತಿನ ಜಾಗತಿಕ ನೇತಾರರ ಹೇಳಿಕೆ 31
* ನಮ್ಮ ಜಿಹಾದ್ 31
* ವಾಟ್ಸ್ ಆ್ಯಪ್ ಸಂದೇಶಗಳು :
* Ahmadi woman awarded ‘Nari Shakti’ award by President of India 32
* ಸಮಯವಿದ್ದರೆ ಓದಿ..... ! * ಪ್ರಮುಖ ಧರ್ಮಗಳಲ್ಲಿ ಹಿಜಾಬಿನ ವ್ಯಾಖ್ಯಾನ * ನಗ್ನ ಸತ್ಯ
* ಭಗವದ್ಗೀತೆ ಸಾರ * ಡಾ। ಬಿ.ಆರ್. ಅಂಬೇಡ್ಕರ್
* ನಿಧನ ವಾರ್ತೆಗಳು : 34
* ಜ । ಮೌಲಾನಾ ಮುಬಾರಕ್ ನಧೀರ್ ಸಾಹಿಬ್ * ಜ । ಫಹೀಮ್ ಅಹ್ಮದ್ ನೂರ್ ಸಾಹಿಬ್
* ಓದಿದ್ದು : 35
* ಶಿವಾಜಿ ಬಗ್ಗೆ ನಿಮಗೆಷ್ಟು ಗೊತ್ತಿದೆ ? * ದೈವ ನಿಂದನೆ: ಪಾಕ್ ಮಹಿಳೆಗೆ ಗಲ್ಲು * ಅರಿಶಿಣದಿಂದ ಕ್ಯಾನ್ಸರ್ ಚಿಕಿತ್ಸಾ ಧಾತು! * ಸಂತ್ರಸ್ತೆಗೆ ಸ್ತ್ರೀಯರಿಂದಲೇ ಚಿತ್ರಹಿಂಸೆ * ಕ್ಷೀರ ಪಥದಲ್ಲಿ ಕಂಡಿತು ವಿಚಿತ್ರ ಪುಂಜ!
* ಲೈಂಗಿಕ ಕಿರುಕುಳ: ಮದ್ರಸ ಅಧ್ಯಾಪಕನ ಬಂಧನ * ಗಂಡು ಮಗುವಿಗಾಗಿ ಗರ್ಭಿಣಿ ತಲೆಗೆ ಮೊಳೆ!
* ಮುಸ್ಲಿಂ ವಿದ್ಯಾರ್ಥಿನಿಗೆ ಸಂಸ್ಕೃತದಲ್ಲಿ 5 ಚಿನ್ನದ ಪದಕ! * ಇಳಿವಯಸ್ಸಿನ ಸಮಸ್ಯೆಗೆ ಬ್ರೇಕ್ ಹಾಕಬಲ್ಲ ಮೊಸರು!
* ಅಹ್ಮದಾಬಾದ್ ಸರಣಿ ಸ್ಫೋಟ 28 ಮಂದಿಗೆ ಗಲ್ಲುಶಿಕ್ಷೆ * 22022022 : ವಿಶೇಷ ದಿನ
* ಕಾನ್‌ಸ್ಟೆಬಲ್ ಹುದ್ದೆಗೆ ಉನ್ನತ ಶಿಕ್ಷಣ ಪಡೆದವರ ಆಸಕ್ತಿ * ಹಂದಿ ಹೃದಯ ಕಸಿಗೆ ಒಳಗಾಗಿದ್ದವ ಸಾವು
* ಒಂದೇ ದಿನ 81 ಮಂದಿಗೆ ಗಲ್ಲುಶಿಕ್ಷೆ ವಿಧಿಸಿದ ಸೌದಿ * ವಿಶ್ವದ ಅತ್ಯಂತ ಉದ್ದದ ಕಾರು
* ಸೌರ ವ್ಯೂಹದಾಚೆ ಇವೆ 5 ಸಾವಿರ ಗ್ರಹ! * ದಲಿತ ಬಾಲಕನಿಗೆ ಥಳಿತ, ಪಾದ ನೆಕ್ಕುವಂತೆ ಬಲವಂತ
* ಒಂದು ಕೆಜಿ ಚಹಾ ಎಲೆ 11 ಲಕ್ಷ ರೂ!
* ಕವನ : ಮುಲ್ಲಾ ಫತ್ವ ಮತ್ತು ಅಹ್ಮದಿಯತಿನ ವಿಜಯ 41
* ಆರೋಗ್ಯ : ಔಷಧ ಗುಣಗಳ ಭಂಡಾರ ಜೀರಿಗೆ 42


# ಯುಗರಶ್ಮಿ

ಮುಖಪುಟ ಚಿತ್ರ : ಬೈತುಲ್ ಗ಼ಫೂರ್ ಮಸ್ಜಿದ್, ಗಿನ್‌ಶೀಮ್, ಜರ್ಮನಿ


ಬಿಡಿ ಪ್ರತಿ : ರೂ. 15/– ವಾರ್ಷಿಕ ಚಂದಾ : ರೂ. 60/– ಅಂಚೆ ಮೂಲಕ : ರೂ. 70/–



ವಿಳಾಸ : 10–23–1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು – 575001.
ಸಂಪರ್ಕಿಸಿರಿ : 9900410789

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

*ಸಂಪಾದಕ : ಮುಹಮ್ಮದ್ ಯೂಸುಫ್*

ಏಪ್ರಿಲ್ 2022

| | | | |
|---|---|---|---|
| ಆರಂಭ : 1975 | ಸಂಪುಟ : 38 | ಶಹಾದತ್ : 1401 ಹಿಜರೀ ಶಮ್ಸೀ | ಸಂಚಿಕೆ : 3–4 |

## ವ್ರತಾನುಷ್ಠಾನ

ಆಹಾರವನ್ನು ಕಡಿಮೆ ಮಾಡುವುದು ಮತ್ತು ಹಸಿವನ್ನು ಸಹಿಸುವುದು ಆತ್ಮದ ಸಂಸ್ಕಾರಕ್ಕೂ ಉನ್ನತಿಗೂ ಅತ್ಯಾವಶ್ಯಕವಾದ ಒಂದು ಕರ್ಮವಾಗಿದೆ. ಅದು ಆತ್ಮ ದರ್ಶನ ಶಕ್ತಿಯನ್ನು ಪೋಷಿಸುತ್ತದೆ. ಮನುಷ್ಯನು ಜೀವಿಸುವುದು ಭಕ್ಷ್ಯ ಪೇಯಾದಿಗಳಿಂದ ಮಾತ್ರವಲ್ಲ. ಈ ಜೀವಿತದ ನಂತರ ಅವನಿಗೆ ಮತ್ತೊಂದು ಜೀವಿತ ಸಹ ಇದೆ. ಶಾಶ್ವತವಾದ ಪಾರತ್ರಿಕ ಜೀವಿತವನ್ನು ಅಲಕ್ಷ್ಯ ಮಾಡುವುದರಿಂದ ಮನುಷ್ಯನು ದೇವನಿಂದ ಬೇರ್ಪಟ್ಟು ಅವನ ಕೋಪಕ್ಕೆ ಸ್ವಯಂ ಗುರಿಯಾಗುತ್ತಾನೆ.

ವ್ರತಾನುಷ್ಠಾನದ ಉದ್ದೇಶ, ಒಂದು ಕ್ಲಪ್ತ ಕಾಲದವರೆಗೆ ಪಾನಾಶನಾದಿಗಳನ್ನು ವರ್ಜಿಸಿ, ಹಸಿವನ್ನು ಸಹಿಸುವುದು ಮಾತ್ರವಲ್ಲವೆಂದು ನೆನಪಿಡಬೇಕಾಗಿದೆ. ವ್ರತಾನುಷ್ಠಾನಿಯು ಎಲ್ಲ ವಿಧ ದೋಷಗಳಿಂದ ದೂರವಿದ್ದು, ದೇವಸ್ಮರಣೆಯಲ್ಲಿ ಹೆಚ್ಚು ಸಮಯವನ್ನು ವ್ಯಯಿಸಬೇಕಾದುದು ಅತ್ಯಾವಶ್ಯಕವಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ರಮಝಾನ್ ಮಾಸದಲ್ಲಿ ಬಹಳ ಹೆಚ್ಚು ದೇವಾರಾಧನೆಯಲ್ಲಿ ಮಗ್ನರಾಗಿರುತ್ತಿದ್ದರು. ಒಟ್ಟಾರೆ, ಉಪವಾಸ ಕಾಲದಲ್ಲಿ ಆಹಾರ ಪಾನೀಯಗಳಿಗೆ ಸಂಬಂಧಿಸಿದ ವಿಚಾರಗಳಿಂದ ವಿರಮಿಸಿ, ಆ ಬಗೆಯ ಕಾರ್ಯಗಳನ್ನು ಉಪೇಕ್ಷಿಸಿ, ಶ್ರದ್ಧೆಯನ್ನೆಲ್ಲ ದೇವನ ಕಡೆಗೆ ಇರಿಸಬೇಕಾಗಿದೆ. ಭೌತಿಕ ಭಕ್ಷ್ಯ ವಸ್ತುಗಳು ಲಭಿಸಿ ಆಧ್ಯಾತ್ಮಿಕ ಆಹಾರದ ಕುರಿತು ಚಿಂತನೆ ಮಾಡದ ಮನುಷ್ಯನನ್ನು ಭಾಗ್ಯಹೀನನೆಂದೇ ಹೇಳಬಹುದು. ಆಹಾರವನ್ನು ಸೇವಿಸುವುದರಿಂದ ಶರೀರಕ್ಕೆ ಬಲವೂ ಓಜಸ್ಸೂ ಲಭಿಸುವಂತೆ ಆಧ್ಯಾತ್ಮಿಕಾಹಾರದ ಮೂಲಕ ಆತ್ಮಕ್ಕೆ ರಕ್ಷಣೆಯೂ ಆತ್ಮ ಶಕ್ತಿಗಳಿಗೆ ಚೈತನ್ಯವೂ ದೊರಕುತ್ತದೆ. ಎಲ್ಲ ವಿಧ ಸಫಲತೆಗಳ ಬಾಗಿಲು ದೇವಾನುಗ್ರಹದಿಂದ ತೆರೆಯಲ್ಪಡುವುದರಿಂದ ವಿಜಯ ಲಬ್ಧಿಗಾಗಿ ಅವನಿಂದಲೇ ಸಹಾಯ ಯಾಚಿಸಬೇಕಾಗಿದೆ.

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರು

## ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

♦ ಉಪವಾಸ ಗುರಾಣಿಯಾಗಿದೆ. ನಿಮ್ಮಲ್ಲಿ ಯಾರಾದರೂ ಉಪವಾಸಿಗನಾಗಿದ್ದರೆ ಆತನು ಅನಾವಶ್ಯ ಮಾತನಾಡಬಾರದು, ಜಗಳ ಮಾಡಬಾರದು, ಬೈಯ್ಯಬಾರದು, ಯಾರಾದರೂ ಜಗಳಕ್ಕೆ ಬಂದರೆ ನಾನು ಉಪವಾಸಿಗ ಎಂದು ಹೇಳಲಿ. (ಬುಖಾರಿ)

♦ ಯಾರು ಸುಳ್ಳು ಹೇಳುವುದರಿಂದ ಮತ್ತು ಅದಕ್ಕನುಗುಣವಾಗಿ ವರ್ತಿಸುವುದರಿಂದ ಬಿಟ್ಟು ನಿಲ್ಲುವುದಿಲ್ಲವೋ ಅವನು ಹಸಿವೆ ಮತ್ತು ದಾಹ ಸಹಿಸುವುದರಿಂದ ಏನೂ ಪ್ರಯೋಜನವಿಲ್ಲ. (ಬುಖಾರಿ)

♦ ಪ್ರತಿಫಲಕ್ಕೋಸ್ಕರ ಎಲ್ಲ ಮಾಸಗಳಲ್ಲಿ ಮೂರು ಉಪವಾಸ ಅನುಷ್ಠಿಸಲು ಇಚ್ಛಿಸುವುದಾದರೆ ಚಂದ್ರ ಮಾಸದ 13,14,15 ದಿವಸಗಳಲ್ಲಿ ಉಪವಾಸ ಮಾಡಿರಿ. (ತಿರ್ಮಧೀ)

♦ ನಿಮ್ಮಲ್ಲಿ ಯಾರಾದರೂ ಉಪವಾಸ ಮುಕ್ತಾಯಗೊಳಿಸುವಾಗ ಉತ್ತುತ್ತೆ (ಖರ್ಜೂರ) ತಿನ್ನಲಿ. ಅದು ಸಿಗದಿದ್ದರೆ ನೀರನ್ನು ಕುಡಿಯಲಿ. ಖಂಡಿತವಾಗಿಯೂ ಅದು ಶುದ್ಧಿ ಮಾಡುವುದು. (ಅಬೂದಾವೂದ್, ತಿರ್ಮಧೀ)

♦ ಅಲ್ಲಾಹು ತಿಳಿಸಿದ್ದಾನೆ: ಅಸ್ತಮಾನದ ನಂತರ ಅವಸರದಲ್ಲಿ ಉಪವಾಸವನ್ನು ಮುಕ್ತಾಯಗೊಳಿಸುವವನು ನನ್ನ ದಾಸರ ಪೈಕಿ ನನಗೆ ಅತ್ಯಂತ ಮೆಚ್ಚುಗೆಯವನು. (ತಿರ್ಮಧೀ)

---

### Statement about ownership and other particulars about the Newspaper Yugarashmi Quarterly (Form IV see Rule 8)

| | | |
|---|---|---|
| 1. Place of publication | : | Mangalore |
| 2. Period of its publication | : | Quarterly |
| 3. Printer's Name | : | Muhammad Yusuf |
| Whether citizen of india | : | Yes |
| Address | : | 10-23-1008/1, 1st Floor, Ansari Road, Bunder, Mangalore – 575001 |
| 4. Publisher's Name | : | Muhammad Yusuf |
| Whether citizen of india | : | Yes |
| Address | : | 10-23-1008/1, 1st Floor, Ansari Road, Bunder, Mangalore – 575001 |
| 5. Editor's Name | : | Muhammad Yusuf |
| Whether citizen of india | : | Yes |
| Address | : | 10-23-1008/1, 1st Floor, Ansari Road, Bunder, Mangalore - 575001 |
| 6. Name and address of individuals who own the newspaper and partners or shareholders holding more than one percent of the Capital | : | Jamath Ahmadiyya, "Darussalam", Near Railway Level Crossing, Pandeshwar, Mangalore – 575001 |

I, Muhammad Yusuf hereby declare that the particulars given above are true to the best of my knowledge and belief.
Date : 1-4-2022 Sd/- Muhammad Yusuf

# ಸಾಮಾಜಿಕ ಶಾಂತಿ

♦ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್, ಅಹ್ಮದಿಯಾ ಮುಸ್ಲಿಂ ಜಮಾಅತಿನ ನಾಲ್ಕನೇ ಖಲೀಫ

## ಇಸ್ಲಾಮೀ ಸಾಮಾಜಿಕ ವ್ಯವಸ್ಥೆ

ಇಸ್ಲಾಮ್ ಬೇರೆಯೇ ಒಂದು ಸಾಮಾಜಿಕ ವಾತಾವರಣ ವ್ಯವಸ್ಥೆಯನ್ನು ರೂಪಿಸಲು ಬಯಸುತ್ತದೆ. ಗ್ರೀಷ್ಮ ಋತುವಿನಿಂದ ವಸಂತ ಋತುವಿಗೆ ಸಂಚರಿಸುವ ಹಾಗೆ ಅದು ಇದೆ. ಇಸ್ಲಾಮೀ ಸಮಾಜ ಹೇಗಿರುತ್ತದೆ ಎಂದರೆ ನೈಸರ್ಗಿಕ ಆಶೆಗಳನ್ನು ಮಿತಿಯಲ್ಲಿರಿಸುತ್ತದೆ, ಅದನ್ನು ಶಿಸ್ತಿಗೆ ಒಳಪಡಿಸುತ್ತದೆ ಮತ್ತು ಅದನ್ನು ಸರಿಪಡಿಸುತ್ತದೆ. ಸಹಜ ಗುಣಗಳನ್ನು ನಿಯಂತ್ರಿಸದೆ ಇದ್ದರೆ ಅದು ವಿನಾಶಕಾರಿಯಾಗುವುದು. ಅದು ಕೆಲವು ಆಶೆಗಳನ್ನು ನಿಷಿದ್ಧಗೊಳಿಸುತ್ತದೆ ಅಥವಾ ನಿರುತ್ಸಾಹಪಡಿಸುತ್ತದೆ. ಏಕೆಂದರೆ ಅವುಗಳ ಈಡೇರಿಕೆಯಿಂದ ಸಮಾಜದಲ್ಲಿ ಸುಖಕ್ಕಿಂತ ಕಷ್ಟ ಹೆಚ್ಚಾಗುತ್ತದೆ.

ಇಸ್ಲಾಮ್ ಹೊಸ ರುಚಿಗಳನ್ನು ಅಭಿವೃದ್ಧಿಗೊಳಿಸುತ್ತದೆ ಮತ್ತು ಸಂಸ್ಕೃತಿ ರಹಿತರಿಗೆ ಮತ್ತು ತರಬೇತಿ ರಹಿತರಾದವರಿಗೆ ವರ್ಣ ರಹಿತ, ರುಚಿ ರಹಿತ ಸಪ್ಪೆ ಎಂದು ತೋರುವ ಚಟುವಟಿಕೆಗಳಿಂದ ಸುಖಗಳಿಸಲು ಕಲಿಸುತ್ತದೆ. ರುಚಿಸುವಿಕೆಯನ್ನು ಪರಿಷ್ಕರಿಸಲಾಗುತ್ತಿದೆ ಮತ್ತು ಇಂದ್ರಿಯ ಆಶೆಗಳನ್ನು ತರಬೇತಿಗೊಳಪಡಿಸಿ ಸುಸಂಸ್ಕೃತ ಗೊಳಿಸಲಾಗುತ್ತಿದೆ ಮತ್ತು ಉನ್ನತಿ ಪಡೆಯುವ ಆಕಾಂಕ್ಷೆ ಹುಟ್ಟುವಂತೆ ಮಾಡುತ್ತದೆ.

ಈಗಿನ ಸಾಮಾಜಿಕ ಪರಿವರ್ತನೆಗಳು ಸಮಾಜಕ್ಕೆ ಅನಾರೋಗ್ಯಕರವಾಗಿದೆ ಎಂದು ನಿರ್ಧರಿಸುವುದು ಹೇಗೆ? ನನ್ನ ಮಟ್ಟಿಗೆ ಇದರ ಉತ್ತರ ಸರಳವಾಗಿದೆ. ಒಬ್ಬ ಮನುಷ್ಯನ ಆರೋಗ್ಯದ ಚಿಹ್ನೆಗಳಿಂದ ಅವನ ಆರೋಗ್ಯದ ಸ್ಥಿತಿಯನ್ನು ಮನವರಿಕೆ ಮಾಡಿಕೊಳ್ಳಬಹುದಾದ ಹಾಗೆಯೇ ಸಮಾಜದ ಸ್ಥಿತಿಯನ್ನು ಚಿಹ್ನೆಗಳಿಂದ ಮನವರಿಕೆ ಮಾಡಬಹುದಾಗಿದೆ. ಒಬ್ಬನು ನೋವಿನಿಂದ ಬಳಲುವಾಗ ಅವನು ಆತಂಕಗೊಳ್ಳುತ್ತಾನೆ. ಅವನ ಕೆಲಸಗಳು ಸಾಧಾರಣ ರೀತಿಯಲ್ಲಿರುವುದಿಲ್ಲ. ಒಬ್ಬನು ಯಾವುದಾದರೂ ಕಾರಣದಿಂದ ವ್ಯಾಕುಲಚಿತ್ತನಾದರೆ ಅವನ ಹೃದಯ ಮತ್ತು ಮನಸ್ಸು ಪ್ರಭಾವಿತವಾಗುತ್ತವೆ. ಅಂತಹ ಸಂದರ್ಭದಲ್ಲಿ ಮನುಷ್ಯನು ರೋಗ ಬಾಧಿತನಾಗಿರುವನೆಂದು ತಿಳಿಯಲು ಅತ್ಯಂತ ಬುದ್ಧಿಶಾಲಿ ಮನುಷ್ಯನ ಅಥವಾ ನುರಿತ ವೈದ್ಯನ ಆವಶ್ಯಕತೆ ಇರುವುದಿಲ್ಲ. ಇವೆಲ್ಲ ಚಿಹ್ನೆಗಳು ಈಗಿನ ಸಮಾಜದಲ್ಲಿ ಕಾಣಿಸುತ್ತವೆ. ಯೇಸು ಕ್ರಿಸ್ತರು ಎಷ್ಟು ಸತ್ಯವಾಗಿ ಹೇಳಿದರು:

**"ಅವರ ಫಲಗಳಿಂದ ಅವರನ್ನು ತಿಳಿದುಕೊಳ್ಳುವಿರಿ. ಮುಳ್ಳು ಗಿಡಗಳಲ್ಲಿ ದ್ರಾಕ್ಷೇ ಹಣ್ಣುಗಳನ್ನೂ ಮದ್ದುಗುಣಿಕೇ ಗಿಡಗಳಲ್ಲಿ ಅಂಜೂರಗಳನ್ನೂ ಕೊಯ್ಯುವುದುಂಟೆ? ಹಾಗೆಯೇ ಒಳ್ಳೇ ಮರಗಳೆಲ್ಲಾ ಒಳ್ಳೇ ಫಲವನ್ನು ಕೊಡುವವು. ಹುಳುಕು ಮರವು ಕೆಟ್ಟ ಫಲವನ್ನು ಕೊಡುವದು. ಒಳ್ಳೇ ಮರವು ಕೆಟ್ಟ ಫಲವನ್ನು ಕೊಡಲಾರದು. ಹುಳುಕು ಮರವು ಒಳ್ಳೇ ಫಲವನ್ನು ಕೊಡಲಾರದು."** (ಮತ್ತಾಯನ ಸುವಾರ್ತೆ 7 :16–18).

ಜನರು ಇಂದು ಕಹಿ ಫಲಗಳ ಬಗ್ಗೆ ಕರ್ಕಶವಾಗಿ ಬೊಬ್ಬೆ ಹಾಕುತ್ತಾರೆ. ಆದರೆ ಅವರು ಹುಳುಕು ಮರವನ್ನು ಕಿತ್ತು ಹಾಕಿ ಒಳ್ಳೆಯ ಮರವನ್ನು ನೆಡಲು ಮುಂದಾಗುವುದಿಲ್ಲ. ಇಸ್ಲಾಮೀ ಸಾಮಾಜಿಕ ವ್ಯವಸ್ಥೆ ಕೆಟ್ಟ ಮರವನ್ನು ಬೇರು ಸಹಿತ ಕಿತ್ತು ಹಾಕಿ ಹೊಸ ಒಳ್ಳೆಯ ಮರವನ್ನು ನೆಡಲು ಬಯಸುತ್ತದೆ.

ಪವಿತ್ರ ಖುರ್‌ಆನ್ ಪ್ರಕಾರ ಹಝ್ರತ್ ಆದಮ್‌ರೊಂದಿಗೆ[ಅ] ಒಂದು ಮರದ ಹಣ್ಣನ್ನು ತಿನ್ನಬಾರದೆಂದು ಆಜ್ಞಾಪಿಸಿದಾಗ ಅಲ್ಲಾಹನು ಉದ್ದೇಶಿಸಿದುದು ಹೀಗೆ:

**"ಒಂದು ಉತ್ತಮ ವಚನವನ್ನು ಅಲ್ಲಾಹನು ಹೇಗೆ ಹೋಲಿಸುತ್ತಾನೆಂದು ನೀನು ಕಾಣಲಿಲ್ಲವೇ? ಬೇರುಗಳು ಭದ್ರವಾಗಿದ್ದುಕೊಂಡು ಶಾಖೆಗಳು ಆಕಾಶದೆಡೆಗೆ ಚಾಚಿಕೊಂಡಿರುವ ಒಂದು ಉತ್ತಮ ವೃಕ್ಷದಂತೆ ಅದರ ಸ್ಥಿತಿ ಇದೆ"**

**"ಅದರ ಪ್ರಭುವಿನ ಆಜ್ಞೆಯಂತೆ ಅದು ತನ್ನ (ತಾಜಾ) ಫಲಗಳನ್ನು ಸದಾಕಾಲ ನೀಡುತ್ತಿರುತ್ತದೆ. ಜನರು ಚಿಂತಿಸಿ ಮನದಟ್ಟು ಮಾಡಕೊಳ್ಳಲಿಕ್ಕಾಗಿ ಅಲ್ಲಾಹನು ಉಪಮೆಗಳನ್ನು ನೀಡಿ ವಿವರಿಸಿಕೊಡುತ್ತಾನೆ."** (ಪವಿತ್ರ ಖುರ್‌ಆನ್ 14 : 25, 26).

ಈ ವಚನಗಳಲ್ಲಿ ಹೇಳಲಾದ ವೃಕ್ಷ ಎಂಬ ಪದ ಪ್ರತೀಕಾತ್ಮಕವಾಗಿದೆ. ಆರೋಗ್ಯವಂತ ಸಿದ್ಧಾಂತವನ್ನು ಅನಾರೋಗ್ಯವಂತ ಸಿದ್ಧಾಂತದ ಎದುರಿಗೆ ಪ್ರಸ್ತಾಪಿಸಿದುದು ಸಹ ಪ್ರತೀಕಾತ್ಮಕವಾಗಿಯಾಗಿದೆ. ಕೆಟ್ಟ ವೃಕ್ಷ ಮತ್ತು ಅವಿಶ್ವಾಸಿಗಳ ಸ್ಥಿತಿಗಳನ್ನು ಪವಿತ್ರ ಖುರ್‌ಆನ್ ಮುಂದಿನ ಎರಡು ವಚನಗಳಲ್ಲಿ ಹೀಗೆ ವಿವರಿಸಿದೆ:

**"ಒಂದು ಕೆಟ್ಟ ವಚನದ ಉಪಮೆಯು, ನೆಲದ ಮೇಲಿನಿಂದ ಬೇರುಸಹಿತ ಕಿತ್ತೆಸೆಯಲ್ಪಟ್ಟ ಯಾವುದೇ ಸ್ಥಿರತೆ ಇಲ್ಲದ ಕೆಟ್ಟ ವೃಕ್ಷದಂತೆಯೂ ಆಗಿದೆ."**

**"ಅಲ್ಲಾಹನು ಸತ್ಯವಿಶ್ವಾಸಿಗಳಿಗೆ ಐಹಿಕ ಜೀವಿತದಲ್ಲೂ ಪರಲೋಕದಲ್ಲೂ ಸ್ಥಿರವಾದ ವಚನ ಮೂಲಕ ಶಕ್ತಿ ನೀಡುತ್ತಾನೆ. ದುಷ್ಕರ್ಮಿಗಳನ್ನು ಅಲ್ಲಾಹನು ದಾರಿತಪ್ಪಲು ಬಿಟ್ಟುಬಿಡುತ್ತಾನೆ. ಅಲ್ಲಾಹನು ತಾನು ಬಯಸಿದಂತೆ ಮಾಡುತ್ತಾನೆ.** (14 :27, 28).

ವಚನ ಎಂದು ಹೇಳಿದುದು ಒಂದು ಸಿದ್ಧಾಂತದ ಬಗ್ಗೆ, ಒಂದು ವ್ಯವಸ್ಥೆ ಬಗ್ಗೆಯಾಗಿದೆ. ಬೈಬಲಿನ ಯೋಹಾನ ಸುವಾರ್ತೆಯ ಆರಂಭದಲ್ಲಿ ಇದೇ ಪದವನ್ನು ವಿಶಾಲ ಅರ್ಥದಲ್ಲಿ ಹೀಗೆ ಬಳಸಲಾಗಿದೆ: **"ಆದಿಯಲ್ಲಿ ವಾಕ್ಯವಿತ್ತು. ಆ ವಾಕ್ಯವು ದೇವರ ಬಳಿಯಲ್ಲಿತ್ತು."** (ಯೋಹಾನನ ಸುವಾರ್ತೆ 1 :1)

ಕೆಟ್ಟ ಸಿದ್ಧಾಂತಗಳು ಮತ್ತು ಕೆಟ್ಟ ವ್ಯವಸ್ಥೆಗಳು ಕೆಟ್ಟ ಮರದ ಗತಿಯನ್ನು ಹೊಂದುವುವು. ಅವು ಬಾಳಲು ಅರ್ಹವಾಗಲಾರವು ಮತ್ತು ಬಿರುಗಾಳಿಯಿಂದ ಕಿತ್ತೆಸೆಯಲ್ಪಡುವುವು.

ಆರೋಗ್ಯಕರ ವ್ಯವಸ್ಥೆಗೊಳಪಟ್ಟವುಗಳ ಸ್ಥಿತಿ ಆರೋಗ್ಯಭರಿತ ಮರದ ಹಾಗಿರುತ್ತದೆ. ಅದರ ಬೇರುಗಳು ಭೂಮಿಯಲ್ಲಿ ಆಳವಾಗಿಯೂ ದೃಢವಾಗಿಯೂ ಇರುತ್ತವೆ. ಅದರ ಎತ್ತರದಲ್ಲಿರುವ ಕೊಂಬೆಗಳೂ ರೆಂಬೆಗಳೂ ಅತ್ಯಂತ ಶುದ್ಧ ಆಕಾಶದ ವಾತಾವರಣದಲ್ಲಿರುತ್ತವೆ. ಅದು ಆಕಾಶದ ಬೆಳಕಿನಿಂದ ಬೆಳವಣಿಗೆ ಪಡೆದು ಒಳ್ಳೆಯ ರುಚಿಕರ ಫಲಗಳನ್ನು ನೀಡುತ್ತಾ ಇರುತ್ತದೆ. ಪವಿತ್ರ ಖುರ್‌ಆನ್ ಸತ್ಯವಿಶ್ವಾಸಿಗಳ ಬಗ್ಗೆ ಅವರು ದೇವನ ಅಸ್ತಿತ್ವದಲ್ಲಿ ದೃಢ ವಿಶ್ವಾಸ ಹೊಂದಿರುವುದಾಗಿ ವಿವರಿಸುತ್ತದೆ. ಅವರ ಎಲ್ಲ ನೈತಿಕ ಸ್ಥಿತಿಗತಿಗಳು ಈ ವಿಶ್ವಾಸದ ಅಸ್ತಿಭಾರದ ಮೇಲೆ ಸ್ಥಾಪಿತವಾಗಿರುತ್ತವೆ. ನೈತಿಕತೆ ಮತ್ತು ಇಸ್ಲಾಮಿನ ಕಲ್ಪನೆಗೆ ಇದು ಪರಿಪೂರ್ಣತೆ ನೀಡುತ್ತದೆ. ಸಾಮಾಜಿಕ, ಧಾರ್ಮಿಕ ಅಥವಾ ಜನಾಂಗೀಯವಾದ ಯಾವುದೇ ತಾರತಮ್ಯತೆಯನ್ನು ಅದು ಅನುಮತಿಸುವುದಿಲ್ಲ.

ಮನುಷ್ಯನ ಎಲ್ಲ ಚಟುವಟಿಕೆಗಳಿಗೆ ಮಾರ್ಗದರ್ಶನವನ್ನು ಪವಿತ್ರ ಖುರ್‌ಆನ್ ಹೀಗೆ ಸೂಚಿಸಿದೆ:

**"ಆಕಾಶಗಳ ಮತ್ತು ಭೂಮಿಯ ನಿಗೂಢ ವಿಚಾರಗಳು ಅಲ್ಲಾಹನಿಗೆ ಸೇರಿವೆ. ಎಲ್ಲವೂ ಅವನೆಡೆಗೆ ಮರಳುವುವು. ಆದ್ದರಿಂದ ನೀನು ಅವನನ್ನು ಆರಾಧಿಸು. ಅವನ ಮೇಲೆ ಭರವಸೆಯನ್ನಿಡು. ನಿಮ್ಮ ಕೃತ್ಯಗಳ ಬಗ್ಗೆ ನಿನ್ನ ಪ್ರಭು ನಿರ್ಲಕ್ಷ್ಯನಲ್ಲ."** (11 :124).

**"ನಿಶ್ಚಯವಾಗಿಯೂ ಸೃಷ್ಟಿಸುವ ಮತ್ತು ಆಜ್ಞಾಪಿಸುವ ಅಧಿಕಾರ ಅವನಿಗೆ ಸೇರಿದೆ. ಸರ್ವಲೋಕ ಪರಿಪಾಲಕನಾದ ಅಲ್ಲಾಹನು ಅತ್ಯಂತ ಅನುಗ್ರಹಪೂರ್ಣನಾಗಿದ್ದಾನೆ."** (7 :55).

ಎಲ್ಲ ಮುಸ್ಲಿಮ್ ದಾರ್ಶನಿಕರು ಜಗತ್ತಿನ ಸೃಷ್ಟಿಕರ್ತನ ಪರಿಪೂರ್ಣ ಅಧಿಕಾರದ ವಿಶ್ವಾಸದ ಬಗ್ಗೆ ಪ್ರಾರಂಭಿಸಿ ಅದರ ಬಗ್ಗೆಯೇ ಅಂತಿಮವಾಗಿ ಪ್ರಸ್ತಾಪಿಸುತ್ತಾರೆ.

## ಇಸ್ಲಾಮೀ ಸಮಾಜದ ಮೂಲ ತತ್ವಗಳು

ಇದಕ್ಕೆ ಸಂಬಂಧಿಸಿ ಪವಿತ್ರ ಖುರ್‌ಆನಿನ ಮೂಲ ವಚನ ಹೀಗಿದೆ: **"ನ್ಯಾಯ ನಿಷ್ಠೆಗೆ ಬದ್ಧರಾಗಲಿಕ್ಕೂ ಔದಾರ್ಯ ತೋರಿಸಲಿಕ್ಕೂ ನಿಕಟ ಬಂಧುಗಳಿಗೆ ಎಂಬಂತೆ (ಪರರಿಗೂ) ಸಹಾಯ ಮಾಡಲಿಕ್ಕೂ ಅಲ್ಲಾಹನು ಆಜ್ಞಾಪಿಸುತ್ತಾನೆ. ಅಸಭ್ಯತೆಯನ್ನೂ ದುಷ್ಕೃತ್ಯವನ್ನೂ ನಿಯಮೋಲ್ಲಂಘನೆಯನ್ನೂ ಅವನು ನಿಷಿದ್ಧಗೊಳಿಸಿದ್ದಾನೆ. ಈ ಬಗ್ಗೆ ಲಕ್ಷ್ಯಗೊಡಲಿಕ್ಕೆ ಅವನು ನಿಮಗೆ ಉಪದೇಶ ನೀಡುತ್ತಾನೆ."** (ಪವಿತ್ರ ಖುರ್‌ಆನ್ 16 :91).

ಈ ವಚನದ ವ್ಯಾಖ್ಯಾನ ಹೀಗಿದೆ: ನೀವು ನಿಶ್ಚಯವಾಗಿಯೂ ನ್ಯಾಯಪಾಲನೆ ಮಾಡಬೇಕೆಂದು ಮಾತ್ರವಲ್ಲ, ನೀವು ಜನರಿಗೆ ಅವರಿಗೆ ಕೊಡಲಿಕ್ಕಿರುವುದಕ್ಕಿಂತ ಹೆಚ್ಚಿಗೆ ಕೊಡಬೇಕೆಂದು ಅಲ್ಲಾಹನು ಆಜ್ಞಾಪಿಸುತ್ತಾನೆ. ನೀವು ಜನರನ್ನು ನಿಮ್ಮ ನಿಕಟ ಸಂಬಂಧಿಕರೆಂಬಂತೆ ಕಾಣಬೇಕೆಂದೂ ಹಾಗೆ ವರ್ತಿಸಬೇಕೆಂದೂ ಅವನು ಆಜ್ಞಾಪಿಸುತ್ತಾನೆ. ಕೆಡುಕಿನ ಪ್ರದರ್ಶನವನ್ನು ಅವನು ತಡೆಯುತ್ತಾನೆ. ರೇಡಿಯೋ, ಟೆಲಿವಿಷನ್‌ಗಳಲ್ಲಿ ಮಾತ್ರವಲ್ಲ, ಮಾರ್ಗದಲ್ಲಿ ಅನೇಕ ಕಡೆ ನಡೆಯುತ್ತಿರುವ ಕೆಟ್ಟ ಪ್ರದರ್ಶನಗಳನ್ನು ಅವನು ತಡೆಯುತ್ತಾನೆ. ಎಲ್ಲ ಧರ್ಮಗಳು ಮತ್ತು ಮನಸ್ಸಾಕ್ಷಿ ತಪ್ಪೆಂದು ಗಣಿಸುವ ಎಲ್ಲ ಕೆಲಸಗಳನ್ನು ಮತ್ತು ದೇವನಿಗೆ ವಿದ್ರೋಹ ಮಾಡುವ ಮತ್ತು ಅಸ್ತವ್ಯಸ್ತತೆ ಸೃಷ್ಟಿಸುವ ಎಲ್ಲ ಕೆಲಸಗಳನ್ನು ಅಲ್ಲಾಹನು ತಡೆದಿರುತ್ತಾನೆ. ಅಲ್ಲಾಹನು ನಿಮಗೆ ಉಪದೇಶಿಸುವುದು ನೀವು ಈ ಉಪದೇಶದಿಂದ ಪ್ರಯೋಜನ ಪಡೆಯಲಿಕ್ಕಾಗಿದೆ.

ಮೇಲೆ ಉಲ್ಲೇಖಿಸಿದ ಪವಿತ್ರ ಖುರ್‌ಆನಿನ ವಚನದ ಮೊದಲಿನ ಭಾಗ ಸಮಾಜದ ಆರ್ಥಿಕ ಕ್ಷೇತ್ರಕ್ಕೆ ಸಂಬಂಧಿಸಿದೆ. ನ್ಯಾಯಪಾಲನೆ ಬಗ್ಗೆ ಅದು ಇಸ್ಲಾಮಿನ ಸಿದ್ಧಾಂತವನ್ನು ಸ್ಪಷ್ಟವಾಗಿ ವಿವರಿಸುತ್ತದೆ. ಸಮಾಜದ ಬಡವರಿಗೆ ಸಹಾಯ ಮಾಡುವ ಬಗ್ಗೆ ಅದು ಉಪದೇಶಿಸುತ್ತದೆ. ಈ ವಚನದ ಎರಡನೆಯ ಭಾಗ ಸಮಾಜಕ್ಕೆ ಹಿತಕಾರಿಯಾದುದನ್ನು ಪ್ರಸ್ತಾಪಿಸುತ್ತದೆ. ಸಾರ್ವತ್ರಿಕ ಮಾನದಂಡದಿಂದ ಕೆಟ್ಟದೆಂದು ಗಣಿಸಲ್ಪಡುವ ಅಸಭ್ಯ ವರ್ತನೆ, ಅಪಹಾಸ್ಯ, ಅಪಮಾನ ಮತ್ತು ಎಲ್ಲ ರೀತಿಯ ಕೆಡುಕುಗಳನ್ನು ಯಾವುದೇ ಧರ್ಮದ ಉಪದೇಶಕ್ಕೆ ಅನ್ವಯಿಸದ ಹಾಗೆ ಮತ್ತು ಮಾನವರೆಲ್ಲರಿಂದಲೂ ತಿರಸ್ಕರಿಸಲ್ಪಟ್ಟ ಕೆಟ್ಟ ಸಾಮಾಜಿಕ ಕೆಡುಕುಗಳೆಂಬಂತೆ ವರ್ಣಿಸುತ್ತದೆ.

ಇದೇ ರೀತಿ ವಿದ್ರೋಹ ಮತ್ತು ಹಿಂಸಾಚಾರ ಉಂಟುಮಾಡುವ ಎಲ್ಲ ಮನೋಭಾವಗಳನ್ನೂ ಎಲ್ಲ ಸ್ವಭಾವಗುಣಗಳನ್ನೂ ಇಸ್ಲಾಮ್ ನಿಷಿದ್ಧಗೊಳಿಸುತ್ತದೆ. ವಿದ್ರೋಹ ಎಂದರೆ ಯಾವುದಾದರೂ ಸ್ಥಾಪಿತ ವ್ಯವಸ್ಥೆಯನ್ನು ಕೆಡವಿ ಹಾಕಲು ಮಾಡುವ ಪ್ರಯತ್ನವಾಗಿದೆ. ಇಷ್ಟುಮಾತ್ರವಲ್ಲ, ಅರಬಿ ಭಾಷೆಯಲ್ಲಿ **"ಬಗ್‌ಯೀ"** ಎಂಬ ಪದವನ್ನು ಪವಿತ್ರ ಖುರ್‌ಆನಿನಲ್ಲಿ ಸಶಸ್ತ್ರ ವಿದ್ರೋಹ ಮೂಲಕ ಸರಕಾರವನ್ನು ಕೆಡವಿ ಹಾಕುವ ಪ್ರಯತ್ನದ ಬಗ್ಗೆ ಮಾತ್ರವಲ್ಲ, ಸಮಾಜದ ಉನ್ನತ ಮೌಲ್ಯವುಳ್ಳ ಸಂಪ್ರದಾಯಗಳ ವಿರುದ್ಧ ವಿದ್ರೋಹ ಮಾಡುವುದು, ನೈತಿಕ ಮಾನದಂಡಗಳನ್ನು, ಧಾರ್ಮಿಕ ಉಪದೇಶಗಳನ್ನು ಉಲ್ಲಂಘಿಸುವುದು ಇದರಲ್ಲಿ ಸೇರುತ್ತವೆ.

ಮೇಲಿನ ವಚನದಲ್ಲಿ ಕೊನೆಯದಾಗಿ ಈ ಉಪದೇಶ ಮಾನವರ ಹಿತಕ್ಕಾಗಿಯೇ ಇದೆ ಎಂದು ಹೇಳಲಾಗಿದೆ. ಇಸ್ಲಾಮಿನ ಸಾಮಾಜಿಕ ವ್ಯವಸ್ಥೆಯ ಮೂಲ ತತ್ವಗಳು ಇವುಗಳೇ ಆಗಿವೆ. ಈ ವಚನದ ಮೊದಲ ಭಾಗ ಇಸ್ಲಾಮಿನ ಸಾಮಾಜಿಕ ವ್ಯವಸ್ಥೆಯ ಅವಿಭಾಜ್ಯ ಘಟಕವನ್ನು ಸೂಚಿಸುತ್ತದೆ. ಅನ್ಯರ ಕಷ್ಟಗಳ ಬಗ್ಗೆ ಸಂವೇದನ ಹೊಂದದ ಸಮಾಜ, ಮಾನವರ ಹಿತಕ್ಕೋಸ್ಕರ ಕೆಲಸ ಮಾಡಲು ಮುಂದಾಗದ ಸಮಾಜ, ಅದು ಇತರ ವಿಷಯಗಳಲ್ಲಿ ಇಸ್ಲಾಮಿನ ತತ್ವಗಳನ್ನು ಪಾಲಿಸುತ್ತಾ ಇದ್ದರೂ ಇಸ್ಲಾಮೀ ಸಮಾಜ ಎಂದು ಅದನ್ನು ಕರೆಯಲು ಸಾಧ್ಯವಿಲ್ಲ.

ಪವಿತ್ರ ಖುರ್‌ಆನ್ ಇಸ್ಲಾಮ್ ಪ್ರತಿಪಾದಿಸುವ ಸಮಾಜದ ಬೇರೆ ಗುಣಗಳ ಬಗ್ಗೆ ಸಹ ಪ್ರತಿಪಾದಿಸಿದೆ. ಪರಿಶುದ್ಧತೆ, ದೇಶಭಕ್ತಿ, ವಿಶ್ವಾಸಾರ್ಹತೆ ಮತ್ತು ಮನಸ್ಸಿಗೂ ಹೃದಯಕ್ಕೂ ಶಾಂತಿಯನ್ನು ನೀಡುವಂತಹ ಇತರ ಕ್ರಮಗಳನ್ನು ಇಸ್ಲಾಮ್ ಒತ್ತಿ ಹೇಳಿದೆ. ಸುಖ ಗಳಿಸುವ ಹಂಬಲದಲ್ಲಿ ಸಮಾಜ ವ್ಯವಸ್ಥೆ ಕುಸಿದು ಹೋಗದಂತೆ ಅದು ಜಾಗ್ರತೆ ವಹಿಸಿದೆ. ಆದುದರಿಂದ ಒಂದು ನಡೆವಳಿಕೆ ಪ್ರಾರಂಭದಲ್ಲಿ ನಿಷ್ಕಳಂಕವೆಂದು ತೋರಬಹುದಾದರೂ ಕೊನೆಗೆ

ಅಶ್ಲೀಲತೆಯಲ್ಲಿ ಕೊನೆಗೊಳ್ಳಬಹುದಾದ ಪ್ರವೃತ್ತಿಗಳನ್ನು ನಿರುತ್ಸಾಹ ಪಡಿಸಲಾಗಿದೆ. ನಿಯಂತ್ರಣರಹಿತ ನಡೆವಳಿಕೆಯಿಂದ ಸಮಾಜಕ್ಕೆ ಬಹಳ ಮತ್ತು ಅನೇಕ ವಿಧಗಳಲ್ಲಿ ಹಾನಿ ಉಂಟಾಗಬಹುದಾಗಿದೆ. ಅಂತಹ ಸಮಾಜಗಳು ಇಂದು ಮುಕ್ತ ಲೈಂಗಿಕ ನಡೆವಳಿಕೆಗೆ ಗುರಿಯಾಗಿವೆ. ಇದರಿಂದ ಕುಟುಂಬ ಸಂಬಂಧಗಳು ನಾಶವಾಗುತ್ತಿವೆ. ಇದಕ್ಕೆದುರಾಗಿ ಇಸ್ಲಾಮ್ ಪಿತೃ ಸಂಬಂಧ, ಮಾತೃ ಸಂಬಂಧ, ಸಹೋದರ ಸಹೋದರಿ ಸಂಬಂಧ, ಪುತ್ರ ಪುತ್ರಿಯರೊಂದಿಗೆ ಸಂಬಂಧ ಇವುಗಳನ್ನು ಬಲಯುತವಾಗಿ ಕಾಪಾಡುತ್ತದೆ. ಇಸ್ಲಾಮ್ ಎಂತಹ ಸ್ನೇಹ ಸಂಬಂಧವನ್ನು ಪ್ರೋತ್ಸಾಹಿಸುತ್ತದೆ ಎಂದರೆ ಅದು ಶಾರೀರಿಕವಾದುದಕ್ಕಿಂತ ಹೆಚ್ಚಾಗಿ ಆಧ್ಯಾತ್ಮಿಕವಾಗಿರುತ್ತದೆ.

## ಚಾರಿತ್ರ್ಯ

ಮಹಿಳೆಯರಲ್ಲಿ ಚಾರಿತ್ರ್ಯ, ಪಾತಿವ್ರತ್ಯ, ಸಂಯಮನದಿಂದ ಕೂಡಿದ ಸ್ವಚ್ಛ ಜೀವಿತವನ್ನು ಬೆಳೆಸಲು ಇಸ್ಲಾಮ್ ಯೋಜಿಸಿದೆ. ಲೈಂಗಿಕ ಆಕಾಂಕ್ಷೆಗಳು ಅಡ್ಡದಾರಿಗೆ ಹೋಗುವ ಅಪಾಯಗಳನ್ನು ಇಸ್ಲಾಮ್ ತಡೆಗಟ್ಟಿ ಚಾರಿತ್ರ್ಯ ಭರಿತ ಜೀವಿತ ನಡೆಸಲು ಒತ್ತಿ ಹೇಳುತ್ತದೆ. ಇಸ್ಲಾಮ್ ಬೋಧಿಸುವ ಈ ಉಪದೇಶ ಕುಟುಂಬ ಜೀವಿತವನ್ನು ರಕ್ಷಿಸಲು ಅತ್ಯಾವಶ್ಯಕವಾಗಿದೆ. ಇದು ಈಗ ಅತ್ಯಂತ ಮುಖ್ಯ ಆವಶ್ಯಕತೆಯಾಗಿದೆ. ಇಸ್ಲಾಮ್ ಕುಟುಂಬದ ಗಾತ್ರವನ್ನು ಮಿತಿಗೊಳಿಸದೆ ಅದನ್ನು ವಿಸ್ತಾರಗೊಳಿಸಲು ಉದ್ದೇಶಿಸುತ್ತದೆ. ಪ್ರೀತಿಸಲು ಮತ್ತು ಪ್ರೀತಿಸಲ್ಪಡಲು ಕೇವಲ ಲೈಂಗಿಕ ಆಶೆಗಳ ಪೂರೈಕೆಯ ಮೂಲಕ ಮಾತ್ರವಲ್ಲ, ನಿಕಟ ಬಂಧುಗಳೊಂದಿಗೆ ಇರುವ ಪ್ರೀತಿಯನ್ನು ಬೆಳೆಸಲು ಇಸ್ಲಾಮ್ ಬಯಸುತ್ತದೆ.

ಸಮಾಜದಲ್ಲಿ ಅನಿಯಂತ್ರಿತ ಲೈಂಗಿಕ ಸುಖ ಪಡೆಯಲು ಅನುಮತಿ ನೀಡಿದರೆ ಅದರಿಂದ ಮಾನವನ ಬಲಹೀನತೆ ಅದನ್ನು ದುರುಪಯೋಗಪಡಿಸುವುದನ್ನು ಆಧುನಿಕ ಕಾಲದ ಬುದ್ಧಿಜೀವಿಗಳು ಗಮನಿಸದೆ ಇರುವುದು ಆಶ್ಚರ್ಯಕರವಾಗಿದೆ. ಇತರ ಸುಸಂಸ್ಕೃತ ಮೌಲ್ಯಗಳು ಅದರಿಂದ ಧ್ವಂಸಗೊಳಿಸಲ್ಪಡುತ್ತವೆ. ಅದು ಪರೋಪ ಜೀವಿಯ ಹಾಗೆ ಅವುಗಳ ರಕ್ತ ಹೀರುತ್ತದೆ. ಸಿಗ್ಮಂಡ್ ಫ್ರಾಯ್ಡ್ ಎಂಬ ಮನಶ್ಶಾಸ್ತ್ರಜ್ಞ ಇಂತಹ ಸಮಾಜದ ವ್ಯಕ್ತಿಯಾಗಿದ್ದನು. ಅವನು ಮನುಷ್ಯರ ಪ್ರತಿಯೊಂದು ಚಟುವಟಿಕೆಯನ್ನು ಲೈಂಗಿಕತೆಯ ಬಣ್ಣದ ಕನ್ನಡಕದ ಮೂಲಕ ನೋಡಿದನು. ಮಗು – ತಾಯಿ ಸಂಬಂಧದಂತಹ ಅತ್ಯಂತ ಪವಿತ್ರ ಸಂಬಂಧ ಕೂಡ ಲೈಂಗಿಕತೆಗೆ ಸಂಬಂಧಿಸಿದೆ ಎಂದು ಅವನು ಹೇಳಿದನು. ತಂದೆ – ಮಗಳು ಸಂಬಂಧ ಸಹ ಅವನ ದೃಷ್ಟಿಯಲ್ಲಿ ಪಾವನವಲ್ಲ. ಮನುಷ್ಯನು ಮಾಡುವ ಪ್ರತಿಯೊಂದು ಕೆಲಸ ಅವನಿಗೆ ತಿಳಿದಿದ್ದರೂ ಇಲ್ಲದಿದ್ದರೂ ಅವನ ಅರೆಪ್ರಜ್ಞಾವಸ್ಥೆಯ ಲೈಂಗಿಕ ಆಶೆಗಳನ್ನು ಈಡೇರಿಸಲಿಕ್ಕಾಗಿದೆ. ಅವನ ಕಾಲದಲ್ಲಿ ಸಮಾಜದಲ್ಲಿ ಇಂದಿನಂತೆ ಕ್ರಮರಹಿತ ಲೈಂಗಿಕ ಸ್ಥಿತಿ ಇದ್ದಿತೋ ಎಂದು ನಾನು ಆಶ್ಚರ್ಯಪಡುತ್ತೇನೆ. ಆದರೆ ಆಗಿನ ಸಮಾಜದ ಸ್ಥಿತಿ ಹೇಗಿತ್ತೆಂದರೆ ಮನುಷ್ಯನ ಪ್ರಕೃತಿಗೆ ಲೈಂಗಿಕತೆಯಿಂದ ನಿಯಂತ್ರಣ ಲಭಿಸುತ್ತದೆ ಎಂದು ಭಾವಿಸುವ ಸ್ಥಿತಿಯಲ್ಲಿತ್ತು. ಸಿಗ್ಮಂಡ್ ಫ್ರಾಯ್ಡ್ ಹೇಳಿದುದು ಸರಿಯಾಗಿದ್ದರೆ ಇಂತಹ ಅಪಾಯಕಾರಿ ಶಕ್ತಿಗಳು ಅನಿಯಂತ್ರಿತವಾಗಿ ವರ್ತಿಸಲು ಅನುಮತಿಸಬಾರದೆಂಬುದು ಅತ್ಯಂತ ಮುಖ್ಯವಾಗಿದೆ.

ದುರದೃಷ್ಟಕರವಾದುದೇನೆಂದರೆ, ಇಂದಿನ ಆಧುನಿಕ ಸಮಾಜ ಇಸ್ಲಾಮಿನ ಸಮಾಜ ವ್ಯವಸ್ಥೆ ಬಗ್ಗೆ ಅರಿಯಲು ಯಾವ ಪ್ರಯತ್ನವನ್ನೂ ಮಾಡಲಾರದು. ದೇವನು ಮನುಷ್ಯನಿಗೆ ಸಂಬಂಧಿಸಿದ ವಿಷಯಗಳಲ್ಲಿ ಮತ್ತು ಮನುಷ್ಯನ ಅದೃಷ್ಟದ ರೂಪೀಕರಣದಲ್ಲಿ ಪಾತ್ರವಹಿಸುವುದನ್ನು ಮನುಷ್ಯನು ಅಂಗೀಕರಿಸಿದರೂ ಅಂಗೀಕರಿಸದಿದ್ದರೂ ದೇವನು ಅವತೀರ್ಣಗೊಳಿಸಿದ ಉಪದೇಶಗಳ ಪ್ರಕಾರ ಮನುಷ್ಯನು ತನ್ನ ಸಾಮಾಜಿಕ ನಡೆವಳಿಕೆಗಳನ್ನು ನಡೆಸಲು ಒಪ್ಪಿದರೂ ಒಪ್ಪದಿದ್ದರೂ ಒಂದು ವಿಷಯ ಸ್ಪಷ್ಟವಾಗಿದೆ. ದೇವನ ಕೃತ್ಯ (ಅಂದರೆ ಪ್ರಕೃತಿ) ಮತ್ತು ದೇವನ ವಚನವನ್ನು (ಎಂದರೆ ಅವತೀರ್ಣಗೊಂಡ ಸತ್ಯವನ್ನು) ಸೋಲಿಸಲು ಮನುಷ್ಯನಿಗೆ ಸಾಧ್ಯವಿಲ್ಲ. ದೇವನ ಕೃತ್ಯ ಮತ್ತು ದೇವನ ವಚನ ಪರಸ್ಪರ ಸಾಮರಸ್ಯ ಹೊಂದಿವೆ. ಅವುಗಳೆರಡು ಸಹ ಪ್ರಬಲವಾಗಿವೆ. ದೇವ ವಚನಕ್ಕೆ ವಿರುದ್ಧವಾಗಿ ರೂಪಿಸುವ ಸಾಮಾಜಿಕ ವ್ಯವಸ್ಥೆ ಖಂಡಿತವಾಗಿಯೂ ನಾಶವಾಗುವುದು.

ಮನುಷ್ಯನು ಎಷ್ಟು ಆಶಿಸಿದರೂ ಅನಿಯಂತ್ರಿತ ಮತ್ತು ಅಪರಿಮಿತ ಸುಖವನ್ನು ಪಡೆಯಲಾರ. ಅವನು ಕೆಲವು ಮೌಲ್ಯಗಳನ್ನು ಮತ್ತು ಆಯ್ಕೆಗಳನ್ನು ಬದಲಾಯಿಸಿಕೊಳ್ಳಲು ಮಾತ್ರ ಸಾಧ್ಯವಾಗುವುದು. ಮಾದಕ ದ್ರವ್ಯ ಸೇವನೆ ಮೂಲಕ ಜೀವನದ ಹೊಣೆಗಾರಿಕೆಗಳನ್ನು ವಾಸ್ತವಿಕತೆಗಳಿಂದ ತಪ್ಪಿಸಿಕೊಂಡು ಹೋಗಲು ಬಯಸುವ ಸಮಾಜ, ಲೈಂಗಿಕತೆಯಿಂದ, ವ್ಯರ್ಥ ಉತ್ತೇಜನಗಳಿಂದ ಮತ್ತು ಆಹ್ಲಾದಗಳಿಂದ ನಿರಂತರ ವ್ಯಾಮೋಹಕ್ಕೊಳಗಾದ ಸಮಾಜ, ಹೊಸ ಉಪಕರಣಗಳಿಗೋಸ್ಕರ ಮತ್ತು ಸುಖ ನೀಡುವ ಆಟಿಕೆಗಳಿಗೋಸ್ಕರ ಅವು ಹೆಚ್ಚು ಆಶೆ ಉಂಟಾಗುವಂತೆ ಮಾಡುವುದೇ ಹೊರತು ಆಶೆಯನ್ನು ಈಡೇರಿಸುವವುಗಳಾಗದಿದ್ದರೂ ಅವುಗಳಿಗೋಸ್ಕರ ಮನುಷ್ಯರ ಆಶಾಭಿಲಾಷೆಗಳನ್ನು ವಿಕೃತಗೊಳಿಸಲಾದ ಸಮಾಜ, ಧನ ಸಂಗ್ರಹದ ಏಕ ಮಾತ್ರ ಉದ್ದೇಶದಿಂದ ಶಕ್ತಿಶಾಲಿ ವ್ಯಾಪಾರ ಸಂಸ್ಥೆಗಳು ನಡೆಸುವ ವ್ಯಾಪಾರ ಸಂಕೀರ್ಣಗಳನ್ನು ಹೊಂದಿದ ಸಮಾಜ, ಇಂತಹ ಸಮಾಜ ಮಾನವನ ಉನ್ನತ ಮೌಲ್ಯಗಳು, ಮಾನಸಿಕ ನೆಮ್ಮದಿ ಮತ್ತು ಭದ್ರತೆಗೆ ಬದಲಾಗಿ ಇವುಗಳನ್ನು ಹೊಂದುತ್ತವೆ. ಇವೆರಡನ್ನೂ ಒಂದೇ ಸಾರಿ ಗಳಿಸಲಾಗದು.

ಇಸ್ಲಾಮ್ ಪ್ರತಿಪಾದಿಸುವುದು ಮಾನಸಿಕ ಶಾಂತಿ ಮತ್ತು ಭದ್ರತೆಯನ್ನು ಕಳೆದುಕೊಂಡು ಸುಖಪಡೆಯುವುದನ್ನಲ್ಲ. ಮಾನವರ ಕೀಳು ಮನೋವೃತ್ತಿಯನ್ನು ತಡೆಯದಿದ್ದರೆ ಅದರಿಂದ ಕುಟುಂಬ ಸಂಬಂಧಕ್ಕೆ ಭಂಗವುಂಟಾಗುವುದು, ಸ್ವಾರ್ಥಾಸಕ್ತಿ ಬೆಳೆಯುವುದು, ಹೊಣೆಗೇಡು, ಅಶ್ಲೀಲತೆ, ಅಪರಾಧ, ಹಿಂಸೆ ವರ್ಧಿಸುವುದು.

ಎರಡು ಬೇರೆ ಬೇರೆ ಸಿದ್ಧಾಂತಗಳಿಂದ ಸೃಷ್ಟಿಸಲ್ಪಡುವ ವಾತಾವರಣ ಪರಸ್ಪರ ವಿರುದ್ಧವಾಗಿರುತ್ತವೆ. ಜನರಲ್ಲಿ ಆಶೆಗಳನ್ನು ಉದ್ರೇಕಿಸಿ ಅವರ ಆಶೆಗಳನ್ನು ಈಡೇರಿಸಲು ಸಮಾಜದಲ್ಲಿ ಪೂರ್ಣ ಸ್ವಾತಂತ್ರ್ಯ ನೀಡಿದರೆ ಶಾಶ್ವತ ಶಾಂತಿ ಲಭಿಸುವುದೆಂಬ ವಾಗ್ದಾನ ಕೆಲವರು ನೀಡುತ್ತಿರುವುದು ನನ್ನನ್ನು ಆಶ್ಚರ್ಯಗೊಳಿಸುತ್ತದೆ. ಯಾವುದೇ ಸಮಾಜ ಅದು ಲೋಕದಲ್ಲಿ ಎಷ್ಟು ಬಲಶಾಲಿಯಾಗಿದ್ದರೂ ಅಪರಿಮಿತವಾಗಿ ಲೈಂಗಿಕ ಆಶೆಗಳು ಬೆಳೆಯುವುದನ್ನು ಬೆಂಬಲಿಸಲು ಸಾಧ್ಯವಾಗದು.

ಅತ್ಯಂತ ಐಶ್ವರ್ಯವಂತ ಸಮಾಜಗಳಲ್ಲೂ ಬಡವರೂ ಶ್ರೀಮಂತರೂ ಇರುತ್ತಾರೆ. ಜೀವಿಸಲು ಅತ್ಯಾವಶ್ಯಕವಾದ ಅನುಕೂಲತೆಗಳು ಸಾಕಷ್ಟು ಇಲ್ಲದವರ ಸಂಖ್ಯೆ ಹೆಚ್ಚಿಗೆ ಇರುತ್ತವೆ. ಅವರಿಗಿಂತ ಕಡಿಮೆ ಸಂಖ್ಯೆಯ ಜನರು ತಮ್ಮ ಬಯಕೆ ಪ್ರಕಾರ ಖರೀದಿಸಲು ಶಕ್ತಿ ಹೊಂದಿರುತ್ತಾರೆ. ಆದರೆ ಇದು ಸಹ ಸಂಪೂರ್ಣ ಸತ್ಯವಲ್ಲ. ಏಕೆಂದರೆ ಸಂಪತ್ತು ವರ್ಧಿಸಿದ ಹಾಗೆ ಆಶೆಗಳು ವರ್ಧಿಸುತ್ತಾ ಹೋಗುತ್ತವೆ. ಆದುದರಿಂದ ಅತ್ಯಂತ ದೊಡ್ಡ ಶ್ರೀಮಂತರು ಸಹ ತಮ್ಮ ಎಲ್ಲ ಆಶೆಗಳನ್ನು ಈಡೇರಿಸಿಕೊಳ್ಳಲು ಸಮರ್ಥರಾಗುವುದಿಲ್ಲ. ಆದರೆ ಅವರಿಗಿಂತ ಕಡಿಮೆ ಹಂತದ ಜನರ ಸ್ಥಿತಿ ಬಹಳ ಕೆಟ್ಟದಾಗಿರುತ್ತದೆ. ಅವರಿಗೆ ಜೀವಿತದ ಅತ್ಯಾವಶ್ಯಕತೆಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಐಶ್ವರ್ಯವಂತ ಸಮಾಜದ ಸುಖ ಸಾಮಗ್ರಿಗಳು ಅವರಿಗೆ ಎಟುಕುವುದಿಲ್ಲ. ಆಧುನಿಕ ಸಂಪರ್ಕ ಮಾಧ್ಯಮಗಳು ಬಡವರ ಭಾವನೆಗಳನ್ನು ಮತ್ತು ಆಶೆಗಳನ್ನು ಹಾಳುಗೆಡವುತ್ತವೆ. ಅವರ ಕೊಳಚೆಗೇರಿಗಳಿಗೆ ಭವ್ಯ ಅರಮನೆಗಳಂತಹ ಮನೆಗಳ, ವಿಶಾಲ ತೋಟಗಳ, ಐಶಾರಾಮಿ ಕಾರುಗಳ, ಹೆಲಿಕಾಪ್ಟರ್‌ಗಳ, ಖಾಸಗಿ ವಿಮಾನಗಳ ಮತ್ತು ಪರಿಚಾರಕ ದಳದ ಚಿತ್ರವನ್ನು ತಂದು ರಾತ್ರಿ ಹಗಲು ಪ್ರದರ್ಶಿಸುತ್ತವೆ. ಹಾಲಿವುಡ್ ಮತ್ತು ಬೆವೆರ್ಲೇ ಹಿಲ್ಸ್ ಮತ್ತು ಅವುಗಳ ವಿನೋದ ಕೂಟಗಳು, ನೃತ್ಯಗಳು, ಆಟ ಸ್ಪರ್ಧೆ ನಡೆಸುವ ಕೂಟಗಳು, ಜುಗಾರಿ ಕೇಂದ್ರಗಳ ಜೀವಿತ ಶೈಲಿ, ಮತ್ತಿತ್ತರ ಆಧುನಿಕ ವಿನೋದ ದೃಶ್ಯಗಳು ಬಡವರನ್ನು ಕೆಡುಕಿಗೆ ಪ್ರೇರೇಪಿಸುವಂಥವುಗಳಾಗಿವೆ. ಹೀಗಿದ್ದರೂ ಶ್ರೀಮಂತರಲ್ಲಿ ಬಹಳ ಕಡಿಮೆ ಜನರು ಇಂತಹ ಭೂಲೋಕ ಸ್ವರ್ಗವನ್ನು ಕನಸುಗಾಣಲು ಶಕ್ತರಾಗುತ್ತಾರೆ.

ಇಂತಹ ದೃಶ್ಯಗಳನ್ನು ಕಾಣುವ ಜನರು ತಮ್ಮ ಬಡ ಒರಟು ನಿವಾಸಿಗಳ ಬಗ್ಗೆ ಆಸಕ್ತಿಯನ್ನು ಖಂಡಿತವಾಗಿಯೂ ಕಳೆದುಕೊಳ್ಳುತ್ತಾರೆ. ಮನೆ ಮತ್ತು ಕುಟುಂಬದ ಬಗ್ಗೆ ಆಸಕ್ತಿ ಕಳೆದುಕೊಳ್ಳುತ್ತಾರೆ. ಸಂಸ್ಕೃತಿ ಮತ್ತು ನಾಗರಿಕತೆಯ ಕೊರತೆ ಈ ಸುಂದರ ದೃಶ್ಯಗಳ ಎದುರಿಗೆ ನಿಲ್ಲುತ್ತದೆ. ಅವರ ಜೀವಿತದ ಯಥಾರ್ಥ ಸ್ಥಿತಿ ಅರ್ಥಶೂನ್ಯವಾಗುತ್ತದೆ. ಇಂತಹ ಜನರಿಗೆ ಮನೆಯಲ್ಲಿ ಶಾಂತಿಯು ಅಪ್ರತ್ಯಕ್ಷವಾಗುತ್ತದೆ. ಮುಂದೆ ಜೀವಿಸಲು ಅವರಿಗೆ ಏನೂ ಇರುವುದಿಲ್ಲ.

ಸಾಂಪ್ರದಾಯಿಕ ಕುಟುಂಬ ಸಂಬಂಧಗಳನ್ನು ಸ್ಥಾಪಿಸಿ ಕುಟುಂಬದ ಸದಸ್ಯರನ್ನು ಪರಸ್ಪರ ವಿಶ್ವಾಸ, ನಂಬಿಕೆ ಮತ್ತು ಪ್ರೀತಿ ವಿಶ್ವಾಸಗಳಿಂದ ಒಗ್ಗೂಡಿಸಲು ಒಂದಕ್ಕಿಂತ ಹೆಚ್ಚು ಕ್ರಮಗಳನ್ನು ಕೈಗೊಳ್ಳಬೇಕಾಗಬಹುದು. ಇದರ ಬಗ್ಗೆ ಮಾತನಾಡಲು ಪ್ರಾಯಶಃ ಈಗ ಸಮಯ ಮೀರಿಹೋಗಿದೆ.

ಇಸ್ಲಾಮ್ ಸ್ಪಷ್ಟ ಸಂದೇಶ ನೀಡುತ್ತದೆ. ಸಾರ್ವತ್ರಿಕವಾದ ಕುಟುಂಬ ವ್ಯವಸ್ಥೆಯನ್ನು ಸಂರಕ್ಷಿಸಲು ಮತ್ತು ನಾಶವಾದ ಕಡೆಗಳಲ್ಲಿ ಪುನಃ ಸ್ಥಾಪಿಸಲು ಅದರ ಬಳಿ ಸ್ಪಷ್ಟವಾಗಿ ವಿವರಿಸಲಾದ ಯೋಜನೆಯಿದೆ.

ಇಸ್ಲಾಮ್ ಪ್ರಕಾರ ಸತ್ಯವಿಶ್ವಾಸ ಮತ್ತು ಮನವರಿಕೆ ಮೂಲಕ ಶಿಸ್ತನ್ನು ಎಲ್ಲ ಸಾಮಾಜಿಕ ಚಟುವಟಿಕೆಗಳಲ್ಲಿ ಸ್ಥಾಪಿಸಿ ನಷ್ಟವಾದ ಸಮತೋಲನವನ್ನು ಪುನಃ ಪಡೆಯಬಹುದಾಗಿದೆ.

## ಪುರುಷ ಮತ್ತು ಮಹಿಳೆಯರ ಬೇರ್ಪಡಿಸುವಿಕೆ

ಪಶ್ಚಿಮ ದೇಶಗಳ ಜನರು ಇಸ್ಲಾಮಿನ ಪರ್ದಾ ಸಂಪ್ರದಾಯವನ್ನು ಬಹಳ ಹೆಚ್ಚಾಗಿ ತಪ್ಪಾಗಿ ಗ್ರಹಿಸಿ ಅದನ್ನು ಪುರುಷರ ಮತ್ತು ಮಹಿಳೆಯರ ಬೇರ್ಪಡಿಸುವಿಕೆ ಎಂದು ಭಾವಿಸುತ್ತಾರೆ. ಇದಕ್ಕೆ ಕಾರಣ ಇಸ್ಲಾಮಿನ ನೈಜ ತತ್ವಗಳನ್ನು ಮುಸ್ಲಿಮ್ ಲೋಕದ ಅನೇಕ ಭಾಗಗಳಲ್ಲಿ ತಪ್ಪಾಗಿ ಅನುಷ್ಠಾನಕ್ಕೆ ತರುವುದರಿಂದ ಮತ್ತು ಪಾಶ್ಚಿಮಾತ್ಯ ಮಾಧ್ಯಮಗಳು ಇಸ್ಲಾಮಿನ ಬಗ್ಗೆ ಋಣಾತ್ಮಕ ನಿಲುವನ್ನು ಹೊಂದಿರುವುದರಿಂದಾಗಿದೆ. ಎಲ್ಲಿಯಾದರೂ ವಿಕೃತ ಕುರೂಪವನ್ನು ಕಂಡರೆ ಅದನ್ನು ಇಸ್ಲಾಮಿನೊಂದಿಗೆ ಸಂಬಂಧಪಡಿಸಿ ಪಾಶ್ಚಿಮಾತ್ಯ ಸಂಪರ್ಕ ಮಾಧ್ಯಮಗಳು ಪ್ರಚಾರಗೊಳಿಸುತ್ತವೆ. ಆದರೆ ಯಹೂದಿಯರ, ಕ್ರೈಸ್ತರ, ಬೌದ್ಧರ ಮತ್ತು ಹಿಂದುಗಳ ಕೆಟ್ಟ ವರ್ತನೆಗಳನ್ನು ಅವರ ಧರ್ಮಗಳಿಗೆ ಸಂಬಂಧಪಡಿಸಿ ಹೇಳುವುದಿಲ್ಲ.

ಪುರುಷರು ಮತ್ತು ಮಹಿಳೆಯರು ಬೇರೆಯಾಗಿರುವ ಬಗ್ಗೆ ಇಸ್ಲಾಮಿನ ಆಜ್ಞೆಗಳು ದಾಟಿಹೋದ ಅಂಧಕಾರ ಯುಗಗಳ ಸಂಕುಚಿತ ಮನೋಭಾವದಿಂದ ಖಂಡಿತವಾಗಿ ಉಂಟಾದವುಗಳಲ್ಲ. ವಾಸ್ತವಿಕವಾಗಿ, ಅನಿಯಂತ್ರಿತ ಲೈಂಗಿಕತೆಯ ಪ್ರಶ್ನೆ ಹಿಂದಿನ ಕಾಲಕ್ಕೆ ಅಥವಾ ಆಧುನಿಕ ಕಾಲಕ್ಕೆ ಸಂಬಂಧಿಸಿ ಅದು ಕಾಲಘಟ್ಟದ ಹಿಂದುಳಿಯುವಿಕೆ ಅಥವಾ ಮುಂದುವರಿಕೆಗೆ ಸೀಮಿತವಾಗಿಲ್ಲ. ವಿವಿಧ ಸಮಾಜಗಳು ಚರಿತ್ರೆಯ ವಿವಿಧ ಘಟ್ಟಗಳಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಅಲೆಗಳ ಶಿಖರಗಳಲ್ಲಿದ್ದುವು ಅಥವಾ ಅವುಗಳ ಆಳಗಳನ್ನು ತಲಪಿದ್ದುವು.

ಸ್ತ್ರೀ ಸ್ವಾತಂತ್ರ್ಯ ಚಳುವಳಿ ಎನ್ನುವುದು ಮಾನವ ಸಮಾಜದ ಪ್ರಗತಿಯ ದ್ಯೋತಕವಲ್ಲ. ಬಹಳ ಪುರಾತನ ಕಾಲದಲ್ಲೂ ಇತ್ತೀಚೆಗಿನ ಕಾಲದಲ್ಲೂ ಮಾನವನ ಚರಿತ್ರೆಯಲ್ಲಿ ಮಹಿಳೆಯರು ಬಹಳ ಶಕ್ತಶಾಲಿಯಾದ ಮುಖ್ಯ ಪಾತ್ರವನ್ನು ಲೋಕದ ವಿವಿಧ ಭಾಗಗಳ ಸಮಾಜಗಳಲ್ಲಿ ವಹಿಸಿದ್ದರೆಂಬುದರ ಬಗ್ಗೆ ಪ್ರಬಲ ಸಾಕ್ಷ್ಯಗಳಿವೆ.

ಸ್ವತಂತ್ರ ಮತ್ತು ಅನಿಯಂತ್ರಿತವಾಗಿ ಪುರುಷ ಮತ್ತು ಮಹಿಳೆಯರಲ್ಲಿ ಸಂಭೋಗ ಹೊಸದೇನೂ ಅಲ್ಲ. ನಾಗರಿಕತೆಗಳು ಜನ್ಮತಾಳಿದುವು ಮತ್ತು ಅಳಿದು ಹೋದುವು. ಒಂದು ಶೈಲಿಯಿಂದ ಇನ್ನೊಂದು ಶೈಲಿಗೆ ಸ್ವಭಾವಗುಣಗಳು ಬದಲಾಯಿಸುತ್ತಾ ಇದ್ದುವು. ಅಸಂಖ್ಯಾತ ಸಾಮಾಜಿಕ ಒಲವುಗಳು ವಿವಿಧ ರೂಪಗಳನ್ನು ಹೊಂದಿ ಹೊಸ ಪ್ರಯೋಗದಿಂದ ಹೊಸ ರೂಪವನ್ನು ವಿವಿಧ ಕಾಲಘಟ್ಟಗಳಲ್ಲಿ ಪಡೆಯುತ್ತಿದ್ದುವು. ಆದರೆ ಸಮಾಜವು ಪುರುಷ ಮತ್ತು ಮಹಿಳೆಯ ಬೇರ್ಪಡಿಸುವಿಕೆಯಿಂದ ಅನಿಯಂತ್ರಿತ ಲೈಂಗಿಕ ಜೀವಿತಕ್ಕೆ ಬದಲಾಯಿಸಿದ ಬಗ್ಗೆ ಮತ್ತು ಬಂಧನದಿಂದ ವಿಮೋಚನೆಗೆ ಮತ್ತು ಮಹಿಳೆಯ ಸ್ವಾತಂತ್ರ್ಯಕ್ಕೆ ಸಾಗಿದುದಾಗಿ ಚರಿತ್ರೆಯಿಂದ ತಿಳಿದು ಬರುವುದಿಲ್ಲ.

## ಮಹಿಳೆಯರ ಹಕ್ಕುಗಳ ಹೊಸಯುಗದ ಉದಯ

ಇಸ್ಲಾಮ್ ಧರ್ಮವು ಜನಿಸುವಾಗ ಅರಬ್ ದೇಶದ ಅಂಧಕಾರಮಯ ಕಾಲಘಟ್ಟದ ಕಡೆಗೆ ನಮ್ಮ ಶ್ರದ್ಧೆಯನ್ನು ಈಗ

ಕೇಂದ್ರೀಕರಿಸುವುದು ಯೋಗ್ಯವಾಗಿದೆ. ಮುಸ್ಲಿಮರಾದ ನಾವು ಇಸ್ಲಾಮ್ ಅಸ್ತಿತ್ವಕ್ಕೆ ಬಂದುದು ದೇವನು ಅವತೀರ್ಣಗೊಳಿಸಿದ ಉಪದೇಶಗಳ ಪ್ರಕಾರ ಎಂದು ನಂಬುತ್ತೇವೆ. ಆದರೆ ಮುಸ್ಲಿಮೇತರರು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸ್ವಂತ ಉಪದೇಶಗಳೆಂದು ಹೇಳುತ್ತಾರೆ. ಕೆಲವು ಮತಪಂಡಿತರು ಏನು ಬೇಕಾದರೂ ಹೇಳಲಿ, ಪುರುಷರ ಮತ್ತು ಮಹಿಳೆಯರ ಬೇರ್ಪಡಿಸುವಿಕೆ ಬಗ್ಗೆ ಇಸ್ಲಾಮ್ ನೀಡುವ ಉಪದೇಶಗಳು ಅರಬಿ ನಡೆವಳಿಕೆಯನ್ನು ಪ್ರತಿನಿಧೀಕರಿಸುವುದಿಲ್ಲ.

ಆ ಕಾಲಘಟ್ಟದ ಅರಬ್ ದೇಶದ ಸಮಾಜದಲ್ಲಿ ಮಹಿಳೆಯರ ಬಗ್ಗೆ ಅವರ ವರ್ತನೆ ಅತ್ಯಂತ ವಿರೋಧಾಭಾದಿಂದ ಕೂಡಿತ್ತು. ಒಂದು ಕಡೆ ಲೈಂಗಿಕ ಸ್ವಾತಂತ್ರ್ಯ, ಸ್ತ್ರೀ ಪುರುಷರು ಮದ್ಯಪಾನದ ಹುಚ್ಚು ಕೂಟಗಳಲ್ಲಿ ಜೊತೆಗೂಡಿ ಭಾಗವಹಿಸುತ್ತಿದ್ದರು. ಮದ್ಯ, ಮಹಿಳೆ ಮತ್ತು ಪದ್ಯ ಅರಬ್ ಸಮಾಜದ ಮುಖ್ಯ ವಿಷಯಗಳಾಗಿದ್ದುವು. ಇನ್ನೊಂದು ಕಡೆ ಹೆಣ್ಣು ಶಿಶುವಿನ ಜನನ ಅತ್ಯಂತ ಅಪಮಾನಕರವೆಂದು ಗಣಿಸಲಾಗುತ್ತಿತ್ತು. ಕೆಲವು 'ಅಭಿಮಾನಿ' ಅರಬಿಗಳು ತಮ್ಮ ಹೆಣ್ಣು ಶಿಶುಗಳನ್ನು ಜೀವಂತವಾಗಿ ಹೂಳಿ ಅಪಮಾನದಿಂದ ರಕ್ಷಣೆ ಪಡೆಯಲು ಪ್ರಯತ್ನಿಸುತ್ತಿದ್ದರು.

ಮಹಿಳೆಯರನ್ನು ಸಾಮಗ್ರಿಗಳ ಹಾಗೆ ಕಾಣಲಾಗುತ್ತಿತ್ತು. ಪತಿ, ಪಿತ ಮತ್ತು ಇತರ ಪುರುಷ ಸಂಬಂಧಿಕರ ಅಭಿಪ್ರಾಯದ ವಿರುದ್ಧ ಅಭಿಪ್ರಾಯ ಸೂಚಿಸುವ ಸ್ವಾತಂತ್ರ್ಯ ಅವರಿಗಿರಲಿಲ್ಲ. ಆದರೆ ಕೆಲವು ಅಪವಾದಗಳೂ ಇದ್ದುವು. ಕೆಲವು ಸಾರಿ ನಾಯಕತ್ವದ ಅತಿ ಹೆಚ್ಚಿನ ಸಾಮರ್ಥ್ಯ ಹೊಂದಿದ ಮಹಿಳೆ ಗೋತ್ರದಲ್ಲಿ ಗಣನೀಯ ಪಾತ್ರ ನಿರ್ವಹಿಸುತ್ತಿದ್ದಳು.

ಇಸ್ಲಾಮ್ ಇದನ್ನೆಲ್ಲ ಬದಲಾಯಿಸಿತು. ಸಾಮಾಜಿಕ ಸಂಘರ್ಷಗಳ ಪರಿಣಾಮವಾಗಿ ಈ ಬದಲಾವಣೆ ಉಂಟಾಗಲಿಲ್ಲ. ಇಸ್ಲಾಮ್ ಮೌಲ್ಯಾಧಾರಿತ ಉಪದೇಶಗಳನ್ನು ನೀಡಿತು. ದೇವನಿಂದ ಇಸ್ಲಾಮಿನ ಸಾಮಾಜಿಕ ವ್ಯವಸ್ಥೆಗೆ ಮಾರ್ಗದರ್ಶನ ದೊರಕಿತು. ಬದಲಾವಣೆ ಸಮಾಜವನ್ನು ಬದಲಾಯಿಸುವ ಸಹಜ ಶಕ್ತಿಗಳಿಗೆ ಸಂಬಂಧಿಸಿರಲಿಲ್ಲ.

ಪುರುಷ ಮತ್ತು ಮಹಿಳೆಯ ಬೇರ್ಪಡಿಸುವಿಕೆಯಿಂದ ಲೈಂಗಿಕ ಅರಾಜಕತೆ ಕೂಡಲೆ ಕೊನೆಗೊಂಡಿತು. ಪುರುಷ ಮತ್ತು ಮಹಿಳೆಯ ಸಂಬಂಧವನ್ನು ಕ್ರಮಬದ್ಧಗೊಳಿಸಲಾಯಿತು. ಆಳವಾದ ನೈತಿಕ ತತ್ವಗಳಿಗನುಸಾರವಾಗಿ ಅದನ್ನು ಸ್ಥಾಪಿಸಲಾಯಿತು. ಮಹಿಳೆಗೆ ಉನ್ನತ ಸ್ಥಾನ ನೀಡಲಾಯಿತು. ಅಸಹಾಯಕ ಸಾಮಗ್ರಿಗಳ ಹಾಗೆ ಅವರನ್ನು ಕಾಣುವುದು ಕೊನೆಗೊಂಡಿತು. ಜೀವನದ ವಿವಿಧ ಚಟುವಟಿಕೆಗಳಲ್ಲಿ ಮಹಿಳೆಗೆ ಸಮಾನ ಪಾಲು ನೀಡಲಾಯಿತು. ಹಿಂದಿನ ಕಾಲದಲ್ಲಿ ಸಾಮಗ್ರಿಗಳ ಹಾಗೆ ವಾರಸುದಾರರಲ್ಲಿ ಹಂಚಲ್ಪಡುತ್ತಿದ್ದ ಮಹಿಳೆಯರು ತಮ್ಮ ಪಿತ, ಮಾತೆ, ಪತಿ ಮತ್ತು ಮಕ್ಕಳ ವಾರಸುದಾರರಾದರು. ಅವರಿಗೆ ತಮ್ಮ ಪತಿಯ ಎದುರಿಗೆ ನಿಂತು ಮಾತಾಡಲು ಸಾಧ್ಯವಾಯಿತು. ಅವರಿಗೆ ತಮ್ಮ ವಾದಕ್ಕೆ ಸಮರ್ಥನೆ ನೀಡಲು ಸಾಧ್ಯವಾಯಿತು. ಭಿನ್ನಾಭಿಪ್ರಾಯ ಸೂಚಿಸಲು ಸಾಧ್ಯವಾಯಿತು. ಮಹಿಳೆಯರಿಗೆ ವಿವಾಹ ವಿಚ್ಛೇದನ ನೀಡಬಹುದಾದರೊಂದಿಗೆ ಮಹಿಳೆಯರು ಸಹ ತಮ್ಮ ಪತಿಯಂದಿರಿಗೆ ವಿವಾಹ ವಿಚ್ಛೇದನ ನೀಡುವ ಹಕ್ಕು ಪಡೆದರು.

ಇಸ್ಲಾಮಿನಲ್ಲಿ ಮಾತೆಯ ಸ್ಥಾನದಲ್ಲಿ ಮಹಿಳೆಗೆ ಎಂತಹ ಗೌರವ ನೀಡಲಾಯಿತೆಂದರೆ ಇಂತಹ ಉದಾಹರಣೆ ಲೋಕದ ಬೇರೆ ಸಮಾಜಗಳಲ್ಲಿ ಕಾಣುವುದು ಕಷ್ಟಕರವಾಗಿದೆ. ಹಝ್ರತ್ ಪೈಗಂಬರರು(ಸ) ದೇವನ ಮಾರ್ಗದರ್ಶನದಲ್ಲಿ, "ಸ್ವರ್ಗವು ಮಾತೆಯರ ಪಾದದಡಿಯಲ್ಲಿದೆ" ಎಂದು ಹೇಳಿ ಮಹಿಳೆಯರ ಹಕ್ಕುಗಳ ಪ್ರತಿಪಾದಕರಾದರು.

ಹಝ್ರತ್ ಪೈಗಂಬರರು(ಸ) ಮೇಲಿನಂತೆ ಹೇಳಿ ಪರಲೋಕದಲ್ಲಿ ದೊರಕುವ ಸ್ವರ್ಗದ ಬಗ್ಗೆ ಮಾತ್ರವಲ್ಲ, ಮಾತೆಯರಿಗೆ ಅತ್ಯಂತ ಹೆಚ್ಚು ಗೌರವ ನೀಡಿ, ಅವರಿಗೆ ಸಂತೋಷ ನೀಡುವ ಕೆಲಸಗಳನ್ನು ಮಾಡಿ, ಅವರಿಗೆ ನೆಮ್ಮದಿ ನೀಡಿ ಸಾಮಾಜಿಕ ಸ್ವರ್ಗವನ್ನು ಇಹಲೋಕದಲ್ಲಿ ಗಳಿಸುವ ಬಗ್ಗೆ ಈ ನುಡಿಮುತ್ತಿನಲ್ಲಿ ಸೂಚಿಸಿದ್ದಾರೆ.

ಪುರುಷರ ಮತ್ತು ಮಹಿಳೆಯರ ಬೇರ್ಪಡಿಸುವಿಕೆಯನ್ನು ಈ ವಿಷಯಗಳನ್ನು ಪರಿಗಣಿಸಿ ಮನವರಿಕೆ ಮಾಡಿಕೊಳ್ಳಬೇಕು. ಇದು ಪುರುಷರ ಶ್ರೇಷ್ಠತೆಯನ್ನು ಸೂಚಿಸಲಿಕ್ಕಾಗಿರದೆ ಮನೆಯ ಪಾವಿತ್ರ್ಯವನ್ನು ಕಾಪಾಡಲಿಕ್ಕೋಸ್ಕರವಾಗಿತ್ತು. ಪತಿ ಪತ್ನಿಯರ ಮಧ್ಯೆ ವಿಶ್ವಾಸವರ್ಧನೆಗೆ, ಮನುಷ್ಯನ ಸಹಜ ಆಶೆಗಳಿಗೆ ಸಂಯಮನವನ್ನು ಕಲಿಸಲು, ಅವುಗಳನ್ನು ಹತೋಟಿಗೆ ತಂದು ಅವು ಶಕ್ತಶಾಲಿ ರಾಕ್ಷಸರ ಹಾಗೆ ವರ್ತಿಸದೆ ಸಮಾಜಕ್ಕೆ ಹಿತಕರವಾದ ಪಾತ್ರವಹಿಸಲು ಹೀಗೆ ಮಾಡಲಾಗಿದೆ.

ಪುರುಷರ ಮತ್ತು ಮಹಿಳೆಯರ ಬೇರ್ಪಡಿಸುವ ಮೂಲಕ ಮಹಿಳೆಯರು ಜೀವನದ ಎಲ್ಲ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ತಡೆಯಲಾಗಿದೆ ಎಂದು ತಪ್ಪಾಗಿ ಗ್ರಹಿಸಲಾಗುತ್ತಿದೆ. ಇದು ಸತ್ಯವಲ್ಲ. ಇಸ್ಲಾಮ್ ವಿಧಿಸುವ ಬೇರ್ಪಡಿಸುವಿಕೆ ಮಹಿಳೆಯರ ಚಾರಿತ್ರ್ಯವನ್ನು ಸಂರಕ್ಷಿಸಲಿಕ್ಕಾಗಿದೆ ಮತ್ತು ಅವರಿಗೆ ಗೌರವ ನೀಡಲಿಕ್ಕಾಗಿದೆ. ಈ ಉದ್ದೇಶಗಳಿಗೆ ಭಂಗ ಉಂಟಾಗುವುದನ್ನು ಕಡಿಮೆಗೊಳಿಸಲಿಕ್ಕಾಗಿದೆ.

ಪುರುಷರು ಮತ್ತು ಮಹಿಳೆಯರು ಒಟ್ಟಿಗೆ ಜಮಾಯಿಸುವುದನ್ನು ಮತ್ತು ಪುರುಷ ಹಾಗೂ ಮಹಿಳೆ ಮಧ್ಯೆ ರಹಸ್ಯ ಸಂಬಂಧಗಳನ್ನು ನಿರುತ್ಸಾಹಪಡಿಸಲಾಗಿದೆ. ಪುರುಷರು ಮತ್ತು ಮಹಿಳೆಯರು ಪರಸ್ಪರ ದಿಟ್ಟಿಸಿ ನೋಡುವುದನ್ನು ತಡೆಯಲಾಗಿದೆಯಲ್ಲದೆ ಪರಸ್ಪರ ಸ್ಪರ್ಶಿಸುವುದನ್ನು ತಡೆದು ಅನಿಯಂತ್ರಿತ ಉದ್ರೇಕಗಳಿಂದ ರಕ್ಷಿಸಲಾಗಿದೆ. ಮಹಿಳೆಯರು ತಮ್ಮ ಶರೀರಕ್ಕೆ ಬಟ್ಟೆಗಳನ್ನು ಹೊದಿಸಿ ಪುರುಷರಿಂದ ಆಕರ್ಷಿಸಲ್ಪಡದ ಹಾಗೆ ವರ್ತಿಸಬೇಕೆಂದು ಉಪದೇಶಿಸಲಾಗಿದೆ. ಅಲಂಕಾರ ಸಾಮಗ್ರಿಗಳು ಮತ್ತು ಆಭರಣಗಳು ಮಹಿಳೆಯರು ಬಳಸಬಹುದು. ಆದರೆ ಜನರ ಗಮನ ಸೆಳೆಯುವ ರೀತಿಯಲ್ಲಿ ಅವುಗಳನ್ನು ಉಪಯೋಗಿಸಬಾರದು. ಲೋಕದಲ್ಲಿ ವಿವಿಧ ಸಮಾಜಗಳ ಮಾನಸಿಕ ನೆಲೆಯ ಪ್ರಕಾರ ಈ ಉಪದೇಶಗಳು ಕಠೋರವೆಂದೂ ಅನಾಕರ್ಷಕವೆಂದೂ ತೋರಬಹುದೆಂದು ನಮಗೆ ತಿಳಿದಿದೆ. ಆದರೆ ಇಸ್ಲಾಮೀ ಸಮಾಜ ವ್ಯವಸ್ಥೆಯನ್ನು ತಳಸ್ಪರ್ಶಿಯಾಗಿ ಪರಿಶೋಧಿಸುವುದಾದರೆ ಈ ಅಭಿಪ್ರಾಯ ಸರಿಯಲ್ಲವೆಂದು ತಿಳಿಯುವುದು. ಈ ಉಪದೇಶಗಳನ್ನು ಇಸ್ಲಾಮೀ ಸಾಮಾಜಿಕ ವ್ಯವಸ್ಥೆಯ ಅವಿಭಾಜ್ಯ ಅಂಗವೆಂದು ಪರಿಗಣಿಸಬೇಕು.

ಇಸ್ಲಾಮೀ ಸಮಾಜ ವ್ಯವಸ್ಥೆಯಲ್ಲಿ ಮಹಿಳೆಯರ ಸ್ಥಾನ ಅಂತಃಪುರದ ಉಪಪತ್ನಿಯರದಲ್ಲ. ಅಥವಾ ನಾಲ್ಕು ಗೋಡೆಗಳ ಮಧ್ಯೆ ಬಂಧಿತರಾಗಿ ಅಭಿವೃದ್ಧಿಯಿಂದ ವಂಚಿತರಾಗಿ, ವಿದ್ಯೆಗಳಿಕೆಯಿಂದ ವಂಚಿತರಾಗುವುದಲ್ಲ. ಇಸ್ಲಾಮಿನ ಸಾಮಾಜಿಕ ವ್ಯವಸ್ಥೆಯ ಈ ರೀತಿಯ ಕುರೂಪಿ ಚಿತ್ರಣವನ್ನು ಇಸ್ಲಾಮಿನ ಆಂತರಿಕ ಮತ್ತು ಬಾಹ್ಯ ಶತ್ರುಗಳು ನೀಡಿದ್ದಾರೆ. ಅಥವಾ ಇಸ್ಲಾಮಿನ ಜೀವನ ಶೈಲಿಯನ್ನು ಬಹಳ ತಪ್ಪಾಗಿ ಮನವರಿಕೆ ಮಾಡಿಕೊಂಡ ಮತಪಂಡಿತರು ನೀಡಿರುತ್ತಾರೆ.

ಮಹಿಳೆಯರನ್ನು ಆಟದ ವಸ್ತುಗಳಾಗಿ ಮಾಡಿಕೊಳ್ಳುವುದನ್ನು ಇಸ್ಲಾಮ್ ಅಂಗೀಕರಿಸಲಾರದು. ಶೋಷಿಸಲ್ಪಟ್ಟು ಪುರುಷನ ಆಭಾಸ ಕೃತ್ಯಗಳಿಗೆ ಬಲಿಯಾಗುವುದಕ್ಕೆ ಇಸ್ಲಾಮ್ ಮಹಿಳೆಯರನ್ನು ಬಿಡಲಾರದು. ಇಸ್ಲಾಮ್ ಮಹಿಳೆಯರ ಬಗ್ಗೆ ಇಂತಹ ಮನೋಭಾವವನ್ನು ಪ್ರೋತ್ಸಾಹಿಸುವುದಿಲ್ಲ.

ಸಮಾಜವು ಒಗ್ಗೂಡಿ ಅಗತ್ಯಪಡುವುದರಿಂದ ಮಹಿಳೆಯರು ಯಾವಾಗಲೂ ಸೌಂದರ್ಯ ಪ್ರದರ್ಶಿಸುತ್ತಾ ಇರಬೇಕೆಂದು ಆವಶ್ಯಪಡುವುದು ಮಹಿಳೆಯರ ಮೇಲೆ ಮಾಡುವ ದೌರ್ಜನ್ಯವಾಗಿದೆ. ಈಗ ಮಹಿಳೆಯರ ಸೌಂದರ್ಯ ಯಾವಾಗಲೂ ಪ್ರದರ್ಶಿಸಲ್ಪಡುತ್ತದೆ. ದೈನಂದಿನ ಆವಶ್ಯಕ ಪದಾರ್ಥಗಳನ್ನು ಮಾರಾಟ ಮಾಡಲು, ಬಟ್ಟೆ ತೊಳೆಯುವ ಪೌಡರ್ ಮೊದಲಾದವುಗಳನ್ನು ಮಹಿಳೆಯರನ್ನು ಮೋಡೆಲ್‌ಗಳಾಗಿ ಮಾಡಿ ಜಾಹಿರಾತು ನೀಡಲಾಗುತ್ತಿದೆ. ಕೃತ್ರಿಮ ಶೈಲಿಯ ದುಬಾರಿ ಜೀವಿತ ರೀತಿ ಮಹಿಳೆಗೆ ಆವಶ್ಯಕವೆಂದು, ಹಾಗೆ ಆಕೆ ತನ್ನ ಕನಸುಗಳನ್ನು ಈಡೇರಿಸಬಲ್ಲಳೆಂದೂ ಜಾಹಿರಾತುಗಳಲ್ಲಿ ಸೂಚಿಸಲಾಗುತ್ತಿದೆ. ಇಂತಹ ಸಮಾಜ ಸಮತೋಲನ ಸ್ಥಿತಿಯನ್ನು ಕಾಪಾಡಿಕೊಳ್ಳಲಾರದು. ಅದು ಸೌಮ್ಯವಾಗಿಯೂ ಆರೋಗ್ಯಕರವಾಗಿಯೂ ಬಾಳಲಾರದು.

ಇಸ್ಲಾಮ್ ಪ್ರಕಾರ, ಮಹಿಳೆಯರನ್ನು ಶೋಷಣೆಗಳಿಂದ ರಕ್ಷಿಸಬೇಕು. ಅವರು ಸುಖ ನೀಡುವ ಉಪಕರಣವೆಂಬಂತೆ ಬಳಸುವುದನ್ನು ತಡೆಯಬೇಕು. ಮನೆಗೆ ಸಂಬಂಧಿಸಿ ಮತ್ತು ಮುಂದಿನ ಪೀಳಿಗೆಗೆ ಸಂಬಂಧಿಸಿ ತಮ್ಮ ಹೊಣೆಗಾರಿಕೆಗಳನ್ನು ಈಡೇರಿಸಲು ಅವರಿಗೆ ಹೆಚ್ಚು ಸಮಯ ನೀಡಬೇಕು.

**ಮಹಿಳೆಯರಿಗೆ ಸಮಾನ ಹಕ್ಕುಗಳು**

ಮಹಿಳೆಯರ ಸ್ವಾತಂತ್ರ್ಯ ಮತ್ತು ಮಹಿಳೆಯರ ಹಕ್ಕುಗಳ ಬಗ್ಗೆ ಬಹಳ ಪ್ರಚಾರ ನಡೆಸಲಾಗುತ್ತಿದೆ. ಇಸ್ಲಾಮ್ ಮಹಿಳೆಯರ ಬಗ್ಗೆ ಮೂಲಭೂತ ಸಿದ್ಧಾಂತವನ್ನು ಎಲ್ಲ ಸಂದರ್ಭಗಳಲ್ಲಿಯೂ ಪ್ರಾಯೋಗಿಕವಾಗುವಂತೆ ಹೀಗೆ ಪ್ರಕಟಿಸಿದೆ: **“ಅವರ ಮೇಲೆ ಪುರುಷರಿಗೆ ಕೆಲವು ಹಕ್ಕುಗಳಿರುವಂತೆಯೇ ಅವರಿಗೂ (ಸ್ತ್ರೀಯರಿಗೂ) ನ್ಯಾಯೋಚಿತವಾದ ಕೆಲವು ಹಕ್ಕುಗಳಿವೆ. ಪುರುಷರಿಗೆ ಅವರ ಮೇಲೆ ಒಂದು ದರ್ಜೆ ಹೆಚ್ಚಿಗಿದೆ. ಅಲ್ಲಾಹನು ಪ್ರತಾಪವಂತನೂ ವಿವೇಕಶಾಲಿಯೂ ಆಗಿದ್ದಾನೆ.”** (ಪವಿತ್ರ ಖುರ್‌ಆನ್ 2 :229).

ಈ ವಚನದಲ್ಲಿ ಮಹಿಳೆಯರಿಗೆ ಪುರುಷರ ಹಾಗೆಯೇ ಇರುವ ಹಕ್ಕುಗಳಿವೆ ಎಂದು ಸೂಚಿಸಲಾಗಿದೆ. ಪುರುಷ ಮತ್ತು ಮಹಿಳೆಯರ ಮೂಲಭೂತ ಹಕ್ಕುಗಳಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲ.

ಪವಿತ್ರ ಖುರ್‌ಆನಿನ ಇನ್ನೊಂದು ವಚನ ಹೀಗಿದೆ: **“ಪುರುಷರು ಸ್ತ್ರೀಯರ ರಕ್ಷಾಧಿಕಾರಿಗಳಾಗಿದ್ದಾರೆ – ಅಲ್ಲಾಹನು ಅವರ ಪೈಕಿ ಕೆಲವರಿಗೆ ಬೇರೆ ಕೆಲವರಿಗಿಂತ (ಪುರುಷರಿಗೆ ಸ್ತ್ರೀಯರಿಗಿಂತ) ಕೆಲವು ಮೇಲ್ಮೆಯನ್ನು ಕೊಟ್ಟಿರುವುದರಿಂದಲೂ ಅವರು ತಮ್ಮ ಧನವನ್ನು ಖರ್ಚು ಮಾಡುವುದರಿಂದಲೂ.”** (ಪವಿತ್ರ ಖುರ್‌ಆನ್ 4 :35).


ಪವಿತ್ರ ಖುರ್‌ಆನಿನಲ್ಲಿ ಬಳಸಲಾದ ಪದ *ಖವ್ವಾಮೂನ್* ಎಂದಾಗಿದೆ. ಇದರ ಅರ್ಥ ತಮ್ಮ ರಕ್ಷಣೆಗೆ ಅಧೀನರಾದವರು ನೇರಮಾರ್ಗದಲ್ಲಿ ಚಲಿಸುವಂತೆ ಮಾಡಲು ಅವರು ಜವಾಬ್ದಾರರಾಗಿದ್ದಾರೆ ಎಂದಾಗಿದೆ. ಆದರೆ ಮಧ್ಯಕಾಲೀನ ಮನೋಭಾವ ಹೊಂದಿದ ಕೆಲವು ಮತಪಂಡಿತರು ಈ ಪದ ಮಹಿಳೆಯ ಮೇಲೆ ಪುರುಷನ ಶ್ರೇಷ್ಠತೆ ಸೂಚಿಸುತ್ತದೆ ಎಂದು ನಿಷ್ಕರ್ಷಿಸುತ್ತಾರೆ. ಆದರೆ ಈ ವಚನ ಸೂಚಿಸುವುದು ಕುಟುಂಬದ ಖರ್ಚು ವೆಚ್ಚ ನೋಡಿಕೊಳ್ಳುವವರಿಗೆ ತನ್ನ ಅಧೀನದಲ್ಲಿರುವವರ ಮೇಲೆ ಇರುವ ಅಧಿಕಾರದ ಬಗ್ಗೆ ಮಾತ್ರವಾಗಿದೆ. ಅವನು ತನ್ನ ಅಧೀನದಲ್ಲಿರುವವರನ್ನು ನೇರಮಾರ್ಗದಲ್ಲಿ ಚಲಾಯಿಸಲು ಹೆಚ್ಚು ಅರ್ಹನಾಗಿರುತ್ತಾನೆ. ಮೂಲಭೂತ ಮಾನವ ಹಕ್ಕುಗಳಿಗೆ ಸಂಬಂಧಿಸಿ ಪುರುಷನಿಗೆ ಮಹಿಳೆ ಸಮಾನಳಾಗಿಲ್ಲ ಎಂದಾಗಲೀ ಪುರುಷನು ಮಹಿಳೆಗಿಂತ ಶ್ರೇಷ್ಠ ಎಂದಾಗಲೀ ಈ ವಚನ ಸೂಚಿಸುವುದಿಲ್ಲ. ಈ ವಚನದ ಕೊನೆಯ ಭಾಗ ಪುರುಷನು ಹೆಚ್ಚು ಅನುಕೂಲ ಸ್ಥಿತಿಯಲ್ಲಿದ್ದರೂ ಮಹಿಳೆಯ ಹಕ್ಕುಗಳು ಪುರುಷನ ಹಕ್ಕಿಗೆ ಸಮಾನ ಎಂದೇ ಸೂಚಿಸುತ್ತದೆ. ಈ ವಚನದಲ್ಲಿರುವ “ವ” ಪದಕ್ಕೆ “ಹೀಗಿದ್ದರೂ” ಎಂದು ಅರ್ಥ ಹೇಳುವುದೇ ಸರಿಯಾಗಿದೆ. ■


**LOVE FOR HONESTY AND HATRED FOR DISHONESTY**

**ಪ್ರಾಮಾಣಿಕತೆಯೊಂದಿಗೆ ಪ್ರೀತಿ ಮತ್ತು ಅಪ್ರಾಮಾಣಿಕತೆಯೊಂದಿಗೆ ದ್ವೇಷ**

# ಹ್ಯುಮಾನಿಟಿ ಫಸ್ಟ್ (HUMANITY FIRST)

## ಸಂಕಷ್ಟ ಪೀಡಿತರ ಕಣ್ಣೀರನ್ನು ಒರೆಸುವ ಸಂಸ್ಥೆ




**ಜಾಗತಿಕ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸರ್ವೋಚ್ಚನಾಯಕ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು 2021 ಅಕ್ಟೋಬರ್ 31ರಂದು ಲಂಡನ್‌ನಲ್ಲಿ ಜರಗಿದ ಅಂತರ್ರಾಷ್ಟ್ರೀಯ ಸಮ್ಮೇಳನದಲ್ಲಿ ಮಾಡಿದ ಭಾಷಣ.**

ಸಾಂಪ್ರದಾಯಿಕ ಪ್ರಾರ್ಥನೆಗಳನ್ನು ಮಾಡಿದ ನಂತರ ಜಾಗತಿಕ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸರ್ವೋಚ್ಚ ನಾಯಕ ಪಂಚಮ ಖಲೀಫತುಲ್ ಮಸೀಹ್ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಹೇಳಿದರು: ಅಲ್ಲಾಹನ ಅನುಗ್ರಹದಿಂದ ಈ ವಾರಾಂತ್ಯ ಹ್ಯುಮಾನಿಟಿ ಫಸ್ಟ್ ಸಂಸ್ಥೆಯ ಪ್ರಥಮ ಜಾಗತಿಕ ಸಮ್ಮೇಳನ ಜರಗಿಸಲು ಸಾಧ್ಯವಾಗಿದೆ. ವಾರ್ಷಿಕ ವರದಿಯಲ್ಲಿ ಸೂಚಿಸಿದ ಪ್ರಕಾರ 2020ರಲ್ಲಿ ಈ ಸಮ್ಮೇಳನ ಹ್ಯುಮಾನಿಟಿ ಫಸ್ಟ್ ಸಂಸ್ಥೆಯ ಸಿಲ್ವರ್ ಜೂಬಿಲೀ ವರ್ಷವಾಗಿ ಜರಗಿಸಲು ನಿರ್ಧರಿಸಲಾಗಿತ್ತು. ಆದರೆ ಕೋವಿಡ್ ಮಹಾಮಾರಿಯ ಕಾರಣ 2021ರಲ್ಲಿ ಜರಗಿಸಲಾಗುತ್ತಿದೆ. ಈ ಸಮ್ಮೇಳನದಲ್ಲಿ ಭಾಗವಹಿಸಲು ಕೆಲವು ಜನರಿಗೆ ಮಾತ್ರ ಸಾಧ್ಯವಾಗಿದೆ. ಕೋವಿಡ್ ರೋಗದ ದುಷ್ಪರಿಣಾಮಗಳ ಕಾರಣದಿಂದ ಹ್ಯುಮಾನಿಟಿ ಫಸ್ಟ್‌ಗೆ ಸೇರಿದ ಬಹುತೇಕ ಸದಸ್ಯರು ಅನ್ಯ ದೇಶಗಳಲ್ಲಿ ನನ್ನ ಭಾಷಣವನ್ನು ಆಲಿಸುತ್ತಾ ಭಾಗವಹಿಸುತ್ತಿದ್ದಾರೆ.

ಹ್ಯುಮಾನಿಟಿ ಫಸ್ಟ್ ಸಂಸ್ಥೆಯನ್ನು ಅಧಿಕೃತವಾಗಿ ನೊಂದಾಯಿಸಿ 26 ವರ್ಷಗಳು ದಾಟಿ ಹೋಗಿವೆ. ಸ್ಥಾಪನೆಯ ನಂತರ ಈ ಸಂಸ್ಥೆ ಬೆಳವಣಿಗೆ ಹೊಂದುತ್ತಾ ಅಮೇರಿಕ ಭೂಖಂಡ, ಯುರೋಪು, ಆಫ್ರಿಕ ಖಂಡ, ಮಧ್ಯಪೂರ್ವ, ಏಶಿಯಾ ಮತ್ತು ಫ್ಯಾಸಿಫಿಕ್ ಮೊದಲಾದ ಪ್ರದೇಶಗಳ ಅರುವತ್ತಕ್ಕಿಂತ ಹೆಚ್ಚು ದೇಶಗಳಲ್ಲಿ ಮಹತ್ತರ ಪ್ರಭಾವಶಾಲಿ ಸೇವಾಕಾರ್ಯಗಳನ್ನು ನೋಡಲು ಸಾಧ್ಯವಾಗಿದೆ. ಕೆಲವು ದೇಶಗಳಲ್ಲಿ ನೈಸರ್ಗಿಕ ದುರಂತಗಳು ಸಂಭವಿಸಿದಾಗ ಹ್ಯುಮಾನಿಟಿ ಫಸ್ಟ್ ತುರ್ತಾಗಿ ಪರಿಹಾರ ವ್ಯವಸ್ಥೆಯನ್ನು ಮಾಡಿದೆ. ಬೇರೆ ಕೆಲವು ದೇಶಗಳಲ್ಲಿ ಸ್ಥಳೀಯ ಜನರ ಆವಶ್ಯಕತೆಗಳನ್ನು ನೆರವೇರಿಸಿಕೊಡಲು ಕಾರ್ಯ ಯೋಜನೆಗಳನ್ನು ಮುಂದುವರಿಸಲು ಸ್ಥಿರವಾದ ಕಟ್ಟಡಗಳನ್ನು ನಿರ್ಮಿಸಲಾಗಿದೆ.

ಹ್ಯುಮಾನಿಟಿ ಫಸ್ಟ್ ಪ್ರಾರಂಭಿಸಿದ ವಿವಿಧ ಕಾರ್ಯ ಯೋಜನೆಗಳಲ್ಲಿ ವಿವಿಧ ದೇಶಗಳಲ್ಲಿ ಸ್ಥಾಪಿಸಿದ ಫುಡ್ ಬ್ಯಾಂಕ್‌ಗಳು ಸೇರಿವೆ. ಈದ್ ಸಂದರ್ಭಗಳಲ್ಲಿ ಬಡ ಜನರಿಗೆ ಮಾಂಸ ಹಂಚಲು ಮೃಗ ಬಲಿ ನೀಡುವ ವ್ಯವಸ್ಥೆ ಸಹ ಮಾಡಲಾಗಿದೆ. ವಸತಿ ರಹಿತರಿಗೂ ಅನಾಥರಿಗೂ ನೆರವು ಒದಗಿಸುವ ಕಾರ್ಯ ಯೋಜನೆಗಳನ್ನು ಪ್ರಾರಂಭಿಸಲಾಗಿದೆ. ಸ್ಥಿರವಾಗಿ ಮುಂದುವರಿಯುವ ಅನೇಕ ಕಾರ್ಯಯೋಜನೆಗಳನ್ನು ರೂಪಿಸಲಾಗಿದೆ. ಉದಾಹರಣೆಗೆ, ಮೃಗಪಾಲನೆ ಮತ್ತು ಕೃಷಿಗೆ ಸಹಾಯ ನೀಡಲಾಗಿದೆ. ಆರೋಗ್ಯ ಸಂರಕ್ಷಣೆಯ ಬಗ್ಗೆ ತರಬೇತಿ ನೀಡಲಾಗಿದೆ. ವಿವಿಧ ಕಸಬುಗಳ ಬಗ್ಗೆ ತರಬೇತಿ ವ್ಯವಸ್ಥೆಗೊಳಿಸಲಾಗಿದೆಯಲ್ಲದೆ ವೈದ್ಯಕೀಯ ನೆರವು ನೀಡುವ ವ್ಯವಸ್ಥೆ ಸಹ ಮಾಡಲಾಗಿದೆ. ಹಲವು ವರ್ಷಗಳಿಂದ ಗಿಫ್ಟ್ ಆಫ್ ಸೈಟ್ ಎಂದರೆ ದೃಷ್ಟಿ ಪಾರಿತೋಷಿಕ ಕಾರ್ಯಕ್ರಮವನ್ನು ಹ್ಯುಮಾನಿಟಿ ಫಸ್ಟ್ ನಡೆಸುತ್ತಿದೆ. ವಾಟರ್ ಫೋರ್ ಲೈಫ್ ಪ್ರೋಗ್ರಾಮ್ (ಜೀವ ಜಲ ಕಾರ್ಯಕ್ರಮ) ಮೂಲಕ ಲೋಕದ ದೂರ ಪ್ರದೇಶಗಳ ಜನರಿಗೆ ಶುದ್ಧ ನೀರನ್ನು ಒದಗಿಸಲು ಹ್ಯುಮಾನಿಟಿ ಫಸ್ಟ್ ಕಾರ್ಯನಿರತವಾಗಿದೆ. ಭೂಕಂಪ, ಜಲಪ್ರಳಯ ಮೊದಲಾದ ನೈಸರ್ಗಿಕ ದುರಂತಗಳ ಸಂದರ್ಭಗಳಲ್ಲಿ ಹ್ಯುಮಾನಿಟಿ ಫಸ್ಟ್ ನೀಡುತ್ತಿರುವ ತುರ್ತು ನೆರವಿನ ಬಗ್ಗೆ ಈ ಮೊದಲು ಪ್ರಸ್ತಾಪಿಸಲಾಗಿದೆ.

ಹ್ಯುಮಾನಿಟಿ ಫಸ್ಟ್ ಶಾಲೆಗಳನ್ನೂ ಆಸ್ಪತ್ರೆಗಳನ್ನೂ ಅನಾಥಾಲಯಗಳನ್ನೂ ಶುಶ್ರೂಷಾಲಯಗಳನ್ನೂ ಸ್ಥಾಪಿಸಿದೆ. ಈ ರೀತಿ, ಅಲ್ಲಾಹನ ಅನುಗ್ರಹದಿಂದ ಹ್ಯುಮಾನಿಟಿ ಫಸ್ಟ್ ಸುಸ್ಥಿರವಾಗಿ ಸ್ಥಾಪಿತವಾದ ಅಂತರ್ರಾಷ್ಟ್ರೀಯ ಅಂಗೀಕಾರ ಪಡೆದ ಧರ್ಮಾರ್ಥ ಸಂಸ್ಥೆಯಾಗಿ ವಿಜೃಂಭಿಸುತ್ತಿದೆ. ಹ್ಯುಮಾನಿಟಿ ಫಸ್ಟ್ ಎಂತಹ ಹಂತವನ್ನು ತಲಪಿದೆ ಎಂದರೆ ಅನ್ಯ ಸ್ವಯಂ ಸೇವಕ ಸಂಸ್ಥೆಗಳು, NGOಗಳು ಮತ್ತು ಮಾನವೀಯ ಸೇವಾ ಸಂಸ್ಥೆಗಳು ತಮ್ಮ ಕಾರ್ಯನಿರ್ವಹಣೆ ಮಾಡಲು ಹ್ಯುಮಾನಿಟಿ ಫಸ್ಟ್‌ನೊಂದಿಗೆ ಸಹಭಾಗಿಯಾಗುವ ಇಚ್ಛೆ ಪ್ರಕಟಿಸಿವೆ. ಉದಾಹರಣೆಗೆ, ಒಂದು ದೇಶದಲ್ಲಿ ಸಂಯುಕ್ತ ರಾಷ್ಟ್ರ ಸಂಘದೊಂದಿಗೆ ಜೋಡಿಸಿರುವ ಒಂದು ಅಂತರ್ರಾಷ್ಟ್ರೀಯ NGO ತನ್ನ ಮಾನವೀಯ ನೆರವು ಸೇವೆಗಳನ್ನು ತನ್ನ ಪರವಾಗಿ ನಡೆಸಲು ಹ್ಯುಮಾನಿಟಿ ಫಸ್ಟ್‌ಗೆ ಧನ ಸಹಾಯ ನೀಡುವ ಇಚ್ಛೆ ಪ್ರಕಟಿಸಿದೆ. ಅಲ್ಲಾಹನ ಅನುಗ್ರಹದಿಂದ ಹ್ಯುಮಾನಿಟಿ ಫಸ್ಟ್ ಅನ್ಯ ಮಾನವೀಯ ಸೇವಾ ಸಂಸ್ಥೆಗಳ, ವಿಶಿಷ್ಟವಾಗಿ ಸಂಯುಕ್ತ ರಾಷ್ಟ್ರ ಸಂಘದೊಂದಿಗೆ ಜೋಡಿಸಿರುವ ಸಂಸ್ಥೆಗಳ ವಿಶ್ವಾಸವನ್ನೂ ಗೌರವವನ್ನೂ ಗಳಿಸಿವೆ ಎಂದು ಇದು ಸೂಚಿಸುತ್ತಿದೆ.

ಹೀಗೆ ಸಂಭವಿಸಿದುದು ದೇವ ವಿಧಿ ಪ್ರಕಾರವೇ ಆಗಿದೆ. ಇಸ್ಲಾಮಿನ ಪವಿತ್ರ ಪೈಗಂಬರ್ ಹಝ್ರತ್ ಮುಹಮ್ಮದ್(ಸ) ಹೀಗೆ ಹೇಳಿದ್ದರು: ನಿಮ್ಮ ಶಿಷ್ಟಾಚಾರಗಳೂ ಸ್ವಭಾವಗುಣಗಳೂ ಉತ್ತಮವಾಗಿದ್ದರೆ ಜನರು ನಿಮ್ಮನ್ನು ಮೆಚ್ಚುವರು ಮತ್ತು ನೀವು ಸಮಾಜಕ್ಕೆ ಉತ್ತಮ ಕೊಡುಗೆ ನೀಡುವವರಾಗಿ ಗಣಿಸಲ್ಪಡುವಿರಿ.

ಅಲ್ಲಾಹನಿಂದ ಹೊರತು ಬೇರೆ ಯಾರಿಂದಲೂ ಅಂಗೀಕಾರವನ್ನಾಗಲಿ, ಬಹುಮಾನವನ್ನಾಗಲಿ ಆಶಿಸದ ಹ್ಯುಮಾನಿಟಿ ಫಸ್ಟ್ ಮಾನವರಿಗೋಸ್ಕರ ಮಾಡುತ್ತಿರುವ ಸೇವೆಗಳನ್ನು ಗುರುತಿಸಿಕೊಂಡು ಅನ್ಯ ಸೇವಾ ಸಂಸ್ಥೆಗಳು ಮತ್ತು ಕೆಲವು ಸರಕಾರಿ ಏಜೆನ್ಸಿಗಳು ತಮ್ಮ ಮೆಚ್ಚುಗೆಯನ್ನು ಸೂಚಿಸಿವೆ. ಹ್ಯುಮಾನಿಟಿ ಫಸ್ಟ್ ಸಂಸ್ಥೆ ಜನೋಪಯೋಗಿ ಕಾರ್ಯಯೋಜನೆಗಳನ್ನು ಕೈಗೊಳ್ಳುತ್ತಿದೆ ಎಂಬುದಕ್ಕೆ ಇದು ಸಾಕ್ಷ್ಯ ನೀಡುತ್ತದೆ. ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಒಬ್ಬ ಮುಸ್ಲಿಮನ ಜೀವಿತದ ಉದ್ದೇಶ ಲಕ್ಷ್ಯವಾಗಿ ಮಾನವರ ಸೇವೆ ಮಾಡಬೇಕೆಂದೂ ಸಂಕಷ್ಟಕ್ಕೆ ಗುರಿಯಾದವರಿಗೆ ನೆರವು ನೀಡಬೇಕೆಂದೂ ಆಜ್ಞಾಪಿಸಿರುವನು. ಈ ಉದ್ದೇಶವನ್ನು ಈಡೇರಿಸಲು ಹ್ಯುಮಾನಿಟಿ ಫಸ್ಟ್ ಕಠಿಣ ಪರಿಶ್ರಮ ಮಾಡುತ್ತಿದೆ.

ಜಾತಿ, ಧರ್ಮ, ವರ್ಣಗಳನ್ನು ಪರಿಗಣಿಸದೆ ದುರ್ಬಲರಾದ ಜನರಿಗೆ ನೆರವು ನೀಡಬೇಕೆಂದು ಪವಿತ್ರ ಖುರ್‌ಆನ್ ಪದೇ ಪದೇ ಆಜ್ಞಾಪಿಸಿದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ನುಡಿದ ಹದೀಸುಗಳೆಂದು ದಾಖಲಿಸಲ್ಪಟ್ಟ ಅಸಂಖ್ಯಾತ ವಚನಗಳು ಮತ್ತು ಘಟನೆಗಳು ಅವರು ತಮ್ಮ ಸಂಪೂರ್ಣ ಜೀವಿತವನ್ನು ಮಾನವರ ಸೇವೆಗೋಸ್ಕರ ಹೇಗೆ ವಿನಿಯೋಗಿಸಿದರು ಮತ್ತು ತಮ್ಮ ಅನುಯಾಯಿಗಳನ್ನು ಅನ್ಯರೊಂದಿಗೆ ಸಹಾನುಭೂತಿಯಿಂದ ವರ್ತಿಸಲು ಹೇಗೆ ಉತ್ತೇಜಿಸಿದರು ಎಂಬುದರ ಬಗ್ಗೆ ಸಾಕ್ಷ್ಯಗಳನ್ನು ನೀಡುತ್ತವೆ. ನಿಶ್ಚಯವಾಗಿಯೂ ಹಝ್ರತ್ ಪೈಗಂಬರರು(ಸ) ಮಾನವರೆಲ್ಲರಿಗೂ ಅನುಗ್ರಹದಾಯಕರಾಗಿದ್ದರು. ಅವರು ತಮ್ಮ ಅನುಗ್ರಹಿಸಲ್ಪಟ್ಟ ನಡೆನುಡಿಗಳ ಮೂಲಕ ಇಸ್ಲಾಮ್ ಧರ್ಮದ ಭವ್ಯ ಉಪದೇಶಗಳ ಮೇಲೆ ಶಾಶ್ವತವಾಗಿ ಪ್ರಕಾಶಮಾನವಾಗಿರುವ ಬೆಳಕು ಚೆಲ್ಲಿದರು ಮತ್ತು ಮಾನವರ ಸೇವೆ ಮಾಡುವುದು ನಮ್ಮ ಧರ್ಮದ ಮೂಲಭೂತ ತತ್ವವೆಂದು ಪ್ರಾಯೋಗಿಕವಾಗಿ ತೋರಿಸಿಕೊಟ್ಟರು.

ಉದಾಹರಣೆಗೆ, ಅನಾಥರಿಗೆ ಸಹಾಯ ನೀಡಲು, ಪ್ರಯಾಣಿಕರಿಗೆ ನೆರವು ನೀಡಲು, ಬಡವರಿಗೂ ದುರ್ಬಲರಿಗೂ ರೋಗಿಗಳಿಗೂ ಅವರ ಆವಶ್ಯಕತೆಗಳನ್ನು ಈಡೇರಿಸಿಕೊಡಲು ಇಸ್ಲಾಮ್ ಧರ್ಮ ನಮಗೆ ಉಪದೇಶಿಸುತ್ತಿದೆ. ಇದಲ್ಲದೆ ನೆರೆಹೊರೆಯವರ ಬಗ್ಗೆ ಬಹಳ ದೊಡ್ಡ ಹೊಣೆಗಾರಿಕೆಗಳು ಮುಸ್ಲಿಮರಿಗೆ ಇವೆ ಎಂದು ಇಸ್ಲಾಮ್ ಉಪದೇಶಿಸುತ್ತಿದೆ. ಮುಸ್ಲಿಮರು ತಮ್ಮ ನೆರೆಹೊರೆಯವರೊಂದಿಗೆ ಕಾರುಣ್ಯದಿಂದಲೂ ಸಹಾನುಭೂತಿಯಿಂದಲೂ ವರ್ತಿಸಬೇಕೆಂದೂ ನೆರೆಹೊರೆಯವರಿಗೆ ಅವರಿಗೆ ಆವಶ್ಯಕವಾದ ಸಂದರ್ಭಗಳಲ್ಲಿ ಮತ್ತು ದುಃಖಕ್ಕೀಡಾದ ಸಂದರ್ಭಗಳಲ್ಲಿ ಸಹಾಯ ನೀಡಲು ಸದಾಕಾಲ ಸನ್ನದ್ಧರಾಗಬೇಕೆಂದೂ ಮುಸ್ಲಿಮರಿಗೆ ಉಪದೇಶಿಸಲಾಗಿದೆ. ಹಝ್ರತ್ ಪೈಗಂಬರರು(ಸ) ನುಡಿದ ಒಂದು ಪ್ರಸಿದ್ಧ ಹದೀಸು ವಚನದಲ್ಲಿ ಅವರು ಹೇಳುತ್ತಾರೆ: ದಿವ್ಯದೂತರಾದ ಜಿಬ್ರೀಲ್ ನನ್ನೊಂದಿಗೆ ನೆರೆಹೊರೆಯವರ ಹಕ್ಕುಗಳ ಬಗ್ಗೆ ಮತ್ತು ಅವರೊಂದಿಗೆ ಪ್ರೀತಿ ಮತ್ತು ಸಹಾನುಭೂತಿಯಿಂದ ವರ್ತಿಸುವ ಬಗ್ಗೆ ಎಷ್ಟು ಒತ್ತಿ ಹೇಳಿದರೆಂದರೆ ನಾನು ಯೋಚಿಸಿದೆ ನೆರೆಹೊರೆಯವರು ವಾರಸುದಾರರಾಗಿ ಸೇರಿಸಲ್ಪಡುವರೋ ಎಂದು.

ಇನ್ನೊಂದು ವಿಷಯವೇನೆಂದರೆ ನೆರೆಹೊರೆಯವರು ಎಂಬ ಪದ ವಿಶಾಲವಾದ ಅರ್ಥವನ್ನು ಹೊಂದಿದೆ. ಸಮೀಪದಲ್ಲಿ ವಾಸಿಸುವವರು ಮಾತ್ರವಲ್ಲ ದೂರದಲ್ಲಿ ವಾಸಿಸುವವರೂ ನೆರೆಹೊರೆಯವರಾಗಿದ್ದಾರೆ. ಪ್ರಯಾಣ ಮಾಡುವಾಗ ಜೊತೆಯಲ್ಲಿರುವವರು, ಕೆಲಸದ ಸ್ಥಳಗಳಲ್ಲಿ ಕೆಲಸದಲ್ಲಿ ಸಹಭಾಗಿಗಳಾದವರು, ಅಧೀನರಾಗಿ ಕೆಲಸ ಮಾಡುವವರು ಮತ್ತು ಇತರ ಅನೇಕರು ಇದರಲ್ಲಿ ಸೇರಿದ್ದಾರೆ. ವಾಸ್ತವಿಕವಾಗಿ ನಮ್ಮ ಸಮಾಜದ ಎಲ್ಲ ಸದಸ್ಯರನ್ನು ನಮ್ಮ ನೆರೆಹೊರೆಯವರೆಂದು ಗಣಿಸಬೇಕಾಗಿದೆ.

ಆದುದರಿಂದ ಎಲ್ಲ ಮಾನವರಿಗೆ ಅವರ ದುಃಖಗಳಲ್ಲಿಯೂ ನೋವುಗಳಲ್ಲಿಯೂ ನೆರವು ನೀಡುವುದು ಅಹ್ಮದಿ ಮುಸ್ಲಿಮರ ಧಾರ್ಮಿಕ ಹೊಣೆಗಾರಿಕೆಯಾಗಿದೆ. ಅಲ್ಲಾಹನ ಅನುಗ್ರಹದಿಂದ ಹ್ಯುಮಾನಿಟಿ ಫಸ್ಟ್ ಸಂಸ್ಥೆಯ ಕೆಲಸಗಳ ಮೂಲಕ ಅನೇಕ ಅಹ್ಮದಿ ಮುಸ್ಲಿಮರಿಗೆ ತಮ್ಮ ನೆರೆಹೊರೆಯವರಿಗೆ ಸೇವೆ ಮಾಡಲು ಮತ್ತು ಅವರ ಆವಶ್ಯಕತೆಗಳನ್ನು ಈಡೇರಿಸಲು ಸಾಧ್ಯವಾಗಿದೆ. ತಮ್ಮ ಸಮೀಪ ವಾಸವಾಗಿರುವವರಿಗೆ ಮಾತ್ರವಲ್ಲ ದೂರದಲ್ಲಿ ವಾಸಿಸುವವರಿಗೂ ಅನ್ಯ ದೇಶಗಳಲ್ಲಿಯೂ ಭೂಖಂಡಗಳಲ್ಲಿಯೂ ವಾಸಿಸುವವರಿಗೂ ನೆರವು ಅವರು ನೀಡುತ್ತಿದ್ದಾರೆ.

ಸರ್ವಶಕ್ತನಾದ ಅಲ್ಲಾಹನು ಮತ್ತು ಅವನ ಪವಿತ್ರ ಪೈಗಂಬರರು(ಸ) ಮುಸ್ಲಿಮರಿಗೆ ಉಪದೇಶಿಸಿದ್ದಾರೆ: ರೋಗಿಗಳ ನೋವುಗಳನ್ನು ನಿವಾರಿಸಲು, ಅವರಿಗೆ ವೈದ್ಯಕೀಯ ಶುಶ್ರೂಷೆ ಒದಗಿಸಲು ಅವರ ಬಗ್ಗೆ ಕಾಳಜಿ ವಹಿಸಿ ಅವರ ಆರೋಗ್ಯದ ಸ್ಥಿತಿಯ ಬಗ್ಗೆ ಕ್ರಮಬದ್ಧವಾಗಿ ವಿಚಾರಿಸುತ್ತಾ ಇರಬೇಕೆಂದು. ಇದಕ್ಕೆ ಸಂಬಂಧಿಸಿ ಹಝ್ರತ್ ಪೈಗಂಬರರು(ಸ) ಹೀಗೆ ಹೇಳಿದ್ದಾರೆ: ಅಲ್ಲಾಹನ ಪ್ರೀತಿ ಗಳಿಸಲಿಕ್ಕೋಸ್ಕರ ರೋಗಿಯನ್ನು ಸಂದರ್ಶಿಸುವಾಗ ದಿವ್ಯ ದೂತರೊಬ್ಬರು ಘೋಷಿಸುವರು– “ನೀವು ಹಾಕುವ ಪ್ರತಿಯೊಂದು ಹೆಜ್ಜೆ ಅನುಗ್ರಹಿಸಲ್ಪಡಲಿ. ನಿಮಗೆ ಸ್ವರ್ಗವಾಸ ಲಭಿಸುವಂತಾಗಲಿ.”

ಹಝ್ರತ್ ಪೈಗಂಬರರು(ಸ) ರೋಗಿಗಳ ಆರೈಕೆ ಮಾಡುವ ಬಗ್ಗೆ ಮುಸ್ಲಿಮರಿಗೆ ಉಪದೇಶಿಸಿರುವರಲ್ಲದೆ ಹೀಗೆ ಶುಭವಾರ್ತೆ ಸಹ ನೀಡಿದ್ದಾರೆ: “ರೋಗಿಗಳಿಗೆ ಹೃತ್ಪೂರ್ವಕ ಸೇವೆ ಮಾಡಲು ಪರಿಶ್ರಮ ಪಡುವವರಿಗೆ ಪರಲೋಕದಲ್ಲಿ ಪ್ರತಿಫಲ ಲಭಿಸುವುದು.” ಆದುದರಿಂದ ಯಾರು ಅಲ್ಲಾಹನು ತಮಗೆ ಒದಗಿಸಿದ ಸಂಪತ್ತಿನಿಂದ ಆಸ್ಪತ್ರೆಗಳನ್ನು ಸ್ಥಾಪಿಸಲು, ಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸಲು, ಆರೋಗ್ಯ ಸಂಬಂಧವಾದ ಸೇವೆ ಸಲ್ಲಿಸಲು ಖರ್ಚು ಮಾಡುತ್ತಾರೋ ಅವರು ವಾಸ್ತವಿಕವಾಗಿ ಪರಲೋಕದಲ್ಲಿ ತಮಗೆ ಮನೆಗಳನ್ನು ನಿರ್ಮಿಸುತ್ತಿದ್ದಾರೆ.

ಇಸ್ಲಾಮ್ ಧರ್ಮದ ಈ ಉಪದೇಶಗಳ ಬೆಳಕಿನಲ್ಲಿ ಜಾಗತಿಕ ಅಹ್ಮದಿಯಾ ಮುಸ್ಲಿಮ್ ಸಂಘಟನೆ ವಿವಿಧ ದೇಶಗಳಲ್ಲಿ ಅನೇಕ

ಆಸ್ಪತ್ರೆಗಳನ್ನೂ ಶಾಲೆಗಳನ್ನೂ ನಿರ್ಮಿಸಿದೆ. ಧಾರ್ಮಿಕ ವಿರೋಧದ ಕಾರಣದಿಂದ ಕೆಲವು ದೇಶಗಳಲ್ಲಿ ಅಹ್ಮದಿಯಾ ಜಮಾಅತಿಗೆ ನೇರವಾಗಿ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಾಗದ ದೇಶಗಳಲ್ಲಿ ನಮ್ಮ ಹೊಣೆಗಾರಿಕೆಗಳನ್ನು ನೆರವೇರಿಸಲು ಮತ್ತು ಮಾನವರಿಗೆ ಸೇವೆ ಸಲ್ಲಿಸಲು ನಮಗಿರುವ ಹಂಬಲವನ್ನು ಈಡೇರಿಸಲು ಹ್ಯುಮಾನಿಟಿ ಫಸ್ಟ್ ಸಂಸ್ಥೆ ನಮಗೆ ಅತ್ಯುತ್ತಮ ಮಾರ್ಗವನ್ನು ಒದಗಿಸಿಕೊಟ್ಟಿದೆ.

ಇದೇ ರೀತಿ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: ಅನಾಥರಿಗೆ ಆಹಾರವನ್ನೂ ಸಂರಕ್ಷಣೆಯನ್ನೂ ಒದಗಿಸುವವರು ಅಲ್ಲಾಹನ ಸಾಮೀಪ್ಯ ಗಳಿಸುವರು. ಅನಾಥರ ಆವಶ್ಯಕತೆಗಳನ್ನು ಕಡೆಗಣಿಸುವವರು ಅಲ್ಲಾಹನ ಕ್ರೋಧಕ್ಕೆ ಪಾತ್ರರಾಗುವರು.

ಹಝ್ರತ್ ಪೈಗಂಬರರು(ಸ) ಅನಾಥರನ್ನು ಸಂರಕ್ಷಿಸುವ ಬಗ್ಗೆ ಮತ್ತು ಬಲಹೀನರಿಗೂ ನಿರ್ಗತಿಕರಿಗೂ ನೆರವು ನೀಡುವ ಬಗ್ಗೆ ಪದೇ ಪದೇ ಒತ್ತಿ ಹೇಳಿರುವರು. ನಿಶ್ಚಯವಾಗಿಯೂ ಹೀಗೆ ವರದಿ ಮಾಡಲಾಗಿದೆ: ಪೈಗಂಬರರು(ಸ) ಹೀಗೆ ಹೇಳಿದರು: "ನನ್ನನ್ನು ಬಡವರ ಮತ್ತು ಬಲಹೀನರ ಮಧ್ಯೆ ಕಾಣಿರಿ. ನೀವು ಬಲಹೀನರಿಗೂ ಸವಲತ್ತು ರಹಿತರಿಗೂ ನೆರವು ನೀಡುವ ಕಾರಣದಿಂದ ನಿಮಗೆ ಅನುಗ್ರಹ ನೀಡಲಾಗಿದೆ."

ಹೀಗೆ ಹೇಳುವ ಮೂಲಕ ಹಝ್ರತ್ ಪೈಗಂಬರರು(ಸ) ಹೀಗೆ ಘೋಷಿಸುತ್ತಿದ್ದಾರೆ: ಬಲಹೀನರಾದ ದುರ್ಬಲ ಜನರೊಂದಿಗೆ ನಾನು ಭುಜಕ್ಕೆ ಭುಜ ತಾಗಿಸಿ ನಿಂತಿರುತ್ತೇನೆ. ಆದುದರಿಂದ ಪೈಗಂಬರರ ಪ್ರೀತಿ ಮತ್ತು ಅಲ್ಲಾಹನ ಪ್ರೀತಿ ಗಳಿಸಲು ಇಚ್ಛಿಸುವವರು ಬಲಹೀನರಿಗೆ ಮತ್ತು ವಿಪತ್ತುಗಳಿಗೀಡಾದವರಿಗೆ ನೆರವು ನೀಡಲು ಮುಂದಾಗಬೇಕು.

ನಿಸ್ಸಂಶಯವಾಗಿಯೂ ಹಝ್ರತ್ ಪೈಗಂಬರರ(ಸ) ಭವ್ಯ ಉಪದೇಶಗಳೂ ಅವರ ನಡೆವಳಿಕೆಗಳೂ ಮುಸ್ಲಿಮ್ ಸಮುದಾಯಕ್ಕೆ ಮಾತ್ರವಲ್ಲ ಲೋಕದ ಎಲ್ಲ ಜನರಿಗೆ ಶಾಶ್ವತವಾದ ಮಾರ್ಗದರ್ಶಕ ಸೂತ್ರಗಳಾಗಿವೆ. ಬಲಹೀನರಿಗೆ, ಸವಲತ್ತು ರಹಿತರಿಗೆ, ಅನಾಥರಿಗೆ ನೆರವು ನೀಡುವುದು ಹಝ್ರತ್ ಪೈಗಂಬರರ ಚರ್ಯೆಯಾಗಿತ್ತು. ಅವರು ತಮ್ಮ ಅನುಯಾಯಿಗಳಿಂದ ಇಂತಹ ವರ್ತನೆಗಳನ್ನು ಪ್ರತೀಕ್ಷಿಸಿದ್ದರು. ಆದುದರಿಂದ ಬಡತನದಿಂದ ನರಳುವವರಿಗೆ, ಸಂಕಷ್ಟಕ್ಕೀಡಾದವರಿಗೆ ನೆರವು ನೀಡಲು ದೊರಕುವ ಸದವಕಾಶವನ್ನು ಎಂದೂ ಕಳೆದುಕೊಳ್ಳಬೇಡಿರಿ. ಅಂತಹ ಸಂದರ್ಭಗಳಲ್ಲಿ ನೀವು ಜನರಿಗೆ ನೆರವು ಒದಗಿಸುತ್ತಿರುವಿರಿ ಎಂಬ ಹೆಮ್ಮೆ ನಿಮ್ಮಲ್ಲಿ ಒಂದಿಷ್ಟು ಕೂಡ ತೋರಬಾರದು. ವಾಸ್ತವಿಕವಾಗಿ ಆ ಜನರೇ ನಿಮಗೆ ಉಪಕಾರ ಮಾಡುತ್ತಿದ್ದಾರೆ. ಏಕೆಂದರೆ ಅಲ್ಲಾಹನ ಸಂಪ್ರೀತಿ ಗಳಿಸಲು ಮತ್ತು ಇಹಲೋಕದಲ್ಲೂ ಪರಲೋಕದಲ್ಲೂ ಅನುಗ್ರಹ ಬಾಚಿಕೊಳ್ಳಲು ನಿಮಗೆ ಸದವಕಾಶ ನೀಡುತ್ತಿದ್ದಾರೆ.

ಅಲ್ಲಾಹನ ಅನುಗ್ರಹದಿಂದ ಅಹ್ಮದಿ ಮುಸ್ಲಿಮರು ತಮ್ಮ ಸಂಪತ್ತನ್ನು ಸಂಕಷ್ಟಗಳಿಗೆ ಗುರಿಯಾದವರಿಗೆ ಮತ್ತು ದಾರಿದ್ರ್ಯ ಪೀಡಿತರಿಗೆ ನೆರವು ನೀಡಲು ಧಾರಾಳವಾಗಿ ವಿನಿಯೋಗಿಸುತ್ತಿದ್ದಾರೆ. ಈ ಉದ್ದೇಶಲಕ್ಷ್ಯಗಳನ್ನು ಈಡೇರಿಸಲು ಹ್ಯುಮಾನಿಟಿ ಫಸ್ಟ್ ಸಂಸ್ಥೆಯನ್ನು ಸ್ಥಾಪಿಸಲಾಗಿದೆ.

ಹಝ್ರತ್ ಪೈಗಂಬರರು(ಸ) ಹೀಗೆ ಸಹ ಹೇಳಿದ್ದಾರೆ. ಹಸಿದವರಿಗೆ ಆಹಾರ ಒದಗಿಸಬೇಕು. ಆದುದರಿಂದ ಹ್ಯುಮಾನಿಟಿ ಫಸ್ಟ್ ಫುಡ್ ಬ್ಯಾಂಕ್ (ಆಹಾರ ಸಂಗ್ರಹಾಲಯ)ಗಳನ್ನು ಸ್ಥಾಪಿಸಿದೆ. ಅವುಗಳಿಂದ ಸಹಸ್ರಾರು ಜನರು ನೆರವು ಪಡೆಯುತ್ತಿದ್ದಾರೆ. ಕೆನಡ ಮತ್ತು ಯು.ಕೆ. ಘಟಕಗಳು ಬಹಳ ಉತ್ತಮ ಸೇವೆ ಸಲ್ಲಿಸಿದ್ದಾರೆ. ಬೇರೆ ದೇಶಗಳ ಘಟಕಗಳು ತಮ್ಮ ಸಾಮರ್ಥ್ಯಗಳಿಗೆ ಅನುಸಾರವಾಗಿ ಕಾರ್ಯನಿರತವಾಗಿವೆ. ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕದ ಘಟಕ ಸಹ ಫುಡ್ ಪ್ಯಾಂಟ್ರೀಸ್ (ಆಹಾರ ಉಗ್ರಾಣಗಳನ್ನು) ಸ್ಥಾಪಿಸಿದೆ. ಅವುಗಳಿಂದ ಸಾವಿರಾರು ಜನರು ಪ್ರಯೋಜನವನ್ನು ಪಡೆಯುತ್ತಿದ್ದಾರೆ.

ಅಭಾವ ಪೀಡಿತರಿಗೆ ಉದಾರವಾಗಿ ನೆರವು ನೀಡಿದ ಬಗ್ಗೆ ಇಸ್ಲಾಮಿನ ಪವಿತ್ರ ಪೈಗಂಬರರು(ಸ) ಹೀಗೆ ಹೇಳಿದ್ದಾರೆ: ಪ್ರತಿ ದಿನ ಇಬ್ಬರು ದಿವ್ಯದೂತರು ಭೂಮಿಗೆ ಇಳಿದು ಬರುತ್ತಾರೆ. ಅವರಲ್ಲೊಬ್ಬ ಹೀಗೆ ಹೇಳುತ್ತಾರೆ: ಓ ಅಲ್ಲಾಹ್ ದಾನವಾಗಿ ನೀಡುವವನಿಗೆ ನೀನು ಧಾರಾಳವಾಗಿ ನೀಡು. ಆತನನ್ನು ಅನುಸರಿಸುತ್ತಾ ನೀಡುವವರ ಸಂಖ್ಯೆ ವರ್ಧಿಸಲಿ. ಆಗ ಎರಡನೆಯ ದಿವ್ಯದೂತ ಹೇಳುವರು: "ಓ ಅಲ್ಲಾಹ್, ದಾನಧರ್ಮ ನೀಡದೆ ಜಿಪುಣತೆಯಿಂದ ವರ್ತಿಸುವವನು ನಾಶವಾಗಲಿ. ಅವನ ಸಂಪತ್ತು ನಿಶ್ಶೇಷವಾಗಲಿ."

ಜನರಿಗೆ ಸೇವೆ ಮಾಡುವ ಏಕಮಾತ್ರ ಉದ್ದೇಶದಿಂದ ಹ್ಯುಮಾನಿಟಿ ಫಸ್ಟ್ ಸಂಸ್ಥೆ ಸ್ಥಾಪಿಸಲಾಗಿದೆ ಮತ್ತು ಅದು ಸಾಂಪತ್ತಿಕ ನೆರವನ್ನು ಗಳಿಸುತ್ತಿದೆ. ಹ್ಯುಮಾನಿಟಿ ಫಸ್ಟ್ ಸಂಸ್ಥೆಯ ಸೇವಾಮನೋಭಾವವನ್ನು ಗುರುತಿಸಿದ ಅನೇಕ ಅಹ್ಮದಿಯೇತರ ಮುಸ್ಲಿಮರು ಮತ್ತು ಮುಸ್ಲಿಮೇತರ ವ್ಯಕ್ತಿಗಳು ಮತ್ತು ಗುಂಪುಗಳು ಗಮನಾರ್ಹವಾದ ಸಾಂಪತ್ತಿಕ ನೆರವು ನೀಡುತ್ತಿದ್ದಾರೆ ಮತ್ತು ಹ್ಯುಮಾನಿಟಿ ಫಸ್ಟ್ ಮೇಲೆ ವಿಶ್ವಾಸ ಹೊಂದಿದ್ದಾರೆ.

ಅವರು ಹೀಗೆ ಕಂಡುಕೊಂಡಿದ್ದಾರೆ– ಇತರ ಸೇವಾ ಸಂಸ್ಥೆಗಳಿಗೆ ಹೋಲಿಸಿ ನೋಡುವಾಗ ಹ್ಯುಮಾನಿಟಿ ಫಸ್ಟ್ ತನ್ನ ಸ್ವಯಂ ಸೇವಕರ ದಳವನ್ನು ಹೆಚ್ಚಾಗಿ ತನ್ನ ಸೇವಾ ಕಾರ್ಯಗಳಿಗೆ ಬಳಸುತ್ತಿದೆ. ಆದುದರಿಂದ ಸಂಸ್ಥೆಯ ಆಡಳಿತೆಯ ವೆಚ್ಚಕ್ಕೋಸ್ಕರ ಅತ್ಯಂತ ಕಡಿಮೆ ಹಣ ಖರ್ಚು ಮಾಡಲಾಗುತ್ತಿದೆ. ಈ ಕಾರಣದಿಂದ ಉದಾರವಾಗಿ ದೊರೆತ ನೆರವಿನ ಹಣದ ಅತ್ಯಂತ ಗರಿಷ್ಠ ಮಟ್ಟವನ್ನು ನೆರವು ನೀಡಲು ವಿನಿಯೋಗಿಸಲಾಗುತ್ತಿದೆ.

ಹ್ಯುಮಾನಿಟಿ ಫಸ್ಟ್ ಸಂಸ್ಥೆಯ ಪ್ರತಿಯೊಬ್ಬ ಸದಸ್ಯನ ಮುಖ್ಯ ಉದ್ದೇಶಲಕ್ಷ್ಯ ಸಮಾಜದ ಅತ್ಯಂತ ದುರ್ಬಲರಿಗೆ ನೆರವು ಒದಗಿಸುವುದಾಗಿರಬೇಕು. ಯಾವುದೇ ರೀತಿಯ ಸ್ವಾರ್ಥ ಉದ್ದೇಶ ಯಾರಿಗೂ ಇರಬಾರದು. ನೀವು ಖಾತರಿಮಾಡಿ ಕೊಳ್ಳಿರಿ. ನೀವು ನಿಸ್ವಾರ್ಥತೆಯಿಂದ ಅಲ್ಲಾಹನ ಸಂಪ್ರೀತಿ ಗಳಿಸಲಿಕ್ಕೋಸ್ಕರ ಮಾತ್ರ ಅಲ್ಲಾಹನ ಸೃಷ್ಟಿಗಳಿಗೆ ಸೇವೆ ಸಲ್ಲಿಸುವಿರಾದರೆ ನಿಶ್ಚಯವಾಗಿಯೂ ಅಲ್ಲಾಹನು ನಿಮಗೆ ಇಹಲೋಕದಲ್ಲೂ ಪರಲೋಕದಲ್ಲೂ ಪ್ರತಿಫಲ ನೀಡುವನು. ಹ್ಯುಮಾನಿಟಿ ಫಸ್ಟ್ ಸಂಸ್ಥೆಯ ಆಡಳಿತೆ ವ್ಯವಸ್ಥೆ ನಮ್ಮ

ಜಮಾಅತಿನ ಆಡಳಿತೆ ವ್ಯವಸ್ಥೆಗೆ ಅಧೀನವಾಗಿರದೆ ಸ್ವತಂತ್ರವಾದ ಆಡಳಿತೆ ವ್ಯವಸ್ಥೆ ಹೊಂದಿದೆ. ಆದುದರಿಂದ ನಮ್ಮ ಉದ್ದೇಶಲಕ್ಷ್ಯವನ್ನು ಪ್ರಶ್ನಿಸಲು ಯಾರಿಗೂ ಸಾಧ್ಯವಾಗಲಾರದು. ನಾವು ಧಾರ್ಮಿಕವಾಗಿ ಅಥವಾ ಬೇರೆ ರೀತಿಯ ಲಾಭವನ್ನು ಗಳಿಸುತ್ತಿದ್ದೇವೆ ಎಂದು ಸೂಚಿಸಲು ಸಾಧ್ಯವಾಗದು.

ಹೀಗಿದ್ದರೂ ನಿಮ್ಮ ಸೇವಾ ಕಾರ್ಯಗಳಿಗೆ ದೊರಕುವ ಸ್ಫೂರ್ತಿ ಇಸ್ಲಾಮ್ ಧರ್ಮದ ಉಪದೇಶಗಳಿಂದ ದೊರಕಿದುದು ಎಂಬುದನ್ನು ಎಂದೂ ನೀವು ಮರೆತುಬಿಡಬಾರದು. ನಿಮ್ಮ ಧರ್ಮ ಮತ್ತು ಅಲ್ಲಾಹನ ಬಗ್ಗೆ ನಿಮಗಿರುವ ವಿಶ್ವಾಸ ಮಾನವರ ಸೇವೆ ಮಾಡಲು ನಿಮಗೆ ಉತ್ತೇಜನ ನೀಡುತ್ತಿದೆ ಎಂಬ ವಾಸ್ತವಿಕಾಂಶವನ್ನು ಬಹಿರಂಗಪಡಿಸಲು ಹಿಂಜರಿಯಬೇಡಿರಿ. ಆದುದರಿಂದ ಹ್ಯುಮಾನಿಟಿ ಫಸ್ಟ್ ಯಾವುದಾದರೂ ಸೇವೆ ಮಾಡುವಾಗ ಅಥವಾ ದೇಣಿಗೆಗಳನ್ನು ಆಮಂತ್ರಿಸುವಾಗ ನೀವು ಇಸ್ಲಾಮಿನ ಸುಂದರ ತತ್ವಗಳಿಂದ ಸ್ಫೂರ್ತಿ ಗಳಿಸಿದವರೆಂಬುದನ್ನು ಜನರಿಗೆ ತಿಳಿಸಿಕೊಡಿರಿ ಮತ್ತು ನಿಮ್ಮ ಧರ್ಮ ನಿಮ್ಮ ಮೇಲೆ ಅನ್ಯರನ್ನು ಸಹಾನುಭೂತಿಯಿಂದಲೂ ಉದಾರ ಮನೋಭಾವದಿಂದಲೂ ಸೇವೆ ಮಾಡಬೇಕೆಂಬ ಹೊಣೆಗಾರಿಕೆಯನ್ನು ಹೊರಿಸಿದೆ ಎಂಬುದನ್ನು ಮನವರಿಕೆ ಮಾಡಿಕೊಡಿರಿ.

ಹಝ್ರತ್ ಪೈಗಂಬರರು[ಸ] ದೌರ್ಜನ್ಯ ಪೀಡಿತರಿಗೆ ಮತ್ತು ಸಂಕಷ್ಟ ಪೀಡಿತರಿಗೆ ನೆರವು ನೀಡಬೇಕೆಂಬ ಇಚ್ಛೆಯನ್ನು ತನ್ನ ಅನುಯಾಯಿಗಳಲ್ಲಿ ಹೇಗೆ ಮೈಗೂಡಿಸಿದರೆಂಬುದರ ಬಗ್ಗೆ ಇದರ ಮೊದಲು ಪ್ರಸ್ತಾಪಿಸಿರುವೆನು. ಪೈಗಂಬರರ[ಸ] ಹೆಜ್ಜೆ ಗುರುತುಗಳನ್ನು ಅನುಸರಿಸಿ ಇಂದಿನ ಕಾಲಘಟ್ಟದಲ್ಲಿ ವಾಗ್ದತ್ತ ಮಸೀಹರು[ಅ] ಮಾನವರಿಗೆ ಸೇವೆ ಮಾಡುವ ಬಗ್ಗೆ ನಿರಂತರವಾಗಿ ತನ್ನ ಜಮಾಅತಿನ ಜನರಿಗೆ ಉಪದೇಶಿಸುತ್ತಾ ಇದ್ದರಲ್ಲದೆ ಬಡವರಿಗೂ ನಿರ್ಗತಿಕರಿಗೂ ನೆರವು ನೀಡುವ ಬಗ್ಗೆ ಒತ್ತಿ ಹೇಳುತ್ತಿದ್ದರು. ಈ ಕಾರಣದಿಂದ ಅಹ್ಮದಿಯಾ ಸಂಘಟನೆಯ ಜನರಲ್ಲಿ ಮಾನವರಿಗೆ ಸೇವೆ ಮಾಡುವ ಬಗ್ಗೆ ವಿಶಿಷ್ಟವಾದ ಆಶೆಯೂ ಹಂಬಲವೂ ಇರುತ್ತದೆ. ಮಾನವರ ಹಕ್ಕುಗಳನ್ನು ನೆರವೇರಿಸಿಕೊಡುವ ಬಗ್ಗೆ ಒಂದು ಸಂದರ್ಭದಲ್ಲಿ ಹೀಗೆ ವಾಗ್ದತ್ತ ಮಸೀಹರು[ಅ] ಹೇಳಿದರು: "ಮಾನವರ ಹಕ್ಕುಗಳನ್ನು ಈಡೇರಿಸಿಕೊಡುವುದು ಅತ್ಯಂತ ಅಪಾಯಕರ ಮತ್ತು ತ್ರಾಸದಾಯಕ ಪಂಥಾಹ್ವಾನವಾಗಿದೆ. ಅದು ಪ್ರತಿಯೊಬ್ಬನು ಎಲ್ಲ ಕಾಲಗಳಲ್ಲಿಯೂ ಎದುರಿಸಬೇಕಾದ ಒಂದು ಪರೀಕ್ಷೆಯಾಗಿದೆ. ಆದುದರಿಂದ ಇದಕ್ಕೆ ಸಂಬಂಧಿಸಿ ಯಾವುದೇ ಹೆಜ್ಜೆ ಹಾಕುವ ಮೊದಲು ಬಹಳ ಜಾಗರೂಕತೆಯಿಂದ ವರ್ತಿಸಬೇಕು. ನನ್ನ ದೃಢವಾದ ವಿಶ್ವಾಸವೇನೆಂದರೆ ತನ್ನ ಶತ್ರುವಿನೊಂದಿಗೆ ಕೂಡ ಯಾರೂ ಕಠಿಣವಾಗಿ ವರ್ತಿಸಬಾರದು."

ಇನ್ನೊಂದು ಸ್ಥಳದಲ್ಲಿ ವಾಗ್ದತ್ತ ಮಸೀಹರು[ಅ] ಹೀಗೆ ಹೇಳುತ್ತಾರೆ: "ಮಾನವರನ್ನು ಪ್ರೀತಿಸುವುದು ಮತ್ತು ಅನ್ಯರಿಗೆ ಕಾರುಣ್ಯದೋರುವುದು ಅಲ್ಲಾಹನ ಆರಾಧನೆಯ ಬೃಹತ್ ರೂಪವಾಗಿದೆ ಮತ್ತು ಅವನ ಸಂಪ್ರೀತಿಯನ್ನೂ ಬಹುಮಾನಗಳನ್ನೂ ಗಳಿಸುವ ಮಹತ್ವಪೂರ್ಣ ಮಾರ್ಗವಾಗಿದೆ."

ಮಾನವರ ಸೇವೆ ಮಾಡುವ ಬಗ್ಗೆ ವಿವರಿಸುತ್ತಾ ವಾಗ್ದತ್ತ ಮಸೀಹ್[ಅ] ಹೇಳುತ್ತಾರೆ: "ಧರ್ಮವನ್ನು ಮತ್ತು ವಂಶವನ್ನು ಪರಿಗಣಿಸದೆ ನೀವು ಎಲ್ಲ ಜನರೊಂದಿಗೆ ಪ್ರೀತಿ ಮತ್ತು ಕಾರುಣ್ಯದೊಂದಿಗೆ ವರ್ತಿಸಬೇಕು. ಹಸಿದವರಿಗೆ ಆಹಾರ ನೀಡಬೇಕೆಂದೂ ಬಂಧಿತರನ್ನು ಬಿಡುಗಡೆಗೊಳಿಸಬೇಕೆಂದೂ ಸಾಲದಿಂದ ಬಳಲುವವರ ಸಾಲ ತೀರಿಸಬೇಕೆಂದೂ ಅನ್ಯರ ಹೊರೆಯನ್ನು ಹೊರಬೇಕೆಂದೂ ಮಾನವರಿಗೆ ಸಲ್ಲಬೇಕಾದ ಹೊಣೆಗಾರಿಕೆಗಳನ್ನು ಈಡೇರಿಸಬೇಕೆಂದೂ ಸರ್ವಶಕ್ತನಾದ ಅಲ್ಲಾಹನು ಪದೇ ಪದೇ ಆಜ್ಞಾಪಿಸುತ್ತಾನೆ."

ಮೇಲೆ ವಿವರಿಸಿದ ಉದ್ದೇಶಲಕ್ಷ್ಯಗಳನ್ನು ಈಡೇರಿಸಲು ಹ್ಯುಮಾನಿಟಿ ಫಸ್ಟ್ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಜನರ ನಂಬಿಕೆಗಳನ್ನೂ ಹಿನ್ನೆಲೆಯನ್ನೂ ಪರಿಗಣಿಸದೆ ಮಾನವಸೇವೆ ಮಾಡಲು ಇದು ಸ್ಥಾಪಿಸಲ್ಪಟ್ಟಿದೆ. ರೋಗಬಾಧಿತರಾದವರಿಗೆ ಚಿಕಿತ್ಸೆ ನೀಡಲು ಈ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಅನಾಥರಿಗೆ ಸಂರಕ್ಷಣೆಯನ್ನು ನೀಡಲು, ಸಾಲದಿಂದ ಬಳಲುವವರಿಗೆ ನೆರವು ನೀಡಲು, ಹಸಿದವರಿಗೆ ಆಹಾರ ನೀಡಲು, ದಾಹದಿಂದ ಬಳಲುವವರಿಗೆ ದಾಹ ಶಮನ ನೀಡಲು ಸಹ ಈ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ನೈಸರ್ಗಿಕ ವಿಪತ್ತುಗಳ ಕಾರಣದಿಂದ ದಿಢೀರೆಂದು ಜೀವಿತವೇ ಬುಡಮೇಲಾದವರಿಗೆ ನೆರವು ನೀಡಲು ಮತ್ತು ತಾವು ಯಾವುದೇ ತಪ್ಪು ಮಾಡದಿದ್ದರೂ ಹತಾಶರಾಗಿ ಜೀವಿಸುತ್ತಿರುವ ಜನರ ಜೀವಿತವನ್ನು ಸುಧಾರಿಸಲು ಈ ಸಂಸ್ಥೆಯನ್ನು ಸ್ಥಾಪಿಸಲಾಗಿದೆ.

ಮಾನವರಿಗೆ ವಾಸ್ತವಿಕ ಮತ್ತು ನಿರಂತರ ಕಾರುಣ್ಯದೋರುವ ಬಗ್ಗೆ ಉಪದೇಶಿಸುತ್ತಾ ವಾಗ್ದತ್ತ ಮಸೀಹ್[ಅ] ತನ್ನ ಅನುಯಾಯಿಗಳೊಂದಿಗೆ ಹೀಗೆ ಹೇಳಿದರು: "ಪ್ರತಿ ದಿನ ಪ್ರತಿಯೊಬ್ಬನು ತನ್ನನ್ನು ಪರಿಶೀಲಿಸಬೇಕು. ತಾನು ಅನ್ಯರ ಬಗ್ಗೆ ಎಷ್ಟು ಕಾಳಜಿ ಹೊಂದಿರುವನೆಂದೂ ತನ್ನ ಸಹೋದರರ ಬಗ್ಗೆ ಎಷ್ಟರ ಮಟ್ಟಿಗೆ ಪ್ರೀತಿ ಮತ್ತು ಕಾರುಣ್ಯ ಹೊಂದಿರುವೆನೆಂದೂ ಪರಿಶೀಲಿಸಬೇಕು. ಅನ್ಯರ ಬಗ್ಗೆ ಕಾರುಣ್ಯದಿಂದ ವರ್ತಿಸುವುದು ಬೃಹತ್ತಾದ ಹೊಣೆಗಾರಿಕೆಯಾಗಿದೆ. ಮಾನವರಿಗೆ ಭಾರವಾಗಿ ತೋರುವುದೂ ಆಗಿದೆ."

ಅನ್ಯರಿಗೆ ಸೇವೆ ಮಾಡುವ ಬಗ್ಗೆ ವರ್ತಿಸಬೇಕಾದ ವಿಧಾನದ ಬಗ್ಗೆ ಬೆಳಕು ಚೆಲ್ಲುವ ಒಂದು ಹದೀಸು ಬಗ್ಗೆ ಪ್ರಸ್ತಾಪಿಸುತ್ತಾ ವಾಗ್ದತ್ತ ಮಸೀಹ್[ಅ] ಹೀಗೆ ಹೇಳಿದರು: ಒಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ – ಶಿಕ್ಷೆ ರಕ್ಷೆಯ ದಿನ ಅಲ್ಲಾಹನು ಹೀಗೆ ಹೇಳುವನು: 'ನಾನು ಹಸಿವೆಯಿಂದ ಬಳಲಿದ್ದೆ. ಆದರೆ ನೀನು ನನಗೆ ಆಹಾರ ನೀಡಲಿಲ್ಲ. ನಾನು ದಾಹಬಾಧಿತನಾಗಿದ್ದೆ. ಆದರೆ ನೀನು ನನಗೆ ನೀರು ನೀಡಲಿಲ್ಲ. ನಾನು ರೋಗಿಯಾಗಿದ್ದೆ. ನೀನು ನನ್ನನ್ನು ಸಂದರ್ಶಿಸಲಿಲ್ಲ ಮತ್ತು ಸಾಂತ್ವನ ನೀಡಲಿಲ್ಲ.' ಆಗ ಅಲ್ಲಾಹನಿಂದ ಸಂಬೋಧಿಸಲ್ಪಟ್ಟವರು ಹೀಗೆ ಹೇಳುವರು: 'ಹೇ ನಮ್ಮ ಪ್ರಭು, ನೀನು ಯಾವಾಗ ಹಸಿವೆಯಿಂದ ಬಳಲಿದಾಗ ನಾವು ನಿನಗೆ ಆಹಾರ ನೀಡಲಿಲ್ಲ? ನೀನು ಯಾವಾಗ ದಾಹದಿಂದ ಬಳಲಿದಾಗ ನಾವು ನಿನಗೆ ದಾಹಶಮನ ನೀಡಲಿಲ್ಲ? ನೀನು ಯಾವಾಗ ರೋಗಿಯಾಗಿದ್ದಾಗ ನಾವು ನಿನಗೆ ಸಾಂತ್ವನ ನೀಡಲಿಲ್ಲ?' ಆಗ ಸರ್ವಶಕ್ತನಾದ ಅಲ್ಲಾಹನು ಹೀಗೆ ಉತ್ತರ ನೀಡುವನು: "ನನಗೆ

ಪ್ರಿಯನಾದ ಒಬ್ಬನು ಮೇಲೆ ವಿವರಿಸಿದ ಹಾಗೆ ಬಳಲುತ್ತಿದ್ದಾಗ ನೀವು ಅವನ ಮೇಲೆ ಕಾರುಣ್ಯದ್ದೋರಿ ವರ್ತಿಸಲಿಲ್ಲ. ಅವನೊಂದಿಗೆ ನೀವು ಪ್ರೀತಿಯಿಂದ ವರ್ತಿಸುತ್ತಿದ್ದರೆ ಅದು ವಾಸ್ತವಿಕವಾಗಿ ನನ್ನೊಂದಿಗೆ ಪ್ರೀತಿಯಿಂದ ವರ್ತಿಸಿದಂತೆ ಆಗುತ್ತಿತ್ತು."

ಇದೇ ರೀತಿ ಇನ್ನೊಂದು ಗುಂಪಿನ ಜನರೊಂದಿಗೆ ಅಲ್ಲಾಹನು ಹೇಳುವನು: "ನೀವು ನನ್ನೊಂದಿಗೆ ಕಾರುಣ್ಯದಿಂದಲೂ ಪ್ರೀತಿಯಿಂದಲೂ ವರ್ತಿಸಿದ ಕಾರಣದಿಂದ ನಿಮಗೆ ಕೃತಜ್ಞನಾಗಿದ್ದೇನೆ. ನಾನು ಹಸಿದಿದ್ದಾಗ ನೀವು ಆಹಾರ ನೀಡಿದಿರಿ. ನಾನು ದಾಹದಿಂದ ಬಳಲಿದಾಗ ನೀವು ನನ್ನ ದಾಹಶಮನ ಗೊಳಿಸಿದಿರಿ." ಆಗ ಆ ಗುಂಪಿನ ಜನರು ಹೇಳುವರು: "ನಮ್ಮ ಪ್ರಭೂ ನಾವು ನಿನ್ನೊಂದಿಗೆ ಆ ರೀತಿ ಯಾವಾಗ ವರ್ತಿಸಿದೆವು? ಅದರ ಬಗ್ಗೆ ನಮಗೆ ತಿಳಿದಿಲ್ಲ." ಆಗ ಅಲ್ಲಾಹನು ಹೀಗೆ ಉತ್ತರ ಹೇಳುವನು: "ನನಗೆ ಪ್ರಿಯನಾದ ವ್ಯಕ್ತಿಗೆ ನೀವು ಪ್ರೀತಿಯನ್ನೂ ಕಾರುಣ್ಯವನ್ನೂ ತೋರಿಸಿದಾಗ ನೀವು ವಾಸ್ತವಿಕವಾಗಿ ನನ್ನನ್ನು ಪ್ರೀತಿಸುವವರಾಗಿ ವರ್ತಿಸುತ್ತಿರುವಿರಿ."

ಅಲ್ಲಾಹನ ಸೃಷ್ಟಿಗಳನ್ನು ಪ್ರೀತಿಸುವುದು ವಾಸ್ತವಿಕವಾಗಿ ಮಹತ್ವಪೂರ್ಣವಾದುದೂ ಸರ್ವಶಕ್ತನಾದ ಅಲ್ಲಾಹನ ಮೆಚ್ಚುಗೆಗೆ ಪಾತ್ರವಾಗುವುದೂ ಆಗಿದೆ. ಆದುದರಿಂದ ಹ್ಯುಮಾನಿಟಿ ಫಸ್ಟ್ ಸಂಸ್ಥೆಯ ಸದಸ್ಯರು ಮಾನವರ ಏಳಿಗೆಯನ್ನೂ ನೆಮ್ಮದಿಯನ್ನೂ ಆಶಿಸುತ್ತಾ ಕಠಿಣ ಪರಿಶ್ರಮ ಮಾಡಬೇಕಾಗಿದೆ. ವಿಶ್ರಾಂತಿಯನ್ನು ಎಂದೂ ಆಶಿಸಬೇಡಿರಿ ಮತ್ತು ಹಿಂದೆ ನಡೆಸಿದ ಕಾರ್ಯಗಳಿಂದ ಮಾತ್ರ ತೃಪ್ತರಾಗಬೇಡಿರಿ. ನೀವು ಭವಿಷ್ಯತ್ ಕಾಲದ ಬಗ್ಗೆ ನೋಡಿರಿ. ಮಾನವರಿಗೋಸ್ಕರ ನಿಮ್ಮ ಚಟುವಟಿಕೆಗಳನ್ನು ಎಲ್ಲಿಗೆ ವಿಸ್ತರಿಸಬಹುದು ಎಂಬುದರ ಬಗ್ಗೆ ಚಿಂತಿಸಿರಿ. ಅತ್ಯಂತ ಕನಿಷ್ಠ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಅತ್ಯಂತ ಗರಿಷ್ಠ ಸೇವೆಯನ್ನು ಜನರಿಗೆ ಒದಗಿಸಬಹುದು ಎಂಬುದು ಯಾವಾಗಲೂ ನಿಮ್ಮ ಉದ್ದೇಶಲಕ್ಷ್ಯವಾಗಿರಬೇಕು.

ನಾನು ಹಿಂದೆ ಹೇಳಿದ ಹಾಗೆ ಹ್ಯುಮಾನಿಟಿ ಫಸ್ಟ್ ಸಂಸ್ಥೆ ಒಳ್ಳೆಯ ಹೆಸರು ಗಳಿಸಿದೆ. ಅನೇಕ ಅನ್ಯ ಸಂಸ್ಥೆಗಳು ಹೀಗೆ ಗುರುತಿಸಿಕೊಂಡಿವೆ– ದೊಡ್ಡ ಸೇವಾ ಸಂಸ್ಥೆಗಳು ಹೆಚ್ಚು ಸಂಪನ್ಮೂಲಗಳನ್ನು ವಿನಿಯೋಗಿಸಿ ಗಳಿಸಲಾಗದ ಯಶಸ್ಸನ್ನು ಹ್ಯುಮಾನಿಟಿ ಫಸ್ಟ್ ಅವುಗಳಿಗಿಂತ ಕಡಿಮೆ ಸಂಪನ್ಮೂಲಗಳನ್ನು ಬಳಸಿ ತನಗೆ ಲಭಿಸಿರುವ ಸ್ವಯಂ ಸೇವಕರ ಸೇವೆಯ ಕಾರಣದಿಂದಲೂ ಹ್ಯುಮಾನಿಟಿ ಫಸ್ಟ್ ಸಂಸ್ಥೆಯ ಸದಸ್ಯರ ಸೇವಾಮನೋಭಾವದ ಸ್ಫೂರ್ತಿಯ ಕಾರಣದಿಂದಲೂ ಯಶಸ್ಸನ್ನು ಗಳಿಸಿದೆ. ಹ್ಯುಮಾನಿಟಿ ಫಸ್ಟ್ ಸಂಸ್ಥೆಯ ಕಾರ್ಯಕರ್ತರೂ ಸ್ವಯಂ ಸೇವಕರೂ ಲೋಕದಾದ್ಯಂತ ದೃಢ ನಿರ್ಧಾರದೊಂದಿಗೂ ಅತ್ಯಾಸಕ್ತಿಯಿಂದಲೂ ಸೇವಾ ಮನೋಭಾವದಿಂದಲೂ ನಿಷ್ಠೆಯಿಂದಲೂ ಕಾರ್ಯ ಪ್ರವೃತ್ತರಾಗಿರುವುದರ ಬಗ್ಗೆ ನಾನು ಸಂತೋಷಪಡುತ್ತೇನೆ. ಈ ಉತ್ಸಾಹ ಸದಾಕಾಲ ವರ್ಧಿಸುತ್ತಿರಲಿ ಮತ್ತು ಅದು ಎಂದೂ ಕುಗ್ಗದಿರಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ನಾನು ಪುನರಾವರ್ತಿಸಿ ಹೇಳಲು ಬಯಸುತ್ತೇನೆ. ನೀವು ಬಹಳ ದೊಡ್ಡ ಕೆಲಸ ಮಾಡಿರುವಿರಿ. ಹ್ಯುಮಾನಿಟಿ ಫಸ್ಟ್ ಕೈಗೊಂಡ ವಿವಿಧ ಯೋಜನೆಗಳಿಂದ ಸಂತ್ರಸ್ತರಿಗೆ ಬಹಳ ಉಪಕಾರ ಮಾಡಿರುವಿರಿ ಎಂದು ಚಿಂತಿಸಿ ಒಂದಿಷ್ಟು ಹೆಮ್ಮೆಯನ್ನಾದರೂ ನಿಮ್ಮ ಹೃದಯಗಳಲ್ಲಿ ಹೊಂದಬಾರದು. ಯಾವಾಗಲೂ ಪರಿಪೂರ್ಣ ವಿನಯ ಮತ್ತು ಸರ್ವಶಕ್ತನಾದ ಅಲ್ಲಾಹನಿಗೆ ಕೃತಜ್ಞತೆ ನಿಮ್ಮ ರಕ್ತನಾಳಗಳಲ್ಲಿ ಹರಿಯುತ್ತಿರಬೇಕು. ಯಾವಾಗಲೂ ಅಲ್ಲಾಹನ ಸಂಪ್ರೀತಿ ಗಳಿಸುವ ಬಗ್ಗೆ ನಿಮ್ಮ ಆಶಯವನ್ನು ಕೇಂದ್ರೀಕರಿಸಿರಿ. ಅನ್ಯರಿಗೆ ಸೇವೆ ಸಲ್ಲಿಸುವುದು ನಮ್ಮ ಧಾರ್ಮಿಕ ಹೊಣೆಗಾರಿಕೆ ಎಂದೂ ಮಾನವರ ಹಕ್ಕುಗಳನ್ನು ಈಡೇರಿಸಿ ಕೊಡದಿದ್ದರೆ ಅಲ್ಲಾಹನ ಹಕ್ಕುಗಳನ್ನು ಈಡೇರಿಸಿಕೊಡಲು ಸಮರ್ಥರಾಗಲಾರೆವು ಎಂಬುದರ ಬಗ್ಗೆ ಲಕ್ಷ್ಯ ನೀಡಿರಿ.

ಕೊನೆಗೆ ನಾನು ಹ್ಯುಮಾನಿಟಿ ಫಸ್ಟ್‌ನ ಸ್ವಯಂ ಸೇವಕರಿಗೂ ಕಾರ್ಯಕರ್ತರಿಗೂ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನೂ ಕೃತಜ್ಞತೆಗಳನ್ನೂ ಅರ್ಪಿಸುತ್ತೇನೆ. ಏಕೆಂದರೆ ಅವರು ಇಪ್ಪತ್ತೈದು ವರ್ಷಗಳ ಕಾಲಗಳಲ್ಲಿ ತಮ್ಮ ಪ್ರಾಮಾಣಿಕತೆಯಿಂದಲೂ ನಿಷ್ಠೆಯಿಂದಲೂ ಆದರ್ಶ ಪ್ರಿಯವಾದ ಸೇವೆಯನ್ನು ಮಾನವರ ಹಿತಕ್ಕೋಸ್ಕರ ಸಲ್ಲಿಸಿದ್ದಾರೆ. ಸ್ವಯಂ ಸೇವಕರ ಅತ್ಯುತ್ಸಾಹ ಹ್ಯುಮಾನಿಟಿ ಫಸ್ಟ್ ಎಂಬ ಹೆಸರನ್ನು ಸಾರ್ಥಕಗೊಳಿಸಿದೆ ಮತ್ತು ಅದು ಪ್ರಸಿದ್ಧ ಚ್ಯಾರಿಟಿ ಆ್ಯಂಡ್ ಡಿಸಾಸ್ಟರ್ ರಿಲೀಫ್ ಏಜನ್ಸಿ (CHARITY AND DISASTER RELIEF AGENCY) ಆಗಿ ಪರಿಣಮಿಸಿದೆ.

ಅಲ್‌ಹಮ್‌ದುಲಿಲ್ಲಾಹ್, (ಅಲ್ಲಾಹನಿಗೆ ಸ್ತುತಿ) ಹ್ಯುಮಾನಿಟಿ ಫಸ್ಟ್ ಮಾಡುವ ಕಾರ್ಯಗಳು ಪ್ರತಿವರ್ಷ ವಿಸ್ತಾರಗೊಳ್ಳುತ್ತಾ ಮುಂದುವರಿಯುತ್ತಿದೆ. ಹೀಗೆಯೇ ಮುಂದುವರಿಯಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ಹ್ಯುಮಾನಿಟಿ ಫಸ್ಟ್‌ಗೆ ಸೇರಿದ ಸ್ವಯಂ ಸೇವಕರು ಮತ್ತು ಕಾರ್ಯಕರ್ತರು ಸಂಕಷ್ಟ ಪೀಡಿತರ ಮತ್ತು ನೋವಿನಿಂದ ಪೀಡಿತರಾದವರ ಕಣ್ಣೀರನ್ನು ಒರೆಸಲು ಸದಾ ಸಿದ್ಧರಾಗಿರುವವರಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ. ತಾವಿರುವ ಪರಿಸ್ಥಿತಿಯ ಕಾರಣದಿಂದ ಬಲಿಪಶುಗಳಾಗಿರುವ ನಿಷ್ಕಳಂಕ ಜನರ ದುಃಖವನ್ನೂ ಹತಾಶೆಯನ್ನೂ ನೋವನ್ನೂ ನಿವಾರಿಸಲು ಯಾವಾಗಲೂ ಅವರು ಸಿದ್ಧರಾಗಿರುವಂತಾಗಲಿ. ನೀವು ಸದಾಕಾಲ ಬಲಹೀನರ, ಸವಲತ್ತು ವಂಚಿತರ ಮತ್ತು ದುರ್ಬಲರ ಹಕ್ಕುಗಳಿಗೋಸ್ಕರ ಎದ್ದು ನಿಲ್ಲುವವರಾಗಿರಿ.

ಮಾನವರ ಸೇವೆಗೋಸ್ಕರ ನೀವೆಲ್ಲರೂ ನಿಮ್ಮ ಪಾತ್ರ ನಿರ್ವಹಿಸುವವರಾಗುವಂತೆ ಅಲ್ಲಾಹನು ಅನುಗ್ರಹಿಸಲಿ. ದಾರಿದ್ರ್ಯ ಬಾಧಿತರಾದವರು ತಮ್ಮ ಎರಡು ಕಾಲುಗಳಲ್ಲಿ ನಿಲ್ಲುವಂತೆ ಅಲ್ಲಾಹನು ಮಾಡಲಿ.

ಹ್ಯುಮಾನಿಟಿ ಫಸ್ಟ್ ಚಟುವಟಿಕೆಗಳನ್ನು ಅಲ್ಲಾಹನು ಅನುಗ್ರಹಿಸುವಂತಾಗಲಿ. ಅದು ಎಂದೂ ತನ್ನ ಚಟುವಟಿಕೆಗಳಿಂದ ಹಿಂದೆ ಸರಿಯದಿರಲಿ. ಅದು ಯಾವಾಗಲೂ ಮುಂದೆ ಸಾಗುತ್ತಾ ಕಾರ್ಯನಿರತವಾಗಲಿ – ಆಮೀನ್. ಜಝಾಕುಮುಲ್ಲಾಹ್.

♦

# ಖುರ್‌ಆನ್ ನಿರ್ದೇಶಿಸುವ ಪರದಾ ಪದ್ಧತಿ

**ಇದು ಅಹ್ಮದಿಯಾ ಸಂಘಟನೆಯ ದ್ವಿತೀಯ ಖಲೀಫರಾದ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್ ಅವರು 1924ರಲ್ಲಿ ಲಂಡನಿನ ವೆಂಬ್ಲೀ (Wembley) ನಗರದಲ್ಲಿ ಜರಗಿದ ಸರ್ವಧರ್ಮ ಸಮ್ಮೇಳನಕ್ಕಾಗಿ ವಿರಚಿಸಿದ "ಟ್ರು ಇಸ್ಲಾಂ" ಎಂಬ ಉಪನ್ಯಾಸದ ಒಂದು ಚಿಕ್ಕ ಭಾಗವಾಗಿದೆ. ಪರದಾ ಸಂಪ್ರದಾಯದ ತತ್ವವೇನೆಂದೂ ಅದರಿಂದ ಮನುಷ್ಯನಿಗೆ ಪ್ರಾಪ್ತವಾಗುವ ನೈತಿಕ ಗುಣಗಳೇನೆಂದೂ ತಿಳಿಯದೆ ಪರದಾ ಸಂಪ್ರದಾಯವನ್ನು ಟೀಕಿಸುವ ಆಧುನಿಕರಿಗೆ ಈ ಲೇಖನವು ಉತ್ತರ ರೂಪದಲ್ಲಿದೆ.**

ಮನುಷ್ಯನ ನೈತಿಕ ಸ್ಥಿತಿಯನ್ನು ಉತ್ತಮಗೊಳಿಸಲು ಇಸ್ಲಾಂ ನಿರ್ದೇಶಿಸಿರುವ ಪದ್ಧತಿಗಳಲ್ಲಿ ಒಂದು, ಹೃದಯದಲ್ಲಿ ಪಾಪವಿಚಾರ ಹುಟ್ಟಲಿಕ್ಕೆ ಎಡೆಕೊಡುವ ಎಲ್ಲ ದಾರಿಗಳನ್ನು ಮುಚ್ಚುವುದಾಗಿದೆ. ಇಸ್ಲಾಂ ಧರ್ಮ ಸಿದ್ಧಾಂತ ಪ್ರಕಾರ ಮನುಷ್ಯನ ಸ್ವಭಾವ ನಿರ್ದೋಷವೂ ಪರಿಶುದ್ಧವೂ ಆಗಿದೆ; ಪಾಪ ಹೊರಗಿನಿಂದ ಬಂದು ಸೇರುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಒಳಿತನ್ನು ಪ್ರೀತಿಸುವ ಮತ್ತು ಕೆಡುಕನ್ನು ದ್ವೇಷಿಸುವ ಒಂದು ಅಂತರ್ಬೋಧ ಅಥವಾ ಅಂತಃಕರಣ ಮನುಷ್ಯನಿಗೆ ದೇವದತ್ತವಾದುದಾಗಿದೆ. ಜಾತಿ ಮತ ಭೇದವಿಲ್ಲದೆ ಸಕಲರೂ ಈ ಶುದ್ಧವಾದ ಸ್ವಭಾವದಿಂದ ಕೂಡಿ ಜನಿಸುತ್ತಾರೆ. ಆದರೆ, ಈ ಅಂತರ್ಬೋಧ ಮಾತ್ರವೇ ಮನುಷ್ಯನನ್ನು ಪಾಪದಿಂದ ರಕ್ಷಿಸಲು ಪರ್ಯಾಪ್ತವಲ್ಲ. ಕಾರಣವೇನೆಂದರೆ, ಅದು ಅವನೊಡನೆ ಒಳಿತನ್ನು ಮಾಡಲಿಕ್ಕೆ ಮತ್ತು ಕೆಡುಕನ್ನು ವರ್ಜಿಸಲಿಕ್ಕೆ ಮಾತ್ರವೇ ಹೇಳುತ್ತದೆ. ಒಳಿತು ಯಾವುದು ಕೆಡುಕು ಯಾವುದು ಎಂಬ ವ್ಯತ್ಯಾಸವನ್ನು ತೋರಿಸಿ ಕೊಡುವ ಕೆಲಸವನ್ನು ಮನುಷ್ಯನ ವಿವೇಕವು ಮಾಡುತ್ತದೆ. ಈ ಗುಣದೋಷ ವಿವೇಚನೆಗೆ ಇಂದ್ರಿಯಗಳ ಮುಖಾಂತರ ಮನುಷ್ಯನಿಗೆ ಸಿದ್ಧಿಸುವ ಅರಿವೇ ಆಧಾರ. ಆದುದರಿಂದ, ಬಾಹ್ಯಪ್ರೇರಣೆಗಳನ್ನು ಸ್ವೀಕರಿಸುವುದರಲ್ಲಿ ಅವನು ತಪ್ಪಿಬೀಳುವ ಪಕ್ಷದಲ್ಲಿ, ಒಂದು ಸಂಗತಿ ಒಳ್ಳೆಯದೋ ಕೆಟ್ಟದೋ ಎಂದು ವಿವೇಚಿಸುವ ವಿಷಯದಲ್ಲೂ ಅವನಿಗೆ ತಪ್ಪು ಸಂಭವಿಸುವುದೆಂಬುದು ಖಂಡಿತ. ಆಗ ಅವನ ಅಂತಃರ್ಬೋಧ ಅಥವಾ ಅಂತಃಕರಣ ಒಳ್ಳೆಯದನ್ನು ಕೆಟ್ಟದೆಂದೂ ಕೆಟ್ಟದನ್ನು ಒಳ್ಳೆಯದೆಂದೂ ತಪ್ಪಾಗಿ ತಿಳಿದು ಅದರ ಫಲವಾಗಿ ಸತ್ಕರ್ಮ ತಡೆಯಲ್ಪಟ್ಟು ದುಷ್ಕರ್ಮ ಪ್ರೋತ್ಸಾಹಿಸಲ್ಪಡುತ್ತದೆ. ಆದ್ದರಿಂದ, ಮನುಷ್ಯನು ಸ್ವೀಕರಿಸುವ ಈ ಬಾಹ್ಯಪ್ರೇರಣೆಗಳನ್ನು ಇಲ್ಲವಾಗಿಸಬೇಕು ಅಥವಾ ತಡೆಯಬೇಕು. ಇದೇ ಪ್ರಕಾರವೇ ಮನುಷ್ಯನನ್ನು ದುಷ್ಕೃತ್ಯದೆಡೆಗೆ ದೂಡಿಬಿಡುವ ವಿಕಾರ ವಿಲೋಭನಗಳ ಪ್ರೇರಣೆ ಸಹ ಹೊರಗಿನಿಂದ ಬಂದು ಸೇರುವುದರಿಂದ, ಅದನ್ನು ನಿವಾರಿಸಬೇಕಾದುದು ಅಗತ್ಯ. ಏಕೆಂದರೆ ಈ ಬಾಹ್ಯಪ್ರೇರಣೆಗಳನ್ನು ತಡೆಗಟ್ಟಿದರೆ ಮಾತ್ರ ಮನುಷ್ಯನಿಗೆ ಆತ್ಮನಿಯಂತ್ರಣ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಉದಾಹರಣೆಗೆ, ಮದ್ಯಪಾನಮಾಡಿ ಅಭ್ಯಾಸವುಳ್ಳವನಿಗೆ ಇತರರು ಮದ್ಯಪಾನ ಮಾಡುವುದನ್ನು ಕಾಣುವಾಗ, ಅಥವಾ ಮದ್ಯ ಸೇವಿಸಲಿಕ್ಕೋ ಅದನ್ನು ಶೇಖರಿಸಿಡಲಿಕ್ಕೋ ಉಪಯೋಗಿಸುವ ಪಾತ್ರೆಗಳನ್ನು ಕಾಣುವಾಗ, ಅಥವಾ ಅವನು ದಿನಾಲು ಮದ್ಯಪಾನಮಾಡುವ ಸಮಯ ಬರುವಾಗ ವಿಕಾರಕ್ಕೆ ಅಧೀನನಾಗುತ್ತಾನೆ. ಇಂತಹ ಮನುಷ್ಯನನ್ನು ಮದ್ಯ ಸಿಕ್ಕುವ ಸ್ಥಳದಿಂದ ದೂರವಿರಿಸಿ ಮದ್ಯಪಾನದ ನೆನಪನ್ನುಂಟುಮಾಡುವ ವಸ್ತುಗಳು ಅವನ ಕಣ್ಣ ಮುಂದೆ ಬಾರದಂತೆ ಜಾಗ್ರತೆ ವಹಿಸಿದರೆ ಒಂದು ಕ್ಲಪ್ತ ಕಾಲದೊಳಗೆ ಅವನ ಈ ದುಷ್ಚಟ ಬಿಟ್ಟುಹೋಗಿ, ಆತ್ಮನಿಯಂತ್ರಣದ ಶಕ್ತಿ ಲಭಿಸುತ್ತದೆ.

ಈ ತತ್ವವನ್ನು ಮುಂದಿರಿಸಿ, ಪಾಪ ಅಥವಾ ಪಾಪ ವಿಚಾರ ಉಂಟಾಗುವ ಮಾರ್ಗಗಳನ್ನೆಲ್ಲ ಮುಚ್ಚಲು ಪರ್ಯಾಪ್ತವಾದ ನಿರ್ದೇಶನಗಳನ್ನು ಇಸ್ಲಾಂ ನೀಡಿರುತ್ತದೆ. ಆದರೆ, ಲೋಕಕ್ಕೆ ಇಸ್ಲಾಂ ಹಲವು ವಿಧ ಒಳಿತುಗಳನ್ನು ನೀಡಿದ್ದರೂ ಆ ಬಗ್ಗೆ ಲೋಕದ ಬಾಧ್ಯತೆಗಳನ್ನು ಇನ್ನೂ ಹೆಚ್ಚಿಸಲು ಮನೋತತ್ವಶಾಸ್ತ್ರಕ್ಕನುಸಾರವಾಗಿರುವ ಈ ನಿರ್ದೇಶಗಳು ಜನರ ಆಕ್ಷೇಪಗಳಿಗೂ ಟೀಕೆಗಳಿಗೂ ಗುರಿಯಾಗಿವೆಯೆಂಬುದು ಆಶ್ಚರ್ಯಕರವಾಗಿದೆ. ಮಾತ್ರವಲ್ಲ ಸತ್ಯಾನ್ವೇಷಣ ತೃಷ್ಣೆಯೂ ತತ್ವಜ್ಞಾನ ತತ್ಪರತೆಯೂ ಉಳ್ಳವರು ಸಹ ಈ ನಿರ್ದೇಶಗಳ ನಿಜಾಂಶವನ್ನು ಗ್ರಹಿಸಲಿಲ್ಲವೆಂಬುದು ಇನ್ನೂ ವಿಸ್ಮಯಕರವಾಗಿದೆ. ಪಾಪಪ್ರೇರಕವಾದ ಮಾರ್ಗಗಳನ್ನು ತಡೆಯಲಿಕ್ಕೆ ಇಸ್ಲಾಂ ನಿರ್ದೇಶಿಸಿದ ಸಂಗತಿಗಳನ್ನೆಲ್ಲಾ ಇಲ್ಲಿ ವಿವರಿಸುವುದು ಕಷ್ಟಕರವಾದುದರಿಂದ ನಾನು ಕೆಲವನ್ನು ಮಾತ್ರ ಇಲ್ಲಿ ಉದಾಹರಿಸುವೆನು.

ಈ ನಿರ್ದೇಶಗಳಲ್ಲಿ ಪ್ರಥಮವಾಗಿ ಚಾರಿತ್ರ್ಯ ಸಂರಕ್ಷಣೆಗೆ ಸಂಬಂಧಿಸಿದ ಶಾಸನಗಳ ಕುರಿತು ವಿವರಿಸುವೆನು. ಇಸ್ಲಾಂ ಇತರ ಧರ್ಮಗಳಂತೆ **"ವ್ಯಭಿಚರಿಸಬಾರದು"** ಎಂದು ಮಾತ್ರವಲ್ಲ ಹೇಳುವುದು. ವ್ಯಭಿಚಾರ ನಿಂದನೀಯ ಪಾಪ ಕರ್ಮವೆಂಬ ಸಂಗತಿಯನ್ನು ಮಾತ್ರ ತಿಳಿಸುವುದಲ್ಲ ನಮ್ಮ ಅವಶ್ಯಕತೆ. ನಾವು ಈ ಪಾಪದಿಂದ ಸಂರಕ್ಷಣೆಯನ್ನು ಪಡೆಯುವುದು ಹೇಗೆಂದು ತಿಳಿಯಬೇಕಾಗಿದೆ. ಈ ಪ್ರಶ್ನೆಗೆ ಇಸ್ಲಾಂ ನೀಡುವ ಪರಿಹಾರ, ಈ ವಿಪತ್ತಿನ ಪ್ರವೇಶ ಮಾರ್ಗಗಳನ್ನು ಅಂದರೆ ನೋಟ, ಶ್ರವಣ ಮತ್ತು ಸ್ಪರ್ಶದ ಮಾರ್ಗಗಳನ್ನು ನಿರೋಧಿಸುವುದರ ಮೂಲಕ ಅದರಿಂದ ರಕ್ಷಣೆಯನ್ನು ಪಡೆಯಬಹುದೆಂದಾಗಿದೆ. ಏಕೆಂದರೆ, ವ್ಯಭಿಚಾರಕ್ಕೆ ಪ್ರೇರಣೆ ಈ ಮಾರ್ಗಗಳ ಮೂಲಕ ಉಂಟಾಗುತ್ತದೆ. ಒಬ್ಬನು ಸೌಂದರ್ಯವನ್ನು ನೋಡಿದಾಗ, ಅದರ ವರ್ಣನೆಯನ್ನು ಕೇಳಿದಾಗ ಅಥವಾ ಕರ್ಣ ಮಧುರವಾದ ರಾಗವನ್ನು ಶ್ರವಿಸಿದಾಗ ಯಾ ಮೃದುಲ ಕೋಮಲವಾದ ಶರೀರವನ್ನು ಸ್ಪರ್ಶಿಸಿದಾಗ, ಆ ಸೌಂದರ್ಯಕಾಂತಿಯಾಗಲಿ, ಅದರ ವರ್ಣನೆಯಾಗಲಿ, ಶಬ್ದ ಮಾಧುರ್ಯವಾಗಲಿ, ಶರೀರ ಮಾರ್ದವವಾಗಲಿ ಅವನಿಗೆ ಇಷ್ಟವೆಂದಾದರೆ ಅವನು ಆಕರ್ಷಿತನಾಗುತ್ತಾನೆ. ಅದರ ಫಲ ಸಮುದಾಯಕ್ಕೂ ಸದಾಚಾರ ಕರ್ಮಕ್ಕೂ ನಾಶಹೇತುಕವೆಂದು ಲೋಕವೆಲ್ಲ ಒಮ್ಮತವಾಗಿ ಆಕ್ಷೇಪಿಸುವ ವಿಚಾರವಾಗಿದೆ. ಆದ್ದರಿಂದ ಈ ಪಾಪದ ಪ್ರವೇಶ ಮಾರ್ಗಗಳನ್ನೆಲ್ಲ ತಡೆಯಲಿಕ್ಕೆ ಇಸ್ಲಾಂ ನಿರ್ದೇಶಿಸಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

ಸತ್ಯವಿಶ್ವಾಸಿಗಳೊಡನೆ ಹೇಳು – ಅವರು ತಮ್ಮ ಕಣ್ಣುಗಳನ್ನು ಹತೋಟಿಯಲ್ಲಿಡಲಿ (ಕೆಳಮುಖವಾಗಿರಿಸಲಿ); ಗುಪ್ತಾಂಗಗಳನ್ನು

ಕಾಪಾಡಿ ಕೊಳ್ಳಲಿ. (ದುಷ್ಟ ವಿಚಾರಗಳು ಪ್ರವೇಶಿಸಲು ಎಡೆಯಿರುವ ಮಾರ್ಗಗಳನ್ನೆಲ್ಲ ಭದ್ರಪಡಿಸಲಿ.) ಇದು (ಅವರ ಒಳಿತಿಗೆ ಕಾರಣವಾಗುವ) ಪರಿಶುದ್ಧ ಮಾರ್ಗವಾಗಿದೆ. ಅವರ ಕೃತ್ಯಗಳ ಬಗ್ಗೆ ಅಲ್ಲಾಹನು ಚೆನ್ನಾಗಿ ಬಲ್ಲವನಾಗಿದ್ದಾನೆ. ಅದೇ ಪ್ರಕಾರ ಸತ್ಯವಿಶ್ವಾಸಿನಿಯರೊಡನೆ ಹೇಳು – ಅವರು ತಮ್ಮ ಕಣ್ಣುಗಳನ್ನು ಹತೋಟಿಯಲ್ಲಿಡಲಿ (ಕೆಳಮುಖವಾಗಿರಿಸಲಿ); ಗುಪ್ತಾಂಗಗಳನ್ನು ಕಾಪಾಡಲಿ. (ಪಾಪ ವಿಚಾರಗಳು ಬಂದು ಸೇರುವ ಸಕಲ ಮಾರ್ಗಗಳನ್ನು ಭದ್ರಪಡಿಸಲಿ.) ಅವರು ತಮ್ಮ ಸೌಂದರ್ಯವನ್ನು ತೋರ್ಪಡಿಸದಿರಲಿ – ತನ್ನಿಂತಾನೆ ಪ್ರಕಟಗೊಳ್ಳುವುದರ ಹೊರತು. ಅವರು ತಮ್ಮ ಶಿರೋವಸ್ತ್ರದಿಂದ ತಮ್ಮ ಎದೆಯನ್ನು ಮುಚ್ಚಲಿ. ಅವರು ತಮ್ಮ ಪತಿ, ಪಿತ, ಪತಿಯ ಪಿತ, ಪುತ್ರರು, ಪತಿಯ ಪುತ್ರರು, ಸಹೋದರರು, ಸಹೋದರರ ಪುತ್ರರು, ಸಹೋದರಿಯರ ಪುತ್ರರು, ತಮ್ಮಂತಹ ಸ್ತ್ರೀಯರು, ತಮ್ಮ ಅಧೀನದಲ್ಲಿರುವವರು (ದಾಸಿಯರು), ಪುರುಷರ ಪೈಕಿ ಲೈಂಗಿಕಾಭಿಲಾಷೆಯಿಲ್ಲದ (ವೃದ್ಧ) ಪರಿಚಾರಕರು, ಸ್ತ್ರೀಯರ ಲೈಂಗಿಕ ರಹಸ್ಯಗಳ ಅರಿವಿಲ್ಲದ ಬಾಲಕರು – ಇವರಿಗೆ ಹೊರತು ತಮ್ಮ ಸೌಂದರ್ಯವನ್ನು ತೋರ್ಪಡಿಸಬಾರದು. ಅವರು ತಮ್ಮ ಮುಚ್ಚಿಟ್ಟ ಸೌಂದರ್ಯವನ್ನು ಬಹಿರಂಗಪಡಿಸಲಿಕ್ಕಾಗಿ ತಮ್ಮ ಕಾಲುಗಳನ್ನು ನೆಲಕ್ಕೆ ಅಪ್ಪಳಿಸಿ ನಡೆಯಬಾರದು. ಎಲೈ ಸತ್ಯವಿಶ್ವಾಸಿಗಳೇ, ನೀವು ಯಶಸ್ಸುಗಳಿಸಲಿಕ್ಕೋಸ್ಕರ ಎಲ್ಲರೂ ಅಲ್ಲಾಹನ ಕಡೆಗೆ ಮರಳಿರಿ. (ಅಧ್ಯಾಯ: 24, ವಚನ: 31, 32)

ಈ ಪವಿತ್ರ ವಾಕ್ಯಗಳಲ್ಲಿ, ಪಾಪಕರ ವಿಚಾರಗಳು ಹೃದಯವನ್ನು ಪ್ರವೇಶಿಸಲು ಎಡೆಕೊಡುವ ಸಕಲ ಮಾರ್ಗಗಳನ್ನು ಸ್ತ್ರೀ–ಪುರುಷರು ಮುಚ್ಚಬೇಕೆಂದು ಆಜ್ಞಾಪಿಸಲಾಗಿದೆ. ಕಣ್ಣು ಆ ಮಾರ್ಗಗಳ ಪೈಕಿ ಒಂದಾದುದರಿಂದ ವಿಶ್ವಾಸಿಗಳು ಅವರ ನೋಟಗಳನ್ನು ಕೆಳಮುಖವಾಗಿರಿಸಲಿಕ್ಕೆ ವಿಧಿಸಲಾಗಿದೆ. ಇನ್ನೊಂದು ಮಾರ್ಗ ಕರ್ಣೇಂದ್ರಿಯವಾದುದರಿಂದ, ಸ್ತ್ರೀಯರು ಪುರುಷರ ಹಾಗೂ ಪುರುಷರು ಸ್ತ್ರೀಯರ ಮಧುರಗಾನಗಳನ್ನೂ ರಾಗ ವಿಶೇಷಗಳನ್ನೂ ಗಮನಿಸದಿರಲಿಕ್ಕೂ ಪರಸ್ಪರ ಶೃಂಗಾರ ಕಥೆಗಳನ್ನು ಶ್ರವಿಸದಿರಲಿಕ್ಕೂ ವಿಧಿಸಲಾಗಿದೆ. ಪಾಪ ಪೇರಣೆಗೆ ಮೂರನೆಯ ಮಾರ್ಗ ಸ್ಪರ್ಶವಾದುದರಿಂದ ನ್ಯಾಯೋಚಿತ ಅಗತ್ಯ ಮತ್ತು ಕಾರಣದ ಹೊರತು ಸ್ತ್ರೀಪುರುಷರು ಪರಸ್ಪರ ಸ್ಪರ್ಶಿಸಬಾರದೆಂದು ವಿರೋಧಿಸಲಾಗಿದೆ. ಸ್ತ್ರೀ ಪುರುಷರು ಆವಶ್ಯಾರ್ಥ ಒಟ್ಟುಗೂಡುವ ರಸ್ತೆ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ನೋಟವನ್ನು ಕೆಳಮುಖವಾಗಿರಿಸುವುದು ಕಷ್ಟಕರವಾದುದರಿಂದ, ಸ್ತ್ರೀಯರೊಡನೆ ಅವರು ಹೊರಗೆ ಇಳಿಯುವಾಗ ಎದೆಯನ್ನೂ ಮುಖವನ್ನೂ, ಅಂದರೆ ಅವರ ಕುತ್ತಿಗೆಯನ್ನೂ ತಲೆಯನ್ನೂ ಅವರಿಗೆ ನೋಡಲಿಕ್ಕೆ ಮತ್ತು ಉಸಿರಾಡಲಿಕ್ಕೆ ಅಗತ್ಯವಿರುವ ಭಾಗ ಹೊರತು ಮುಖದ ಬಾಕಿ ಭಾಗವನ್ನೂ ಮರೆಯಾಗಿರಿಸಬೇಕೆಂದು ಸಹ ವಿಧಿಸಲಾಗಿದೆ.

ಅತ್ಯಂತ ವಿವೇಕಯುತವಾದ ಈ ನಿರ್ದೇಶಗಳ ಕುರಿತು ನಿಷ್ಪಕ್ಷವಾಗಿಯೂ ಸ್ವತಂತ್ರವಾಗಿಯೂ ಚಿಂತನೆ ಮಾಡುವ ಯಾರಿಗೂ ಅವುಗಳ ಮಹತ್ವವನ್ನು ಒಪ್ಪದಿರಲಿಕ್ಕೆ ನಿರ್ವಾಹವಿಲ್ಲ. ಏಕೆಂದರೆ, ಅವು ಲೈಂಗಿಕವಾದ ಸಕಲ ದುರ್ವಿಕಾರಗಳನ್ನೂ ಪಾಪಗಳನ್ನೂ ನಿವಾರಿಸಲು ಪರ್ಯಾಪ್ತವಾಗಿವೆ.

ಸ್ತ್ರೀಯರು ಮನೆಯೊಳಗೆ ನಾಲ್ಕು ಗೋಡೆಗಳ ಮಧ್ಯೆ ಅಡಗಿರಬೇಕೆಂದು ಇಸ್ಲಾಂ ಉಪದೇಶಿಸುವುದಿಲ್ಲ. ಇಸ್ಲಾಂ ಧರ್ಮದ ಪ್ರಾರಂಭದಲ್ಲಿ ಮುಸ್ಲಿಂ ಸ್ತ್ರೀಯರು ಹಾಗೆ ವರ್ತಿಸಲಿಲ್ಲ. ಅವರು ಪುರುಷರೊಂದಿಗೆ ಯುದ್ಧಕಣಕ್ಕೆ ಹೋಗುತ್ತಿದ್ದರು. ಗಾಯಗೊಂಡವರಿಗೂ ರೋಗಿಗಳಿಗೂ ಶುಶ್ರೂಷೆ ಮಾಡುತ್ತಿದ್ದರು. ಸವಾರಿ ಮಾಡುತ್ತಿದ್ದರು. ಪುರುಷರಿಂದ ಕಲೆ, ವಿಜ್ಞಾನಗಳನ್ನು ಕಲಿಯುತ್ತಿದ್ದರು; ಇತರ ಪುರುಷರಿಗೆ ಅದನ್ನು ಕಲಿಸುತ್ತಿದ್ದರು. ಸಂಕ್ಷಿಪ್ತವಾಗಿ, ಅವರಿಗೆ ಪ್ರವೃತ್ತಿಯಲ್ಲಿ ಪೂರ್ಣ ಸ್ವಾತಂತ್ರ್ಯವನ್ನು ಅನುಭವಿಸಲು ಸಾಧ್ಯವಾಗಿತ್ತು. ಅವರಿಗೆ ಇದ್ದ ಆಜ್ಞೆ, ಪಾಪವಿಚಾರಗಳು ಬಂದು ಸೇರಲು ಎಡೆಕೊಡುವ ಎಲ್ಲ ದಾರಿಗಳನ್ನು ನಿರೋಧಿಸಲಿಕ್ಕಾಗಿ ಅವರು ಹೊರಗಿಳಿಯುವಾಗ ಅವರ ಕುತ್ತಿಗೆಯನ್ನೂ ತಲೆಯನ್ನೂ ಮುಖವನ್ನೂ ಮರೆಯಾಗಿರಬೇಕು ಅಥವಾ ಮುಸುಕು ಧರಿಸಬೇಕೆಂದಾಗಿತ್ತು. ಹಾಗಲ್ಲದೆ, ಅವರು ಮನೆಯೊಳಗೆ ಅಡಗಿರಬೇಕೆಂದೋ ವೈಜ್ಞಾನಿಕ ಕಾರ್ಯಗಳಿಂದೆಲ್ಲ ದೂರವಿರಬೇಕೆಂದೋ ಇಸ್ಲಾಂ ಉಪದೇಶೀಸುವುದಿಲ್ಲ. ಅಂತಹ ಸಂಪ್ರದಾಯ ಉತ್ತರಕಾಲದಲ್ಲಿ ರಾಜಕೀಯ ಕಾರಣಗಳನ್ನು ಆಧಾರವಾಗಿರಿಸಿ ಆಚರಿಸಿಕೊಂಡು ಬಂದದ್ದಾಗಿದೆ. ಕೆಲವು ರಾಜ್ಯಗಳಲ್ಲಿ ಸ್ತ್ರೀಯರ ಚಾರಿತ್ರ್ಯದ ಬೆಲೆ ಕೆಲವೇ ನಾಣ್ಯಗಳಿಂದ ಗಣಿಸಲ್ಪಟ್ಟಿತ್ತೆಂಬುದು ಸ್ತ್ರೀತ್ವದೊಡನೆ ತೋರಿಸಿದ ದೊಡ್ಡ ಧಿಕ್ಕಾರವೂ ನಿಂದೆಯೂ ಆಗಿರುವುದರಿಂದ, ಅಂತಹ ರಾಜ್ಯಗಳಲ್ಲಿ ಮುಸ್ಲಿಮರು ಸ್ತ್ರೀಯರ ಮಾನವನ್ನೂ ಚಾರಿತ್ರ್ಯವನ್ನೂ ಸಂರಕ್ಷಿಸಲಿಕ್ಕೆ ಇಂತಹ ನಿಬಂಧನೆಗಳನ್ನು ಸ್ವಯಂ ಸ್ವೀಕರಿಸಿದರು. ಆದರೆ ಈ ಪದ್ಧತಿಯನ್ನು ಧರ್ಮ ನಿರ್ದೇಶಿಸಲಿಲ್ಲ.

ಚಾರಿತ್ರ್ಯ ಸಂರಕ್ಷಣೆಗೆ ಸಂಬಂಧಿಸಿದ ಈ ನಿರ್ದೇಶಗಳು ಸ್ತ್ರೀಯರಿಗೆ ಅಪಮಾನಕರವೆಂದು ಕೆಲವರು ತಿಳಿದುಕೊಳ್ಳುವುದರ ಕುರಿತು ನನಗೆ ಆಶ್ಚರ್ಯವಾಗುತ್ತದೆ. ಸ್ತ್ರೀಯರು ತಲೆಯನ್ನೂ ಮುಖವನ್ನೂ ಮರೆಯಾಗಿರಬೇಕೆಂದು ಇರುವುದೇಕೆಂದರೆ, ಇದು ಜನನಿಬಿಡವಾದ ಸ್ಥಳಗಳಲ್ಲಿಯೂ ರಾಜಬೀದಿಗಳಲ್ಲಿಯೂ ಪುರುಷರು ನೋಟವನ್ನು ಕೆಳಭಾಗಕ್ಕೆ ಮಾಡುವ ಆವಶ್ಯಕತೆಯನ್ನು ಪರಿಹರಿಸುವ ಒಂದು ಏರ್ಪಾಡಾಗಿದೆ. ಪ್ರಥಮವೂ ಪ್ರಧಾನವೂ ಆದ ಆಜ್ಞೆ ನೋಟವನ್ನು ಕೆಳಮುಖ ಮಾಡುವುದಾಗಿದೆ. ಇದು ಸ್ತ್ರೀಪುರುಷರಿಗೆ ಒಂದೇ ರೀತಿಯಲ್ಲಿ ಅನ್ವಯಿಸುತ್ತದೆ. ಈ ಆಜ್ಞೆ ಅಪಮಾನಕರವೆಂದಾದರೆ, ಅದು ಸ್ತ್ರೀಯರಿಗೆ ಮಾತ್ರವಲ್ಲ, ಪುರುಷರಿಗೂ ಅಪಮಾನಕರವಾಗಿರಬೇಕಾಗುತ್ತದೆ. ಆದರೆ ಸ್ತ್ರೀಯರೊಡನೆ ಮುಖವನ್ನು ಮರೆಯಾಗಿರಿಸಲು ಹೇಳಿ ಪುರುಷರೊಡನೆ ಹಾಗೆ ಹೇಳದಿರಲಿಕ್ಕೆ ಕಾರಣವೇನೆಂದು ಇಲ್ಲಿ ಪ್ರಶ್ನೆಯೇಳಬಹುದು. ಅದಕ್ಕೆ ಉತ್ತರ ಈ ರೀತಿಯಾಗಿದೆ: ಇಸ್ಲಾಂ ಧರ್ಮ ಸ್ತ್ರೀಯರ ಮತ್ತು ಪುರುಷರ ಕಾರ್ಯಕ್ಷೇತ್ರಗಳು ಬೇರೆ ಬೇರೆಯೆಂದು ಕಲಿಸುತ್ತದೆ. ಸ್ತ್ರೀಯರ ಪ್ರಥಮ ಹಾಗೂ ಪ್ರಧಾನ ಕರ್ತವ್ಯ ಮುಂದಿನ ಪೀಳಿಗೆಯ ಪಾಲನೆ ಪೋಷಣೆ ಮತ್ತು ಶಿಕ್ಷಣಗಳನ್ನು ಸರಿಯಾದ ರೀತಿಯಲ್ಲಿ ನಡೆಸುವುದಾಗಿದೆ. ಆದರೆ, ಅವರಿಗೆ ಜೀವನೋಪಾಯಗಳನ್ನು ಒದಗಿಸಿಕೊಡುವುದು ಪುರುಷರ ಧರ್ಮ. ಪುರುಷರಿಗೆ ಈ ಧರ್ಮನಿರ್ವಹಣೆಗಾಗಿ ತಮ್ಮ ಹೆಚ್ಚಿನ ಸಮಯವನ್ನು ಮನೆಯಿಂದ

**32ನೇ ಪುಟಕ್ಕೆ**

# ಬುರ್ಖಾ ಧರಿಸಿ ಆಕ್ಸ್‌ಫರ್ಡ್‌ನಲ್ಲಿ

♦ ಡಾ॥ ಅಮತುಲ್ ಮುಜೀಬ್, ಡಿ.ಫಿಲ್. (ಆಕ್ಸನ್)

ನಾನು ನನ್ನ ವಿದ್ಯಾಭ್ಯಾಸ ಕಾಲವನ್ನು ಪಾಕಿಸ್ತಾನದಲ್ಲೂ ಹೊರಗೂ ಇಸ್ಲಾಮೀ ಪರ್ದಾ ಧರಿಸಿಕೊಂಡೇ ಪೂರ್ತಿಗೊಳಿಸಿರುವೆನು. ಪಾಕಿಸ್ತಾನದಲ್ಲಿ ಮನೆಯಿಂದ ಹೊರಗೆ ಹೋಗುವಾಗಲೂ ಲಾಬೊರಟರಿಯಲ್ಲಿ ಪ್ರಾಕ್ಟಿಕಲ್ ಮಾಡುವಾಗಲೂ ಬುರ್ಖಾ ಧರಿಸುವುದರಲ್ಲಿ ನನಗೆ ಪ್ರಯಾಸವೇನೂ ಉಂಟಾಗಲಿಲ್ಲ. ಆದರೆ ಎಂ.ಎಸ್‌ಸಿ.ಯ ನಂತರದ ನನ್ನ ವ್ಯಾಸಂಗದಲ್ಲಿ ಆರಂಭದಿಂದಲೇ ಗೋಷಾ ಪದ್ಧತಿಯನ್ನು ಆಚರಿಸಬೇಕೆಂಬ ನನ್ನ ನಿಷ್ಕರ್ಷೆ ನನಗೆ ಸ್ವಲ್ಪ ತೊಡಕುಂಟುಮಾಡಿತು. ವಿದೇಶಕ್ಕೆ ಹೋಗಲಿಕ್ಕೆ ಸ್ಕಾಲರ್‌ಶಿಪ್‌ಗಾಗಿ ಅರ್ಜಿ ಸಲ್ಲಿಸಿದಾಗ ದೇವಾನುಗ್ರಹದಿಂದ ಯೋಗ್ಯತಾನುಸಾರ ನಾನು ಆಯ್ಕೆಗೊಂಡೆನಾದರೂ ಇಂಟರ್‌ವ್ಯೂ ವೇಳೆಯಲ್ಲಿ ಸೆಲೆಕ್ಷನ್ ಕಮಿಟಿಯ ವಿದೇಶಿ ಕಾರ್ಯದರ್ಶಿ ಗೋಷಾದ ಬಗ್ಗೆ ನನ್ನ ನಿಷ್ಠೆ ಪರದೇಶದಲ್ಲಿ ತೊಂದರೆಯುಂಟುಮಾಡೀತೆಂದು ಹೇಳಿ ನನ್ನ ಅಪೇಕ್ಷೆಯನ್ನು ತಳ್ಳಿಹಾಕಿದರು. ವ್ಯಾಸಂಗ ವೇತನ ಸಿಗದುದರಿಂದ ಸ್ವಾಭಾವಿಕವಾಗಿ ನನಗೆ ದುಃಖವುಂಟಾದರೂ ಅಲ್ಲಾಹನು ಇಷ್ಟಪಡದ ರೀತಿಯಲ್ಲಿ ವಿದ್ಯಾಭ್ಯಾಸ ಮಾಡಿ ಏನು ಪ್ರಯೋಜನವೆಂದು ನಾನು ಯೋಚಿಸಿದೆ. ಅಲ್ಲಾಹನಿಗೆ ಸಹಸ್ರ ಸಹಸ್ರ ನಮನಗಳು! ಅವನು ಕೆಲವೇ ಮಾಸಗಳೊಳಗೆ ಬೇರೊಂದು ಸ್ಕಾಲರ್‌ಶಿಪ್‌ನ ದಾರಿಯನ್ನು ನನಗೆ ತೆರೆದುಕೊಟ್ಟನು.

ಇಂಗ್ಲೆಂಡಿಗೆ ಹೋದ ನಂತರ ಮೊದಲ ಒಂದು ವರ್ಷಕಾಲ ಪರ್ದಾದ ಬಗ್ಗೆ ನನಗೆ ತೊಂದರೆಗಳು ಎದುರಾದುವು. ಅಲ್ಲಿ ಬುರ್ಖಾ ಬಿಡಿ, ಚಾದರ್ (ಮೇಲುಹೊದಿಕೆ) ಧರಿಸಿದ ಸ್ತ್ರೀಯರನ್ನು ಅಪೂರ್ವವಾಗಿ ಕಾಣಬಹುದು. ಆ ರಾಜ್ಯದವರಿಗೆ ಬುರ್ಖಾ ಒಂದು ಅದ್ಭುತವಾಗಿತ್ತು. ಬುರ್ಖಾದ ಕಪ್ಪು ಬಣ್ಣವನ್ನು ಕಂಡು ಕೆಲವರು ನನ್ನನ್ನು ವಿಧವೆಯೆಂದು ತಿಳಿದುಕೊಂಡರು. ರಸ್ತೆಗಳಲ್ಲಿ ನಡೆಯುವಾಗ ಹಲವರ ಪರಿಹಾಸ್ಯ ಮಾತುಗಳಿಗೆ ನಾನು ಗುರಿಯಾದೆನು. ಅಪಹಾಸ್ಯ ಮಾಡುವವರ ಪೈಕಿ ಆಂಗ್ಲೇಯರು ಕಮ್ಮಿ ಮತ್ತು ಏಶ್ಯಾದವರು ಹೆಚ್ಚು.

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಸದಸ್ಯರು ವಿದ್ಯಾರ್ಥಿಗಳಾದರೂ ಪ್ರಾಧ್ಯಾಪಕರಾದರೂ ಬೇರೆ ಯಾವುದಾದರೂ ಕಾಲೇಜಿನೊಂದಿಗೆ ಸಂಬಂಧ ವಿರಿಸಬೇಕಾದುದು ಅಗತ್ಯ. (ಕಾಂಬ್ರಿಜ್ ವಿಶ್ವವಿದ್ಯಾಲಯುದಲ್ಲೂ ಇದೇ ನಿಯುಮವಿದೆ.) ಆದರೆ ಪಾಠಪ್ರವಚನಗಳನ್ನು ಎಲ್ಲ ಕಾಲೇಜುಗಳ ವಿದ್ಯಾರ್ಥಿಗಳಿಗೆ ಒಂದೇ ಸ್ಥಳದಲ್ಲಿ ನಡೆಸಲಾಗುತ್ತದೆ. ಹಾಗೆಯೇ ಸಂಶೋಧನೆ ನಡೆಸುವುದು ವಿದ್ಯಾರ್ಥಿಗಳೂ ಪ್ರೊಫೆಸರುಗಳೂ ನಿರ್ದಿಷ್ಟ ಡಿಪಾರ್ಟ್‌ಮೆಂಟುಗಳಲ್ಲಾಗಿದೆ. ನಾನು ಒಂದು ವನಿತಾ ಕಾಲೇಜಿಗೆ ಸೇರಿದವಳು. ಮೂರು ವರ್ಷಗಳ ಕಾಲ ಅಲ್ಲಿ ನಾನು ವ್ಯಾಸಂಗ ಮಾಡಿದೆ. ಲೆಕ್ಚರ್ ಕೇಳಲಿಕ್ಕೂ ರಿಸರ್ಚ್ ಮಾಡಲಿಕ್ಕೂ ನಾನು ಬುರ್ಖಾ ಧರಿಸಿಕೊಂಡೇ ಹೋಗುತ್ತಿದ್ದೆ. ನನ್ನ ಈ ರೀತಿಯನ್ನು ವಿದ್ಯಾರ್ಥಿಗಳೂ ಪ್ರೊಫೆಸರ್‌ಗಳೂ ಬಹಳ ಆಶ್ಚರ್ಯದಿಂದಲೂ 'ಅನುಕಂಪ'ದಿಂದಲೂ ವೀಕ್ಷಿಸುತ್ತಿದ್ದರು. ಇತರರು ಏನು ಬೇಕಾದರೂ ಭಾವಿಸಲಿ. ನಾನು ನನ್ನ ದೇವನನ್ನು ಸಂಪ್ರೀತಗೊಳಿಸಬೇಕೆಂದು ದೃಢಚಿತ್ತನಾಗಿದ್ದೆ.

ಸುಮಾರು ಒಂದು ವರ್ಷದ ಬಳಿಕ ಅವರಲ್ಲಿ ಬದಲಾವಣೆಯುಂಟಾಯಿತು. ನನ್ನನ್ನು ನಿಂದಾದೃಷ್ಟಿಯಿಂದ ವೀಕ್ಷಿಸುತ್ತಿದ್ದವರು ಗೌರವದಿಂದ ಕಾಣಲು ತೊಡಗಿದರು. ನಾನು ನಿಂದಿಸಲ್ಪಟ್ಟಾಗ ಮತ್ತು ಪರಿಹಾಸ್ಯಕ್ಕೆ ಈಡಾದಾಗ ನನಗಿಂತ ಹೆಚ್ಚು ದುಗುಡವೂ ನೋವೂ ನನ್ನ ಸಹಪಾಠಿಗಳಿಗೂ ಅಧ್ಯಾಪಕರಿಗೂ ಉಂಟಾಗುತ್ತಿತ್ತು. ನಾನು ಒಂದು ಘಟನೆಯನ್ನು ವಿವರಿಸುತ್ತೇನೆ:

ಒಂದು ದಿನ ಸಂಜೆ ನಾನೂ ಸಿಂಗಾಪುರದ ನನ್ನ ಚೀನೀ ಸಹಪಾಠಿಯೂ ಹಾಸ್ಟೆಲಿಗೆ ಮರಳುತ್ತಿದ್ದೆವು. ದಾರಿಯಲ್ಲಿ ಒಂದು ಶರಾಬು ಅಂಗಡಿಯ ಬಳಿ ಕೆಲವು ಅರಬಿ ಯುವಕರು ನಿಂತುಕೊಂಡಿದ್ದರು. ಅವರು ನನ್ನ ಬುರ್ಖಾದ ಕುರಿತು ಅಪಹಾಸ್ಯ ಮಾಡತೊಡಗಿದರು. ನಾನು ವಾಡಿಕೆಯಂತೆ ಅದೇನೂ ಕೇಳದ ಮಟ್ಟಿನಲ್ಲಿ ದಾಟಿ ಹೋಗುತ್ತಿದ್ದೆ. ಆದರೆ ನನ್ನ ಸಹಪಾಠಿ ತುಂಬಾ ಕೋಪಗೊಂಡು ಅಲ್ಲೇ ನಿಂತು ಬಿಟ್ಟಳು. ಅವರಿಗೆ ಬುದ್ಧಿಕಲಿಸಿ ಬರುತ್ತೇನೆಂದು ಆಕೆ ಹೇಳಿದಳು. ಆಕೆಯನ್ನು ಅಲ್ಲಿಂದ ಕದಲಿಸಲಿಕ್ಕೆ ನಾನು ಪ್ರಯಾಸಪಡಬೇಕಾಯಿತು. ನನ್ನನ್ನೇಕೆ ತಡೆದೆ ಎಂದು ಕೇಳಿ ಆಕೆ ಆಮೇಲೆ ನನ್ನೊಡನೆ ತರಾಟೆಗಿಳಿದಳು. ನನ್ನನ್ನು ಯಾರಾದರೂ ಅಪಹಾಸ್ಯ ಮಾಡಿದರೆ ನನಗೇನೂ ತಟ್ಟುವುದಿಲ್ಲ. ನಾನು ಅದಕ್ಕೆಲ್ಲ ಲಕ್ಷ್ಯಕೊಡುವುದಿಲ್ಲವೆಂದು ನಾನು ಆಕೆಯನ್ನು ಸಮಾಧಾನಪಡಿಸಿದೆ. "ಮುಸ್ಲಿಮರೆಂದು ಹೇಳುವ ನೀವು ಶರಾಬು ಅಂಗಡಿಯಲ್ಲಿ ಕಾಲಕಳೆಯುತ್ತೀರಿ. ಇಸ್ಲಾಮೀ ಸಂಪ್ರದಾಯವನ್ನು ಪಾಲಿಸುವ ಈ ಹೆಣ್ಮಗಳನ್ನು ನೀವು ಅಪಹಾಸ್ಯ ಮಾಡುತ್ತೀರಿ; ನಿಮಗೆ ನಾಚಿಕೆಯಾಗುವುದಿಲ್ಲವೇ?" ಹೀಗೆ ತಾನು ಅವರೊಡನೆ ಕೇಳಲು ಉದ್ದೇಶಿಸಿದ್ದೆ ಎಂದಾಕೆ ಹೇಳಿದಳು.

ಡಾಕ್ಟರೇಟ್‌ನ ಎರಡನೇ ವರ್ಷ ಒಂದು ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲಿಕ್ಕೆ ನಾನು ಸ್ಕಾಟ್‌ಲ್ಯಾಂಡಿಗೆ ಹೋಗಿದ್ದೆ. ಅಲ್ಲಾಹನ ಅನುಗ್ರಹದಿಂದ ಅಲ್ಲಿ ಸಮ್ಮೇಳಿಸಿದ್ದ ಬ್ರಿಟಿಷ್ ಯೂನಿವರ್ಸಿಟಿಗಳ ವಿದ್ಯಾರ್ಥಿಗಳಾದ ರಿಸರ್ಚ್ ಸ್ಕಾಲರ್‌ಗಳಲ್ಲಿ ನನ್ನ ಪ್ರಬಂಧ ಮಾತ್ರ ಆಯ್ಕೆಗೊಂಡಿತು. ಅದರ ಕುರಿತು ವಿಶದೀಕರಿಸಿ ಭಾಷಣ ಮಾಡಲು ನನ್ನೊಡನೆ ಕೇಳಿಕೊಳ್ಳಲಾಯಿತು. ಸಮ್ಮೇಳನದಲ್ಲಿ ಭಾಗವಹಿಸಲಿಕ್ಕೆ ಬಂದವರಿಗೆ ಊರೆಲ್ಲ ತಿರುಗಾಡಿಕೊಂಡು ಬರಲಿಕ್ಕೆ ಏರ್ಪಾಡುಗಳನ್ನು ಮಾಡಲಾಗಿತ್ತು. ಒಂದು ಆದಿತ್ಯವಾರದಂದು ದಕ್ಷಿಣ ದಿಕ್ಕಿನಲ್ಲಿರುವ ಬಲ್ಲಾಟರ್ (Ballater) ಎಂಬ ಗ್ರಾಮದಲ್ಲಿ ಸಾವಿರಾರು ಅಡಿ ಎತ್ತರದ ಒಂದು ಪರ್ವತ ಶಿಖರಕ್ಕೇರುವ ಕಾರ್ಯಕ್ರಮವಿತ್ತು. ಪರ್ವತಾರೋಹಣದಲ್ಲಿ ಆಸಕ್ತಿಯಿಲ್ಲದವರಿಗೆ, ಮುಖ್ಯವಾಗಿ ಸ್ತ್ರೀಯರಿಗೆ ಸ್ಕಾಟ್‌ಲ್ಯಾಂಡಿನ ರಾಜಧಾನಿ ಎಡಿನ್‌ಬರ್ಗ್ ಸಂದರ್ಶಿಸುವ ಕಾರ್ಯಕ್ರಮವಿತ್ತು. ನಾನು ಪರ್ವತಾರೋಹಣವನ್ನು ಆಯ್ಕೆ ಮಾಡಿದೆ. ಹಲವರು ಅದು ನನ್ನ ಮಟ್ಟಿಗೆ ಯೋಗ್ಯ ಆಯ್ಕೆಯಲ್ಲವೆಂದು ಭಾವಿಸಿದರು. ನಾನು ಯೋಚಿಸಿದೆ: ದೇವನು

ಸುಂದರವಾದ ನಿಸರ್ಗ ಸಂಪತ್ತನ್ನು ಸೃಷ್ಟಿಸಿರುವವನು. ಅದನ್ನು ನೋಡುವುದಕ್ಕೆ ತಡೆಯೇನೂ ಇಲ್ಲ. ಪಟ್ಟಣವನ್ನು ಬೇರೊಂದು ಸಂದರ್ಭದಲ್ಲಿ ಒಬ್ಬಂಟಿಯಾಗಿಯೂ ಸಂದರ್ಶಿಸಬಹುದು. ಆದರೆ ಒಂಟಿಯಾಗಿ ಪರ್ವತವನ್ನೇರುವುದು ಪ್ರಯಾಸಕರ. ಹಾಗೆ ಪರ್ವತಾರೋಹಣ ಕಾರ್ಯಕ್ರಮದಲ್ಲಿ ನಾನು ಸಹ ಪಾಲ್ಗೊಂಡೆನು. ಕೊನೆಗೆ ಕಾರ್ಯಕ್ರಮ ಮುಗಿದು ಜೊತೆಗಾರರೊಂದಿಗೆ ಹಿಂತೆರಳಿದಾಗ ಕಾನ್ಫೆರೆನ್ಸ್ ಡೈರೆಕ್ಟರ್ ನನ್ನನ್ನು ತುಂಬಾ ಪ್ರಶಂಸೆ ಮಾಡಿ ನನ್ನ ವಿಶೇಷ ತರದ ಪೋಷಾಕಿನಿಂದ ಏನೂ ಮಾಡಲು ಸಾಧ್ಯವಿದೆಯೆಂದು ನಾನು ಸಾಬೀತುಪಡಿಸಿರುವೆನೆಂದು ಹೇಳಿದರು.

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಇಲ್ಲಿನ ಇತರ ಕಾಲೇಜುಗಳಲ್ಲಿರುವಂತೆ ಯೂನಿಫಾರ್ಮ್ ಇಲ್ಲ. ಆದ್ದರಿಂದ ನಾನು ಬುರ್ಖಾ ಧರಿಸುವುದು ಇಲ್ಲಿ ಆಕ್ಷೇಪಾರ್ಹವಾಗಿರಲಿಲ್ಲ. ಆದರೆ ಪರೀಕ್ಷಾ ವೇಳೆಯಲ್ಲೂ ಘಟಿಕೋತ್ಸವ ಸಂದರ್ಭದಲ್ಲೂ ವಿಶೇಷ ಉಡುಪು ಧರಿಸುವುದು ಅಗತ್ಯವಾಗಿತ್ತು. ಮಹಿಳೆಯರು ಬಿಳಿ ರವಿಕೆ, ಕಪ್ಪು ಲಂಗ ಮತ್ತು ಮೇಲೆ ಕಪ್ಪು ಗೌನು ಧರಿಸಬೇಕಾಗಿತ್ತು. ವಾಚಾ ಪರೀಕ್ಷೆಯ (Viva) ಸಮಯದಲ್ಲೂ ಇದೇ ರೀತಿಯ ಉಡುಪನ್ನು ಧರಿಸಬೇಕಾಗಿತ್ತು. ನಾನು ಕಳವಳಗೊಂಡು ಬಹಳ ಪ್ರಾರ್ಥನೆ ಮಾಡಿದೆ: "ಅಲ್ಲಾಹನೆ, ನಿನ್ನ ಅನುಗ್ರಹದಿಂದ ಮೂರು ವರ್ಷಕಾಲ ಗೋಷಾ ಸಹಿತ ನನ್ನ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿದೆ. ಕೊನೆಯ ಘಟ್ಟದಲ್ಲಿ ಸ್ಕರ್ಟ್ ಮತ್ತು ಬ್ಲೌಸ್ ಧರಿಸಿ ಡಿಪಾರ್ಟ್‌ಮೆಂಟಿಗೆ ಹೋಗುವುದಾದರೆ, ಪರ್ದಾ ನನ್ನ ಪ್ರಗತಿಗೆ ತಡೆಯಾಗುತ್ತದೆಂಬ ಆರೋಪ ಸರಿಯೆಂದು ಸಾಬೀತಾದೀತು. ಆದ್ದರಿಂದ ಒಂದು ಮಾರ್ಗವನ್ನು ನನಗೆ ತೋರಿಸು." ನಾನು ಯೂನಿವರ್ಸಿಟಿಯ ನಿಯಮಾವಳಿಯನ್ನು ಓದಿದೆ. ಆ ವಿಶ್ವವಿದ್ಯಾಲಯದಂತೆ ನಿಯಮಸಂಹಿತೆಯೂ ಸುಮಾರು 750 ವರ್ಷ ಹಿಂದಿನದಾಗಿದೆ. ಅದರಲ್ಲಿ ಬದಲಾವಣೆ ಮಾಡಲು ಯಾರಿಗೂ ಅಧಿಕಾರವಿಲ್ಲ. ನಿಯಮಾವಳಿಯ ಒಂದು ಕಡೆಯಲ್ಲಿ, ಅಗತ್ಯ ಬಿದ್ದರೆ ಯಾರಿಗಾದರೂ ಹಿಂದಿನ ಯೂನಿವರ್ಸಿಟಿಯ ಯೂನಿಫಾರ್ಮ್ ಧರಿಸಬಹುದೆಂದು ಬರೆದುದಾಗಿ ನಾನು ಕಂಡೆ. ಪಂಜಾಬ್ (ಪಾಕಿಸ್ತಾನ್) ಯೂನಿವರ್ಸಿಟಿಯಲ್ಲಿ ಪ್ರತ್ಯೇಕ ಸಮವಸ್ತ್ರ ನಿರ್ಬಂಧಕರವಾಗಿರಲಿಲ್ಲ. ಪದವೀದಾನ ಸಮಾರಂಭದಲ್ಲಿ ವನಿತಾ ಲೆಕ್ಚರರುಗಳು ಸಾಮಾನ್ಯವಾಗಿ ಬಿಳಿ ಸೀರೆ ಧರಿಸುತ್ತಿದ್ದರು. ನಾನು ಬಿಳಿ ಸೀರೆಗೆ ಬದಲು ಬಿಳಿ ಬುರ್ಖಾ ಮತ್ತು ಮೇಲೆ ಕಪ್ಪು ನಿಲುವಂಗಿ ಧರಿಸಲು ನಿರ್ಧರಿಸಿದೆ. ಹಾಗೆ ಮಾಡಿದರೆ ಬಿಳಿ ಮತ್ತು ಕಪ್ಪು ಪೋಷಾಕು ಧರಿಸಬೇಕೆಂಬ ನಿಬಂಧನೆ ಪಾಲಿಸಿದಂತಾಗುತ್ತದೆ. ಹಾಗೆ ಬಿಳಿ ಬುರ್ಖಾ ಮತ್ತು ಕಪ್ಪು ನಿಲುವಂಗಿ ಧರಿಸಿ ವಾಚಾ ಪರೀಕ್ಷೆಗಾಗಿ ಕೋಣೆಯನ್ನು ಪ್ರವೇಶಿಸಿದಾಗ ಪರೀಕ್ಷೆ ನಡೆಸುವ ಪ್ರೊಫೆಸರ್ ಮೊದಲು ನನ್ನೊಡನೆ ಕೇಳಿದ ಪ್ರಶ್ನೆ ಒಂದು ವೇಳೆ ನಿಮ್ಮನ್ನೂ ಚಕಿತಗೊಳಿಸೀತು. ಅವರು ಕೇಳಿದರು – ನಿಮಗೆ ಗೊತ್ತಿದೆಯೇ, ನಾವಿಲ್ಲಿ ಅರ್ಧ ತಾಸು ಕಾಲ ಯಾವ ವಿಷಯದ ಬಗ್ಗೆ ಚರ್ಚೆ ಮಾಡುತ್ತಿದ್ದೆವೆಂದು?" ನಾನು ಗಾಬರಿಗೊಂಡೆ. ನನ್ನ ಸಂಶೋಧನಾ ಪ್ರಬಂಧದಲ್ಲಿ ಕುಂದೇನಾದರೂ ಇದ್ದಿರಬಹುದೆಂದೂ ಅದರ ಬಗ್ಗೆ ಅವರಿಗೆ ಭಿನ್ನಾಭಿಪ್ರಾಯವಿರಬಹುದೆಂದೂ ನಾನು ಊಹಿಸಿದೆ. ಅವರು ಹೇಳಿದರು: "ಯಾವ ಡ್ರೆಸ್ಸಿನಲ್ಲಿ ಇಂದು ನೀವು ಇಲ್ಲಿಗೆ ಬರಬಹುದೆಂದಾಗಿತ್ತು ನಮ್ಮ ಚರ್ಚಾ ವಿಷಯ. ಆದರೆ ನಿಮ್ಮ ಉಡುಪು ನಿಮ್ಮ ವಿದ್ಯಾಭ್ಯಾಸಕ್ಕೆ ತಡೆಯಾಗುವುದಿಲ್ಲವೆಂದು ನಮಗೆ ಮನವರಿಕೆಯಾಯಿತು." ಇದೇ ರೀತಿ ಪದವೀದಾನ ಸಮಾರಂಭದಲ್ಲೂ ನಾನು ಬಿಳಿ ಬುರ್ಖಾ ಮತ್ತು ಕಪ್ಪು ಗೌನು ಧರಿಸಿದೆನು. ಅಲ್ಲಿಯ ಸಂಪ್ರದಾಯದ ಪ್ರಕಾರ ವೈಸ್ ಚಾನ್ಸಲರಿಗೆ ನಾನು ಹಸ್ತಲಾಘವವನ್ನೂ ಮಾಡಲಿಲ್ಲ. ಆಗ ನನ್ನ ಕಾಲೇಜ್ ಸೆಕ್ರಿಟರಿ (ಅವರನ್ನು ನಾವು ಪಾಕಿಸ್ತಾನದಲ್ಲಿ ವೈಸ್ ಪ್ರಿನ್ಸಿಪಾಲ್ ಎಂದು ಕರೆಯುತ್ತೇವೆ) ನನ್ನೊಡನೆ ಹೇಳಿದರು – ಈ ವಿಶ್ವವಿದ್ಯಾಲಯದ ನೂರಾರು ವರ್ಷಗಳ ದೀರ್ಘಕಾಲ ಚರಿತ್ರೆಯಲ್ಲಿ ನಾನು ಹೊಸ ಒಂದು ಕ್ರಮವನ್ನು ಸೃಷ್ಟಿಸಿರುವೆನೆಂದು.

ದೇವಾನುಗ್ರಹದಿಂದ ವಾಚಾ ಪರೀಕ್ಷೆಯಲ್ಲಿ ನನ್ನ ಉನ್ನತ ಶ್ರೇಣಿಯ ಯಶಸ್ಸು ಮತ್ತು ಡಾಕ್ಟರೇಟಿಗಾಗಿ ಸಿದ್ಧಪಡಿಸಿದ ಏಳು ಸಂಶೋಧಕ ಪ್ರಬಂಧಗಳಿಗೆ ಲಭಿಸಿದ ಮನ್ನಣೆಯ ಪರಿಣಾಮವಾಗಿ ನನ್ನ ಅಧ್ಯಾಪಿಕೆಯರು ನನ್ನನ್ನು ಬಹಳವಾಗಿ ಶ್ಲಾಘಿಸಿದರು. ನನ್ನ ಕಾಲೇಜ್ ಪ್ರಿನ್ಸಿಪಾಲ್ ನನ್ನ ಹಾಸ್ಟೆಲ್ ಕೋಣೆಗೆ ಬಂದು ನನ್ನನ್ನು ಪ್ರಶಂಸಿದಾಗ ನಾನು ಚಕಿತಗೊಂಡೆ. ನಾನು ಲಜ್ಜಿತಳಾಗಿ, ನನ್ನನ್ನು ನಿಮ್ಮಲ್ಲಿಗೆ ಕರೆಯಬಹುದಿತ್ತಲ್ಲವೇ ಎಂದು ಹೇಳಿದಾಗ ಅವರು, "ಅಲ್ಲ, ನಿಮ್ಮಂಥ ಪ್ರತಿಭೆಯುಳ್ಳ ಆದರ್ಶ ಸ್ಥೈರ್ಯವುಳ್ಳ ವಿದ್ಯಾರ್ಥಿಗಳನ್ನು ಯಾವಾಗಲೂ ಕಾಣುವುದು ದುರ್ಲಭ. ಸಂರೋಲ್ ಕಾಲೇಜಿಗೆ (ನನ್ನ ಕಾಲೇಜಿನ ಹೆಸರು) ನಿಮ್ಮ ಮೇಲೆ ಅಭಿಮಾನವಿದೆ" ಎಂದು ಹೇಳಿದರು. ಈ ವಿಷಯವನ್ನು ನಾನು ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ (ಅಹ್ಮದಿಯಾ ಜಮಾಅತಿನ ಚತುರ್ಥ ಸರ್ವೋನ್ನತ ನಾಯಕ) ಅವರಿಗೆ ಬರೆದು ತಿಳಿಸಿದಾಗ, ಖಲೀಫರು ಅವರ ಸ್ವಂತ ಕೈ ಬರಹದಲ್ಲಿ ಉತ್ತರ ಬರೆದರು: "ಒಂದು ಸಂರೋಲ್ ಕಾಲೇಜೇನು, ದೂರದೃಷ್ಟಿಯಿದ್ದರೆ ಮುಸ್ಲಿಂ ಜಗತ್ತೇ ನಿಮ್ಮ ಬಗ್ಗೆ ಅಭಿಮಾನಪಡಬೇಕಾಗಿದೆ."

ಅಲ್ಲಾಹನ ಅನುಗ್ರಹದಿಂದ ಬುರ್ಖಾ ಧರಿಸಿಕೊಂಡೇ ನಾನು ಉನ್ನತ ವಿದ್ಯಾಭ್ಯಾಸವನ್ನು ಗಳಿಸಿ ಹಲವು ರಾಜ್ಯಗಳನ್ನು ಸಂದರ್ಶಿಸಿದೆನು. ದಿವಂಗತ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ – ಅಹ್ಮದಿಯಾ ಜಮಾಅತಿನ ಮೂರನೇ ಖಲೀಫ – (ಅವರ ಪ್ರೋತ್ಸಾಹ ಮತ್ತು ಪ್ರಾರ್ಥನೆಯ ಫಲವಾಗಿಯೂ ಅವರ ನಿರ್ದೇಶನ ಪ್ರಕಾರವೂ ನಾನು ಆಕ್ಸ್‌ಫರ್ಡಿಗೆ ಹೋಗಿದ್ದೆ.) ನಾನು ಹೋಗುವ ಸಂದರ್ಭದಲ್ಲಿ ನನಗೆ, "ಕಲಿಯುವುದು ಮಾತ್ರವಲ್ಲ, ಯುರೋಪಿನ ಪರ್ಯಟನೆ ಸಹ ಮಾಡಬೇಕು' ಎಂದು ಉಪದೇಶಿಸಿದ್ದರು.

ಅಲ್ಲಾಹನ ಅನುಗ್ರಹದಿಂದ ನಾನು ಕಲಿತೆ, ಯುರೋಪ್ ದೇಶಗಳ ಪ್ರವಾಸವನ್ನೂ ಮಾಡಿದೆ. ಆಕ್ಸ್‌ಫರ್ಡ್‌ನಲ್ಲಿ ಡಾಕ್ಟರೇಟ್ ಪೂರ್ಣಗೊಳಿಸಿದ ನಂತರ ಪೋಸ್ಟ್ ಡಾಕ್ಟರೇಟ್ ರಿಸರ್ಚ್ ಸಹ ಮುಗಿಸಿದೆ. ಆ ಮಧ್ಯೆ ರಜೆಯ ಮೇಲೆ ನಾನು ಸ್ವಿಟ್ಜರ್ಲೆಂಡಿಗೆ ಹೋಗಿದ್ದೆ. ಅಲ್ಲಿ ನನಗೆ ಒಬ್ಬ ಅಮೇರಿಕನ್ ಏರ್‌ಫೋರ್ಸ್ ಆಫೀಸರ್ ಮತ್ತು ಅವರ ಪತ್ನಿಯೊಂದಿಗೆ ಮಾತನಾಡುವ ಅವಕಾಶ ಸಿಕ್ಕಿತು. ನೀವು ಮುಸ್ಲಿಮೋ ಎಂದು ಅವರು ನನ್ನೊಡನೆ ಪ್ರಶ್ನಿಸಿದರು. ನಾನು ಹೌದೆಂದು ಹೇಳಿದಾಗ, ಅವರು ಇಸ್ಲಾಮಿನ ಕುರಿತು ಮತ್ತು ಇಸ್ಲಾಂ ಧರ್ಮದಲ್ಲಿ ಸ್ತ್ರೀಯರಿಗಿರುವ ಹಕ್ಕುಗಳ ಬಗ್ಗೆ ಅನೇಕ ಪ್ರಶ್ನೆಗಳನ್ನು

**21ನೇ ಪುಟಕ್ಕೆ**

# ಉಪವಾಸ

ಉಪವಾಸಕ್ಕೆ ಅರಬಿ ಭಾಷೆಯಲ್ಲಿ ಸೌಮ್ ಎಂದು ಹೆಸರು. ಇದರ ಅರ್ಥ ತಡೆದಿಟ್ಟುಕೊಳ್ಳುವುದು ಎಂದಾಗಿದೆ. ಇಸ್ಲಾಮ್ ಧರ್ಮದಲ್ಲಿ ಸೌಮ್ ಎಂಬ ಪದವು ತಿನ್ನುವುದು, ಕುಡಿಯುವುದು ಮತ್ತು ಇಸ್ಲಾಮ್ ಧರ್ಮ ನಿಷಿದ್ಧಗೊಳಿಸಿದ ಕೃತ್ಯಗಳಿಂದ ತಮ್ಮನ್ನು ತಡೆದಿಟ್ಟುಕೊಳ್ಳುವುದಕ್ಕೆ ಪ್ರಯೋಗಿಸಲ್ಪಡುತ್ತದೆ.

ಉಪವಾಸ ಮಾಡುವುದು ಮನುಷ್ಯನ ಆಧ್ಯಾತ್ಮಿಕ ಉನ್ನತಿಗೆ ಅತ್ಯುತ್ತಮವಾದೊಂದು ಮಾರ್ಗವಾಗಿದೆ. ಆಹಾರ ಪದಾರ್ಥಗಳು ಶರೀರಕ್ಕೆ ಅವಶ್ಯಕವಾಗಿರುವ ಹಾಗೆಯೇ ಉಪವಾಸ ಮಾಡುವುದು ಆತ್ಮಕ್ಕೆ ಅವಶ್ಯಕವಾಗಿದೆ. ಶರೀರವು ಆಹಾರವಿಲ್ಲದೆ ಹೇಗೆ ನೆಲೆ ನಿಲ್ಲಲಾರದೋ ಹಾಗೆಯೇ ಆತ್ಮದ ನೆಲೆನಿಲ್ಲುವಿಕೆಗೆ ಉಪವಾಸವು ಅಗತ್ಯವಾಗಿದೆ.

ಉಪವಾಸ ಮಾಡುವುದರಿಂದ ಮನುಷ್ಯನಿಗೆ ಅಲ್ಲಾಹನ ಸಾಮೀಪ್ಯ ಲಭಿಸುತ್ತದೆ. ಅವನ ಮೇಲೆ ಅಲ್ಲಾಹನ ಅನುಗ್ರಹ ಸುರಿಸಲ್ಪಡುತ್ತದೆ. ಅವನ ಪ್ರಾರ್ಥನೆಗಳು ಅಂಗೀಕರಿಸಲ್ಪಡುತ್ತವೆ. ಅವನು ಪಾಪಗಳಿಂದ ರಕ್ಷಿಸಲ್ಪಡುತ್ತಾನೆ. ಅವನು ಪರಿಶುದ್ಧ ಗೊಳಿಸಲ್ಪಡುತ್ತಾನೆ. ಪಾಪಗಳಿಂದ ರಕ್ಷಿಸಲ್ಪಡಲಿರುವ ಅತ್ಯುತ್ತಮ ಮಾರ್ಗ ಉಪವಾಸ ಮಾಡುವುದಾಗಿದೆ.

ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಿರುವ ಬಹಳ ಉತ್ತಮವಾದ ವಿಧಾನ ಉಪವಾಸ ಮಾಡುವುದಾಗಿದೆ. ಅಲ್ಲಾಹನು ಒಬ್ಬನ ಕೃತ್ಯದಿಂದ ಸಂಪ್ರೀತನಾದರೆ ಆ ವ್ಯಕ್ತಿಗೆ ಅದಕ್ಕಿಂತ ಹೆಚ್ಚಿನದೇನೂ ಬೇಕಾಗಿರುವುದಿಲ್ಲ. ಅಲ್ಲಾಹನು ತನ್ನ ದಾಸನ ಸತ್ಕರ್ಮಗಳಿಂದ ಸಂತೋಷಭರಿತನಾದರೆ ಅವನು ತನ್ನ ದಾಸನಿಗೆ ಅನೇಕ ಅನುಗ್ರಹಗಳನ್ನು ದಯಪಾಲಿಸುತ್ತಾನೆ. ಅಂತಹ ದಾಸನ ಹೃದಯವನ್ನೂ ಜೀವವನ್ನೂ ಅಲ್ಲಾಹನು ತನ್ನ ಪ್ರಕಾಶದಿಂದ ಬೆಳಗುತ್ತಾನೆ. ಅವನ ಪ್ರತಿಯೊಂದು ವಸ್ತುವಿನೊಳಗೆ ಅಲ್ಲಾಹನು ಅನುಗ್ರಹ ಸುರಿಸುತ್ತಾನೆ. ಅವನೊಂದಿಗೆ ಸಂಬಂಧ ಜೋಡಿಸಿದ ವಸ್ತು ಸಹ ಅನುಗ್ರಹಭರಿತವಾಗುತ್ತದೆ.

ಉಪವಾಸವನ್ನು ಅನುಷ್ಠಿಸುವುದು ಎಲ್ಲ ಪ್ರವಾದಿಗಳ ನಡೆವಳಿಕೆಗಳಿಗೆ ಸೇರಿದುದಾಗಿದೆ. ಅವರ ಮೂಲಕ ಅಲ್ಲಾಹನ ಸಾಮೀಪ್ಯ, ಅವನ ಸಂಪ್ರೀತಿ ಮತ್ತು ಅವರ ಕುರಿತು ಜ್ಞಾನ ಲಭಿಸುತ್ತದೆ.

## ರಮಝಾನ್ ತಿಂಗಳ ಉಪವಾಸ

ರಮಝಾನ್ ತಿಂಗಳಲ್ಲಿ ಪ್ರತಿಯೊಬ್ಬ ಪ್ರಾಪ್ತ ವಯಸ್ಕ ಮುಸ್ಲಿಮನು ಉಪವಾಸವನ್ನು ಕಡ್ಡಾಯವಾಗಿ ಅನುಷ್ಠಿಸಬೇಕು. ಯಾರಾದರೂ ಪ್ರಯಾಣ ಮಾಡುತ್ತಿದ್ದರೆ ಅಥವಾ ರೋಗಿಯಾಗಿದ್ದರೆ ರಮಝಾನ್ ತಿಂಗಳಲ್ಲಿ ಉಪವಾಸ ಅನುಷ್ಠಿಸಬಾರದು. ಆದರೆ ಪ್ರಯಾಣ ಮುಗಿದ ನಂತರ ಅಥವಾ ರೋಗವಿಮುಕ್ತನಾದ ನಂತರ ಬಿಟ್ಟು ಹೋದ ದಿನಗಳ ಉಪವಾಸ ಅನುಷ್ಠಿಸಬೇಕು. ಮಹಿಳೆಯರು ಮುಟ್ಟಿನ ಕಾಲದಲ್ಲಿ ಮತ್ತು ಮಗುವಿಗೆ ಹಾಲೂಡಿಸುತ್ತಿರುವಾಗ ರಮಝಾನ್ ತಿಂಗಳಲ್ಲಿ ಉಪವಾಸ ಮಾಡಬಾರದು. ಯಾರಾದರೂ ಯಾವುದಾದರೂ ಯೋಗ್ಯ ಕಾರಣವಿಲ್ಲದೆ ಉದ್ದೇಶಪೂರ್ವಕವಾಗಿ ಉಪವಾಸ ಅನುಷ್ಠಿಸದಿದ್ದರೆ ಅಂತಹ ವ್ಯಕ್ತಿ ಅಲ್ಲಾಹನ ಆಜ್ಞೆಯನ್ನು ತೀವ್ರವಾಗಿ ಉಲ್ಲಂಘಿಸುವವನೆಂದು ಪರಿಗಣಿಸಲ್ಪಡುವುದು. ಅಲ್ಲಾಹನ ಕೋಪಕ್ಕೆ ಅವನು ಗುರಿಯಾಗುವನು. ಅವನು ಅಲ್ಲಾಹನಿಂದ ದೂರ ಸರಿಸಲ್ಪಡುತ್ತಾನೆ. ಅವನು ಅಲ್ಲಾಹನ ಆಜ್ಞೆಯನ್ನು ಪಾಲಿಸುವುದಿಲ್ಲವಾದುದರಿಂದ ಅವನು ಮುಸ್ಲಿಮನೂ ಅಲ್ಲ.

ರಮಝಾನ್ ತಿಂಗಳು ಬಹಳ ಅನುಗ್ರಹಭರಿತ ತಿಂಗಳಾಗಿದೆ. ಈ ತಿಂಗಳಲ್ಲಿ ಸ್ವರ್ಗದ ಬಾಗಿಲುಗಳು ತೆರೆಯಲ್ಪಡುತ್ತವೆ. ಶೈತಾನನು ಬಂಧಿಸಲ್ಪಡುತ್ತಾನೆ. ಇದೇ ತಿಂಗಳಲ್ಲಿ ಪವಿತ್ರ ಖುರ್‌ಆನ್ ಅವತೀರ್ಣವಾಗಲು ಪ್ರಾರಂಭವಾಯಿತು. ಇದೇ ತಿಂಗಳಲ್ಲಿ ಲೈಲತುಲ್ ಖದ್ರ್ ಎಂಬ ವಿಶಿಷ್ಟ ರಾತ್ರಿ ಇರುತ್ತದೆ. ರಮಝಾನ್ ತಿಂಗಳ ಕೊನೆಯ ಹತ್ತು ದಿವಸಗಳ ಬಿಡಿ ರಾತ್ರಿಗಳಲ್ಲಿ ಎಂದರೆ 21, 23, 25, 27 ಮತ್ತು 29ನೇ ರಾತ್ರಿಗಳಲ್ಲಿ ಯಾವುದಾದರೊಂದು ರಾತ್ರಿ ಈ ಮಹತ್ವಪೂರ್ಣ ರಾತ್ರಿ ಇರುತ್ತದೆ. ಈ ತಿಂಗಳ ಕೊನೆಯ ಹತ್ತು ದಿನಗಳಲ್ಲಿ ಇಅ್‌ತಿಕಾಫ್ ಎಂದು ಕರೆಯಲ್ಪಡುವ, ಮಸ್‌ಜಿದ್‌ನಲ್ಲಿಯೇ ಇದ್ದು ಹೊರಗೆ ಹೋಗದೆ ಅಲ್ಲಾಹನ ಧ್ಯಾನ ಮತ್ತು ಆರಾಧನೆಗಳನ್ನು ಮಾಡಲಾಗುತ್ತದೆ.

## ಉಪವಾಸ ಮಾಡುವ ರೀತಿ

ಶಅಬಾನ್ ತಿಂಗಳು 29ನೇ ದಿನಾಂಕ ಕೊನೆಗೊಂಡು ಮೂವತ್ತನೆಯ ದಿನಾರಂಭದಲ್ಲಿ ಚಂದ್ರನು ಕಾಣಿಸಿಕೊಂಡರೆ ರಮಝಾನ್ ತಿಂಗಳು ಆರಂಭವಾಯಿತೆಂದು ತಿಳಿದುಕೊಳ್ಳಬೇಕು. ಅಥವಾ ಶಅಬಾನ್ ತಿಂಗಳ ಮೂವತ್ತು ದಿವಸಗಳು ಪೂರ್ಣವಾದರೆ ಚಂದ್ರನು ಕಾಣಿಸಿಕೊಳ್ಳುವಷ್ಟು ಆಕಾಶವು ಶುಭ್ರವಾಗಿಲ್ಲವಾದರೂ ರಮಝಾನ್ ತಿಂಗಳು ಆರಂಭವಾಯಿತೆಂದು ಗಣಿಸಬೇಕು. ರಮಝಾನ್ ತಿಂಗಳು ಪ್ರಾರಂಭವಾದ ರಾತ್ರಿ ಇಶಾ ಪ್ರಾರ್ಥನೆಯ ನಂತರ ತರಾವೀಹ್ ಪ್ರಾರ್ಥನೆ ಮಾಡಬೇಕು. ಉಪವಾಸ ಮಾಡುವ ನಿಯ್ಯತ್ (ಸಂಕಲ್ಪ) ಹೀಗೆ ಮಾಡಬೇಕು:

**ವ ಬಿಸೌಮಿ ಗ್ರದಿನ್ ನವಯ್‌ತು ಮಿನ್ ಶಹ್‌ರಿ ರಮಝಾನ**

ಅರ್ಥ: ನಾನು ರಮಝಾನ್ ತಿಂಗಳ ಉಪವಾಸವನ್ನು ನಾಳೆ ಅನುಷ್ಠಿಸುವ ಸಂಕಲ್ಪ ಮಾಡಿರುವೆನು.

ಪೂರ್ವದಿಕ್ಕಿನಲ್ಲಿ ಸೂರ್ಯ ಪ್ರಕಾಶ ಕಾಣಿಸುವ ಮೊದಲೇ ನಸುಕಿನಲ್ಲಿ ಎದ್ದು ಆಹಾರವನ್ನು ತಿನ್ನಬೇಕು. ಹೀಗೆ ತಿನ್ನುವ ಆಹಾರ, ಕುಡಿಯುವ ಪಾನೀಯ ಮೊದಲಾದವುಗಳನ್ನು ಸಹ್‌ರೀ ಎಂದು ಹೇಳುತ್ತಾರೆ.

ನಸುಕಿನಿಂದ ಸೂರ್ಯಾಸ್ತಮಾನದ ತನಕ ತಿನ್ನುವುದು, ಕಡಿಯುವುದು ನಿಷಿದ್ಧವಾಗಿದೆ. ಸೂರ್ಯಾಸ್ತಮಾನವಾದ ಕೂಡಲೇ ಆಹಾರ ಪಾನೀಯಾದಿಗಳನ್ನು ಸೇವಿಸಿ ಉಪವಾಸವನ್ನು ಮುಕ್ತಾಯಗೊಳಿಸಲಾಗುತ್ತದೆ. ಆಗ ಹೀಗೆ ಪ್ರಾರ್ಥಿಸಬೇಕು:

**ಅಲ್ಲಾಹುಮ್ಮ ಲಕ ಸುಮ್ತು ವ ಅಲಾ ರಿಝ್‌ಖಿಕ ಅಫ್ತರ್‌ತು ಧಹಬ ಝ್ಝಮಅ ವಬ್ತಲ್ಲತಿಲ್ ಉರೂಖು ವ ಸಬತಲ್ ಅಜ್‌ರು ಇನ್‌ಶಾ**

**ಅಲ್ಲಾಹು ಅಲ್ಲಾಹುಮ್ಮ ಇನ್ನೀ ಅಸ್‌ಅಲುಕ ಬಿರಹ್ಮತಿಕಲ್ಲತೀ ವಸಿಅತ್ ಕುಲ್ಲಶೈಯಿನ್ ಆನ್ ತಗ್.ಫಿರಲೀ ಧುನೂಬಿ.**

ಅರ್ಥ: "ಹೇ ಅಲ್ಲಾಹ್, ನಾನು ನಿನಗಾಗಿ ಉಪವಾಸ ಮಾಡಿದೆ. ನಾನು ನಿನ್ನ ಆಹಾರದಿಂದಲೇ ನನ್ನ ಉಪವಾಸ ಮುಕ್ತಾಯಗೊಳಿಸಿದೆ. ದಾಹ ಶಮನವಾಯಿತು. ರಕ್ತನಾಳಗಳು ಚೇತನಗೊಂಡುವು, ನೀನು ಇಚ್ಛಿಸುವುದಾದರೆ ತಕ್ಕುದಾದ ಪ್ರತಿಫಲವೂ ಸಿಗುವುದು. ಹೇ ಅಲ್ಲಾಹ್, ಎಲ್ಲ ವಸ್ತುಗಳನ್ನು ಆವರಿಸಿರುವ ನಿನ್ನ ಕಾರುಣ್ಯದ ಮೂಲಕ ನೀನು ನನ್ನ ಪಾಪಗಳನ್ನು ಕ್ಷಮಿಸಬೇಕೆಂದು ನಾನು ನಿನ್ನನ್ನು ಪ್ರಾರ್ಥಿಸುತ್ತೇನೆ."

ಉಪವಾಸವನ್ನು ಮುಕ್ತಾಯಗೊಳಿಸುವುದನ್ನು ಇಫ್ತಾರ್ ಎಂದು ಹೇಳುತ್ತಾರೆ. ಖರ್ಜೂರ ತಿಂದು ಉಪವಾಸವನ್ನು ಮುರಿಯುವುದು ಉತ್ತಮವಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೀಗೆಯೇ ಮಾಡುತ್ತಿದ್ದರು. ಖರ್ಜೂರ ಸಿಗದಿದ್ದರೆ ನೀರನ್ನು ಕುಡಿದು ಉಪವಾಸವನ್ನು ಕೊನೆಗೊಳಿಸಬಹುದು.

ಉಪವಾಸ ಮಾಡುವವನು ಧಿಕ್ರೆ ಇಲಾಹೀ (ಅಲ್ಲಾಹನ ಸ್ಮರಣೆ) ಮಾಡುತ್ತಾ ಇರಬೇಕಾದುದು ಕಡ್ಡಾಯವಾಗಿದೆ. ಅವನು ಸುಳ್ಳು ಹೇಳಬಾರದು, ಪರರನ್ನು ದೂಷಿಸಬಾರದು, ಅಸೂಯೆದೋರಬಾರದು, ದ್ವೇಷಿಸಬಾರದು, ಜಗಳ ಮಾಡಬಾರದು, ಎಲ್ಲ ವಿಧದ ನಿಷಿದ್ಧ ಕೆಲಸಗಳನ್ನು ಮಾಡಬಾರದು. ಯಾರು ಉಪವಾಸ ಆಚರಿಸಿ ಈ ಎಲ್ಲ ಕೆಲಸಗಳನ್ನು ಮಾಡುತ್ತಾನೋ ಅವನು ಯಥಾರ್ಥವಾಗಿ ಉಪವಾಸ ಅನುಷ್ಠಿಸುವವನಾಗಿರುವುದಿಲ್ಲ. ಅವನು ಕೇವಲ ಹಸಿವೆ ಮತ್ತು ಬಾಯಾರಿಕೆಯಿಂದ ನಿಷ್ಪ್ರಯೋಜಕವಾಗಿ ಬಳಲುತ್ತಾನೆ. ಅಂತಹ ವ್ಯಕ್ತಿಯ ಉಪವಾಸ ಅಲ್ಲಾಹನ ಸನ್ನಿಧಿಯಲ್ಲಿ ಅಂಗೀಕಾರ ಪಡೆಯುವುದಿಲ್ಲ. ಅವನು ಯಾವ ಉತ್ತಮ ಪ್ರತಿಫಲಕ್ಕೂ ಅರ್ಹನಾಗುವುದಿಲ್ಲ, ಅವನೊಬ್ಬ ಪಾಪಿಯಾಗುತ್ತಾನೆ.

## ಉಪವಾಸವನ್ನು ಮಧ್ಯದಲ್ಲಿ ಬಿಡುವುದಕ್ಕೆ ಶಿಕ್ಷೆ

ಉಪವಾಸ ಮಾಡಿ ಧಾರ್ಮಿಕ ನಿಯಮಗಳಿಗೆ ಅನುಸಾರವಾದ ಅಂಗೀಕಾರವಿಲ್ಲದೆ ಮಧ್ಯದಲ್ಲಿ ಬಿಟ್ಟುಬಿಡುವುದು ಪಾಪಕೃತ್ಯವಾಗಿದೆ. ಅಲ್ಲಾಹನ ಕೋಪಕ್ಕೆ ಅಂತಹ ವ್ಯಕ್ತಿ ಈಡಾಗುತ್ತಾನೆ. ಉಪವಾಸ ಮಾಡಿ ಅದನ್ನು ಪೂರ್ಣಗೊಳಿಸದೆ ಮಧ್ಯದಲ್ಲಿ ಬಿಡುವವನು ಅದಕ್ಕೆ ಪರಿಹಾರ ಕೊಡಬೇಕು. ಅದಕ್ಕಿರುವ ಪರಿಹಾರ ಒಬ್ಬ ಗುಲಾಮನನ್ನು ವಿಮೋಚನೆ ಮಾಡುವುದಾಗಿದೆ. ಗುಲಾಮನನ್ನು ವಿಮೋಚಿಸುವ ಶಕ್ತಿಯಿಲ್ಲದಿದ್ದರೆ ಅಥವಾ ವಿಮೋಚಿಸಲು ಗುಲಾಮನು ಸಿಗಲಿಲ್ಲವಾದರೆ ಅಂತಹ ವ್ಯಕ್ತಿ ನಿರಂತರವಾಗಿ ಅರುವತ್ತು ದಿನಗಳ ಉಪವಾಸ ಮಾಡಬೇಕು. ಮಧ್ಯದಲ್ಲಿ ಒಂದು ಉಪವಾಸ ಬಿಟ್ಟು ಹೋದರೆ ಪುನಃ ಅರುವತ್ತು ದಿನಗಳ ಉಪವಾಸ ನಿರಂತರವಾಗಿ ಅನುಷ್ಠಿಸಬೇಕು. ಉಪವಾಸ ಅನುಷ್ಠಿಸುವ ಶಕ್ತಿಯಿಲ್ಲವಾದರೆ ಅರುವತ್ತು ಬಡಜನರಿಗೆ ಆಹಾರ ನೀಡಬೇಕು.

## ಉಪವಾಸ ಭಂಗವಾಗುವ ಕೃತ್ಯಗಳು

ಉದ್ದೇಶಪೂರ್ವಕವಾಗಿ ತಿನ್ನುವುದರಿಂದ, ಕುಡಿಯುವುದರಿಂದ, ಸ್ತ್ರೀ ಸಂಪರ್ಕ ಮಾಡುವುದರಿಂದ, ಮುಟ್ಟು ಅಥವಾ ಹೆರಿಗೆಯ ರಕ್ತ ಸ್ರಾವದಿಂದ ಉಪವಾಸಕ್ಕೆ ಭಂಗವುಂಟಾಗುತ್ತದೆ. ಮರೆತು ತಿಂದರೆ, ಕುಡಿದರೆ, ವಾಂತಿಯಾದರೆ, ಸ್ವಪ್ನಸ್ಖಲನವಾದರೆ ಉಪವಾಸ ಭಂಗವಾಗಲಾರದು.

ಉಪವಾಸ ಅನುಷ್ಠಿಸಿರುವಾಗ ಹಲ್ಲು ಶುಚಿಮಾಡುವುದು, ಮೀಯುವುದು, ಶರೀರಕ್ಕೆ ಎಣ್ಣೆ ಸವರುವುದು, ಒದ್ದೆ ಬಟ್ಟೆ ಶರೀರದ ಮೇಲೆ ಹಾಕಿಕೊಳ್ಳುವುದು, ಕಣ್ಣಿಗೆ ಸುರ್ಮ ಹಾಕುವುದು, ಕನ್ನಡಿ ನೋಡುವುದು, ಸುವಾಸನೆಯ ದ್ರವ್ಯ ಮೂಸುವುದು ಅಥವಾ ಬಟ್ಟೆಗೆ ತಗಲಿಸುವುದು ನಿಷಿದ್ಧವಲ್ಲ. ಈ ಕೆಲಸಗಳಿಂದ ಉಪವಾಸ ಭಂಗವಾಗಲಾರದು.

## ವಿವಿಧ ರೀತಿಯ ಉಪವಾಸಗಳು

**ಫರ್ಝ್ ಉಪವಾಸ:** ರಮಝಾನ್ ತಿಂಗಳಲ್ಲಿ ಅನುಷ್ಠಿಸಲಾಗುವ ಉಪವಾಸ ಪ್ರತಿಯೊಬ್ಬ ಮುಸ್ಲಿಮನಿಗೆ ಫರ್ಝ್ ಆಗಿದೆ. ಎಂದರೆ ಕಡ್ಡಾಯವಾಗಿ ಅನುಷ್ಠಿಸಬೇಕಾದುದಾಗಿದೆ.

**ನಫ್ಲ್ ಉಪವಾಸ:** ನಫ್ಲ್ ಉಪವಾಸ ಐಚ್ಛಿಕ ಉಪವಾಸವಾಗಿದೆ. ಈ ಉಪವಾಸ ಅನುಷ್ಠಿಸಿದರೆ ಪುಣ್ಯ ಸಿಗುವುದು. ಈ ಉಪವಾಸ ಅನುಷ್ಠಿಸದಿದ್ದರೆ ಪಾಪದೋಷವಿರಲಾರದು. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನಫಲ್ ಉಪವಾಸ ಅನುಷ್ಠಿಸುತ್ತಿದ್ದರು. ಅವರು ಅನುಷ್ಠಿಸುತ್ತಿದ್ದ ನಫ್ಲ್ ಉಪವಾಸ ಈ ಕೆಳಗಿನವುಗಳಾಗಿವೆ:

1. ಶವ್ವಾಲ್ ತಿಂಗಳ ಪ್ರಾರಂಭದ ಆರು ದಿನ.
2. ಪ್ರತಿ ತಿಂಗಳು 13, 14, 15 ದಿನಾಂಕಗಳಲ್ಲಿ ಮೂರುದಿನ.
3. ಅರಫದ ದಿನ ಎಂದರೆ ಝುಲ್‌ಹಜ್ ತಿಂಗಳ 9ನೇ ದಿನಾಂಕ,
4. ಮುಹರ್ರಮ್ ತಿಂಗಳ 9ನೇ ಮತ್ತು 10ನೇ ದಿನಾಂಕ.
5. ಕೆಲವು ಸಾರಿ ಒಂದು ದಿನ ಉಪವಾಸ ಮಾಡಿ ಮರುದಿನ ಉಪವಾಸ ಅನುಷ್ಠಿಸುತ್ತಿರಲಿಲ್ಲ. ಹೀಗೆಯೇ ಹಲವಾರು ದಿನ ಉಪವಾಸ ಮಾಡುತ್ತಾ ಇದ್ದರು.

ವರ್ಷವಿಡೀ ಎಡೆಬಿಡದೆ ಪ್ರತಿದಿನ ಉಪವಾಸ ಮಾಡುವುದು, ಈದುಲ್ ಫಿತರ್ ಮತ್ತು ಈದುಲ್ ಅಝ್‌ಹಾ ದಿನ ಉಪವಾಸ ಮಾಡುವುದು ನಿಷಿದ್ಧವಾಗಿದೆ.

ನಫಲ್ ಉಪವಾಸ ಪೂರ್ಣಗೊಳಿಸದೆ ಮಧ್ಯದಲ್ಲಿ ಅದಕ್ಕೆ ಭಂಗವನ್ನುಂಟು ಮಾಡಿದರೆ ಅದಕ್ಕೆ ಪರಿಹಾರ ಕೊಡಬೇಕಾಗಿಲ್ಲ. ಇಷ್ಟವಿದ್ದರೆ ಕೊಡಬಹುದು.

**ಕಪ್ಫಾರ ಉಪವಾಸ:** ಯಾವುದಾದರೂ ಒಂದು ಆಜ್ಞೆ ಉಲ್ಲಂಘಿಸಿದುದಕ್ಕಾಗಿ ಅಥವಾ ಫರ್ಝ್ (ಕಡ್ಡಾಯ) ಕೃತ್ಯ ನೆರವೇರಿಸದಿದ್ದುದಕ್ಕಾಗಿ ಪರಿಹಾರವಾಗಿ ನಿಗದಿಪಡಿಸಲಾದ ಉಪವಾಸ ಈ ಮುಂದಿನವುಗಳಾಗಿವೆ:

1. ಯಾರಾದರೂ ಆಣೆ ಹಾಕಿ ಒಂದು ಮಾತನ್ನು ಹೇಳಿ ಅನಂತರ ಅದನ್ನು ಉಲ್ಲಂಘಿಸಿ ವರ್ತಿಸಿದರೆ ಅಂತಹ ವ್ಯಕ್ತಿ ಹತ್ತು ಬಡಜನರಿಗೆ ಊಟ ಕೊಡಬೇಕು. ಅಥವಾ ಅವರಿಗೆ ವಸ್ತ್ರದಾನ ಮಾಡಬೇಕು. ಅಥವಾ ಗುಲಾಮನನ್ನು ವಿಮೋಚಿಸಬೇಕು. ಹೀಗೆ ಮಾಡಲು ಶಕ್ತಿ

ಇಲ್ಲದಿದ್ದರೆ ಮೂರು ದಿನ ಉಪವಾಸ ಮಾಡಬೇಕು.

2. ಯಾರಾದರೂ ಪೂರ್ಣಪ್ರಜ್ಞೆಯಿಂದ ರಮಝಾನ್ ತಿಂಗಳ ಉಪವಾಸವನ್ನು ಮಧ್ಯದಲ್ಲಿ ಬಿಟ್ಟರೆ ಅಥವಾ ಯಾವುದಾದರೂ ಸತ್ಯವಿಶ್ವಾಸಿಯನ್ನು ತಪ್ಪುಗ್ರಹಿಕೆಯಿಂದ ಕೊಂದರೆ ಮತ್ತು ಕೊಲ್ಲಲ್ಪಟ್ಟವನ ಸಂಬಂಧಿಕರಿಗೆ ಪರಿಹಾರ ಕೊಡಲು ಶಕ್ತಿಯಿಲ್ಲದವನಾಗಿದ್ದರೆ ಅಥವಾ ತನ್ನ ಪತ್ನಿಯೊಂದಿಗೆ "ನೀನು ನನ್ನ ತಾಯಿ ಅಥವಾ ಸಹೋದರಿಯ ಹಾಗೆ" ಎಂದು ಹೇಳಿದರೆ (ಇದನ್ನು ಝಿಹಾರ್ ಎಂದು ಹೇಳುತ್ತಾರೆ). ಅವನು ಅದಕ್ಕೆ ಪರಿಹಾರವಾಗಿ ಕಡ್ಡಾಯವಾಗಿ ಒಬ್ಬ ಗುಲಾಮನನ್ನು ವಿಮೋಚನೆಗೊಳಿಸಬೇಕು, ಅಥವಾ ಅರುವತ್ತು ಬಡವರಿಗೆ ಆಹಾರ ನೀಡಬೇಕು. ಹೀಗೆ ಮಾಡಲು ಅವನಿಗೆ ಶಕ್ತಿಯಿಲ್ಲವಾದರೆ ಅವನು ಎರಡು ತಿಂಗಳು ನಿರಂತರವಾಗಿ ಉಪವಾಸ ಅನುಷ್ಠಿಸಬೇಕು. ಯಾವುದಾದರೂ ಒಂದು ದಿನದ ಉಪವಾಸ ಮಧ್ಯದಲ್ಲಿ ಬಿಟ್ಟರೆ ಪನಃ ಅರುವತ್ತು ದಿವಸಗಳ ಉಪವಾಸ ಮಾಡಬೇಕು.

ಯಾರಾದರೂ ಹಜ್ಜ್ ಅಥವಾ ಉಮ್ರ ಮಾಡಿದ ನಂತರ ಮೃಗವನ್ನು ಬಲಿದಾನವಾಗಿ ಅರ್ಪಿಸಲು ಅಸಮರ್ಥನಾದರೆ ಅಂತಹ ವ್ಯಕ್ತಿ ಹತ್ತು ದಿವಸ ಉಪವಾಸ ಮಾಡಬೇಕು – ಮೂರು ದಿನ ಪವಿತ್ರ ಮಕ್ಕ ನಗರದಲ್ಲಿ ಮತ್ತು ಏಳು ದಿನ ಮನೆಗೆ ತಲುಪಿದ ನಂತರ.

ಯಾರಾದರೂ ಇಹ್‌ರಾಮ್ (ಹಜ್ಜ್ ಮಾಡುವವರು ಧರಿಸುವ ಪೋಷಾಕು) ಧರಿಸಿದ ನಂತರ ಯಾವುದಾದರೂ ತೊಂದರೆಯ ಕಾರಣದಿಂದ ಇಹ್‌ರಾಮ್ ಧರಿಸಿರುವ ಕಾಲದಲ್ಲಿಯೇ ತಲೆಯನ್ನು ಬೋಳಿಸಬೇಕಾಗಿ ಬಂದರೆ ಅದು ನಿಷಿದ್ಧವಾದ ಕೆಲಸವಾದುದರಿಂದ ಅದಕ್ಕೆ ಪರಿಹಾರವಾಗಿ ಮೂರು ದಿನ ಉಪವಾಸ ಅನುಷ್ಠಿಸಬೇಕು.

## ತರಾವೀಹ್ ನಮಾಝ್

ರಮಝಾನ್ ತಿಂಗಳಲ್ಲಿ ಖಿಯಾಮುಲ್ಲೈಲ್ ಎಂದರೆ ರಾತ್ರಿ ಹೊತ್ತು ನಿದ್ರೆಯಿಂದೆಚ್ಚೆತ್ತು ಪ್ರಾರ್ಥಿಸುವುದು ಬಹಳ ಮುಖ್ಯ ಸಂಗತಿಯಾಗಿದೆ. ಇದಕ್ಕೆ ಸಂಬಂಧಿಸಿಯೇ ರಮಝಾನ್ ತಿಂಗಳಲ್ಲಿ ತರಾವೀಹ್ ನಮಾಝ್ ಅನುಷ್ಠಿಸಲಾಗುತ್ತಿದೆ. ತರಾವೀಹ್ ನಮಾಝ್ ಯಥಾರ್ಥವಾಗಿ ತಹಜ್ಜುದ್ ನಮಾಝ್ ಆಗಿದೆ. ಅದನ್ನು ರಾತ್ರಿಯ ಅಂತಿಮ ಯಾಮದ ಬದಲಾಗಿ ರಮಝಾನ್ ತಿಂಗಳಲ್ಲಿ ಇಶಾ ನಮಾಝ್ ನಂತರ ಅನುಷ್ಠಿಸಲಾಗುತ್ತದೆ. ಈ ನಮಾಝ್ ಮಾಡುವಾಗ ಪ್ರತಿ ಎರಡು ರಕಅತ್ ನಮಾಝ್ ಮಾಡಿದ ನಂತರ ಸ್ವಲ್ಪ ಕಾಲ ವಿಶ್ರಾಂತಿ ಪಡೆಯುವ ಕಾರಣದಿಂದ ಈ ನಮಾಝನ್ನು ತರಾವೀಹ್ ಕರೆಯುತ್ತಾರೆ. ತರಾವೀಹ್ ನಮಾಝ್‌ಗೆ ಎಂಟು ರಕ್‌ಅತ್‌ಗಳಿವೆ. ಎರಡೆರಡು ರಕ್‌ಅತ್‌ಗಳ ಹಾಗೆ ಅನುಷ್ಠಿಸಲಾಗುತ್ತದೆ. ಸಾಮೂಹಿಕವಾಗಿ ಎಂದರೆ ಜಮಾಅತ್‌ನೊಂದಿಗೆ ಈ ನಮಾಝ್ ಅನುಷ್ಠಿಸುವುದು ಉತ್ತಮವಾಗಿದೆ. ತರಾವೀಹ್ ನಮಾಝ್ ನಂತರ ವಿತ್ರ್ ನಮಾಝ್ ಸಹ ಸಾಮೂಹಿಕವಾಗಿ ಅನುಷ್ಠಿಸಲಾಗುತ್ತದೆ. ರಮಝಾನ್ ತಿಂಗಳಲ್ಲಿ ಮಾತ್ರ ವಿತ್ರ್ ನಮಾಝ್ ಸಾಮೂಹಿಕವಾಗಿ ಅನುಷ್ಠಿಸಲಾಗುತ್ತದೆ. ವಿತ್ರ್ ನಮಾಝ್ ಮೂರು ರಕ್‌ಅತ್‌ಗಳಲ್ಲಿ ಅನುಷ್ಠಿಸಲಾಗುತ್ತದೆ. ತರಾವೀಹ್ ನಮಾಝ್ ಇಶಾ ನಮಾಝ್ ನಂತರ ಅನುಷ್ಠಿಸುವ ಹಾಗೆ ರಾತ್ರಿಯ ಅಂತಿಮ ಭಾಗದಲ್ಲಿಯೂ ಅನುಷ್ಠಿಸಬಹುದಾಗಿದೆ. ತರಾವೀಹ್ ನಮಾಝ್ ರಮಝಾನ್ ತಿಂಗಳಲ್ಲಿ ಮಾತ್ರ ಅನುಷ್ಠಿಸಲಾಗುತ್ತದೆ. ಆ ನಮಾಝ್‌ನಲ್ಲಿ ಪವಿತ್ರ ಖುರ್‌ಆನಿನ ವಚನಗಳನ್ನು ಹೆಚ್ಚು ಹೆಚ್ಚಾಗಿ ಪಾರಾಯಣ ಮಾಡಲಾಗುತ್ತದೆ.

## ಉಪವಾಸದ ಕುರಿತು ಕೆಲವು ವಿವರಣೆಗಳು

1. ರಮಝಾನ್ ತಿಂಗಳ ಚಂದ್ರ ದರ್ಶನದ ಕಾಲದಲ್ಲಿ ದಿಗಂತವು ಮೋಡದಿಂದ ವಿರಹಿತವಾಗಿ ಶುಭ್ರವಾಗಿದ್ದರೆ ಚಂದ್ರ ದರ್ಶನದ ಕುರಿತು ಕನಿಷ್ಠ ಇಬ್ಬರು ಸಾಕ್ಷಿ ಹೇಳಬೇಕು. ದಿಗಂತವು ಮೋಡ ಮುಸುಕಿದ್ದು ಚಂದ್ರ ದರ್ಶನವಾಗದಿದ್ದರೆ ಶಅಬಾನ್ ತಿಂಗಳ ಮೂವತ್ತು ದಿನಗಳನ್ನು ಪೂರ್ಣ ಮಾಡಬೇಕು. ಇದೇ ರೀತಿ ಈದ್ ದಿನದ ಚಂದ್ರದರ್ಶನ ಮಾಡುವಾಗ ದಿಗಂತವು ಮೋಡಗಳಿಂದ ವಿರಹಿತವಾಗಿ ಶುಭ್ರವಾಗಿದ್ದರೆ ಚಂದ್ರದರ್ಶನದ ಕುರಿತು ಕನಿಷ್ಠ ಇಬ್ಬರು ಸಾಕ್ಷಿ ಹೇಳಬೇಕು. ಮೋಡ ಮುಸುಕಿದ್ದು ಚಂದ್ರದರ್ಶನವಾಗದಿದ್ದರೆ ರಮಝಾನ್ ಉಪವಾಸ ಮೂವತ್ತು ದಿನ ಪೂರ್ಣಗೊಳಿಸಬೇಕು.

2. ಮುಟ್ಟು ಸ್ರಾವವಾಗುತ್ತಿರುವ ಸ್ತ್ರೀ ಉಪವಾಸ ಮಾಡಬಾರದು. ರಮಝಾನ್ ತಿಂಗಳ ನಂತರ, ಬಿಟ್ಟು ಹೋದ ಉಪವಾಸ ಅನುಷ್ಠಿಸಬೇಕು.

3. ರಮಝಾನ್ ತಿಂಗಳಲ್ಲಿ ಯಾರಿಗಾದರೂ ಉಪವಾಸ ಮಾಡಲು ಸಾಧ್ಯವಾಗದಿದ್ದರೆ ಮುಂದಿನ ರಮಝಾನ್ ತಿಂಗಳು ಬರುವುದರೊಳಗೆ, ಬಿಟ್ಟು ಹೋದ ಉಪವಾಸವನ್ನು ಸಂದರ್ಭಕ್ಕೆ ಅನುಸಾರವಾಗಿ ಒಟ್ಟಿಗೆ ಅಥವಾ ಒಂದೊಂದಾಗಿ ಅನುಷ್ಠಿಸಬಹುದಾಗಿದೆ.

4. ಗರ್ಭಿಣಿ ಮತ್ತು ಹಾಲೂಡಿಸುತ್ತಿರುವ ಮಹಿಳೆಗೆ ರಮಝಾನ್ ತಿಂಗಳಲ್ಲಿ ಉಪವಾಸ ಮಾಡಲು ಸಾಧ್ಯವಾಗದಿದ್ದರೆ ಬೇರೆ ಸಂದರ್ಭಗಳಲ್ಲಿ ಉಪವಾಸ ಮಾಡಬಹುದು. ಬೇರೆ ಸಮಯದಲ್ಲಿ ಕೂಡ ಉಪವಾಸ ಮಾಡಲು ಸಾಧ್ಯವಾಗದಿದ್ದರೆ ಅದಕ್ಕೆ ಫಿದ್‌ಯ (ಪರಿಹಾರ) ಕೊಡಬೇಕು. ಒಂದು ಉಪವಾಸಕ್ಕೆ ಬದಲಾಗಿ ಒಬ್ಬ ಬಡವನಿಗೆ ಆಹಾರ ನೀಡಬೇಕು. ಇದೇ ರೀತಿ ಸ್ಥಿರವಾಗಿ ರೋಗಿಯಾಗಿರುವ ವ್ಯಕ್ತಿ ಮತ್ತು ಉಪವಾಸ ಮಾಡಲು ಅಸಮರ್ಥನಾದ ವೃದ್ಧನಾದ ವ್ಯಕ್ತಿ ಒಂದು ದಿನದ ಉಪವಾಸಕ್ಕೆ ಒಬ್ಬ ಬಡವನಿಗೆ ಆಹಾರ ನೀಡುವ ಮೂಲಕ ತನ್ನ ಉಪವಾಸಗಳಿಗೆ ಪರಿಹಾರ ಕೊಡಬಹುದು.

5. ಪ್ರಯಾಣದ ಅಂದಾಜು ಸ್ವತಃ ಹೃದಯದೊಂದಿಗೆ ಅನ್ವೇಷಿಸಿ ನಿರ್ಧರಿಸಬೇಕು. ಯಾವುದು ಪ್ರಯಾಣವೆಂದು ಹೃದಯಕ್ಕೆ ತೋಚುತ್ತದೆಯೋ ಅದೇ ಪ್ರಯಾಣ (ಸಫರ್) ಆಗಿದೆ. ದೂರ ಕಡಿಮೆಯಾಗಿದ್ದರೂ ಸಹ ಹೀಗೆಯೇ ಮಾಡಬೇಕು. ರೈಲು ಬಂಡಿ, ಮೋಟಾರು ವಾಹನ ಮತ್ತು ವಿಮಾನ ಮೊದಲಾದವುಗಳಲ್ಲಿ ಮಾಡುವ ಪ್ರಯಾಣ ಸಹ ಪ್ರಯಾಣವೇ ಆಗಿದೆ.

6. ಸೂರ್ಯನು ಅಸ್ತಮಿಸಿರುವನೆಂದು ತಪ್ಪಾಗಿ ಗ್ರಹಿಸಿ ಯಾರಾದರೂ ಉಪವಾಸ ಮುಕ್ತಾಯಗೊಳಿಸಿದರೆ ಮತ್ತು ಯಥಾರ್ಥವಾಗಿ ಸೂರ್ಯನು ಆ ಸಮಯದಲ್ಲಿ ಅಸ್ತಮಿಸಿಲ್ಲವಾದರೆ ಅವನು ಇನ್ನೊಂದು

ದಿನ ಅದಕ್ಕೆ ಬದಲಿಯಾಗಿ ಉಪವಾಸ ಮಾಡಬೇಕು. ಅವನು ಉಪವಾಸ ಮಧ್ಯದಲ್ಲಿ ಬಿಟ್ಟುದಕ್ಕೆ ಪರಿಹಾರ ನೀಡಬೇಕಾಗಿಲ್ಲ.

7. ನಸುಕಿನ ಹೊತ್ತು ಉಪವಾಸ ಪ್ರಾರಂಭಿಸುವ ಮೊದಲು ಮಾಡುವ ಊಟ ಎಂದರೆ ಸಹ್‌ರಿಯನ್ನು ಅದರ ಸಮಯ ದಾಟಿಹೋದ ನಂತರ ಇನ್ನೂ ಸಮಯವಿದೆ ಎಂಬ ತಪ್ಪುಗ್ರಹಿಕೆಯಿಂದ ಉಂಡರೆ ಅವನು ಆ ದಿನದ ಉಪವಾಸಕ್ಕೆ ಪ್ರತಿಯಾಗಿ ಬೇರೊಂದು ದಿನ ಉಪವಾಸ ಮಾಡಬೇಕು. ಅವನು ಅದಕ್ಕೆ ಪರಿಹಾರ ನೀಡಬೇಕಾಗಿಲ್ಲ.

8. ಯಾರು ಯಾವಾಗಲೂ ಪ್ರಯಾಣ ಮಾಡುತ್ತಾ ಇರುವ ಕೆಲಸ ಮಾಡುತ್ತಾನೋ ಅವನು ಪ್ರಯಾಣಿಕ (ಮುಸಾಫಿರ್)ನಿಗೆ ಲಭಿಸಿರುವ ಸವಲತ್ತಿಗೆ ಅರ್ಹನಾಗುವುದಿಲ್ಲ. ಅವನು ರಮಝಾನ್ ತಿಂಗಳಲ್ಲಿ ಪ್ರಯಾಣ ಕಾಲದಲ್ಲಿಯೇ ಉಪವಾಸ ಮಾಡಬೇಕು.

9. ಯಾರಾದರೂ ಪ್ರಯಾಣಿಕ ಅಥವಾ ರೋಗಿ ಉಪವಾಸ ಮಾಡಿದರೆ ಅವನು ಉಪವಾಸ ಮಾಡಿದವನ ಹಾಗೆ ಗಣಿಸಲ್ಪಡಲಾರನು. ಪವಿತ್ರ ಖುರ್‌ಆನ್‌ನಲ್ಲಿ "ಇದ್ದತುನ್ ಮಿನ್ ಅಯ್ಯಾಮಿನ್ ಉಖ್‌ರ" (ಬೇರೆ ದಿನಗಳಲ್ಲಿ ಎಣಿಕೆಯನ್ನು ಪೂರ್ಣಗೊಳಿಸಬೇಕು) ಎಂದು ಆಜ್ಞೆ ಲಭಿಸಿರುವ ಪ್ರಕಾರ ಬೇರೆ ದಿನಗಳಲ್ಲಿ ಉಪವಾಸ ಮಾಡಬೇಕು.

## ಇಅ್‌ತಿಕಾಫ್ (ಮಸ್‌ಜಿದ್‌ನಲ್ಲಿ ವಾಸಿಸಿ ಧ್ಯಾನಾರಾಧನೆ ಮಾಡುವುದು.)

ಪವಿತ್ರ ರಮಝಾನ್ ತಿಂಗಳ ಕೊನೆಯ ಭಾಗದ ಹತ್ತು ದಿನಗಳಲ್ಲಿ ಉಪವಾಸ ಅನುಷ್ಠಿಸಿ ಮಸ್‌ಜಿದ್‌ನಲ್ಲಿ ಕುಳಿತು ಅಲ್ಲಾಹನ ಧ್ಯಾನ ಮಾಡುವುದು ಮತ್ತು ನಮಾಝ್ ಮಾಡುವುದು ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆ (ಸುನ್ನತ್) ಆಗಿತ್ತು. ಈ ಸಮಯದಲ್ಲಿ ಅಲ್ಲಾಹನಿಂದ ಕ್ಷಮೆ ಯಾಚನೆ (ಇಸ್ತಿಗ್‌ಫಾರ್) ಮತ್ತು ಅಲ್ಲಾಹನ ಧ್ಯಾನ ಹೆಚ್ಚು ಹೆಚ್ಚಾಗಿ ಮಾಡಲಾಗುತ್ತದೆ. ಈ ಕಾಲಾವಧಿಯಲ್ಲಿ ಹಗಲು ರಾತ್ರಿ ಇಸ್ತಿಗ್‌ಫಾರ್ (ಕ್ಷಮೆಯಾಚನೆ), ಧಿಕ್ರೆ ಇಲಾಹಿ (ಅಲ್ಲಾಹನ ಧ್ಯಾನ), ಪವಿತ್ರ ಖುರ್‌ಆನಿನ ತಿಲಾವತ್ (ಪಾರಾಯಣ) ಮತ್ತು ಪ್ರಾರ್ಥನೆಯಲ್ಲಿ ಮುಅ್‌ತಕಿಫ್ (ಇಅ್‌ತಿಕಾಫ್ ಅನುಷ್ಠಿಸುವವನು) ಮಗ್ನನಾಗಿರಬೇಕು. ಆ ಸಮಯದಲ್ಲಿ ಒಳ್ಳೆಯ ಮತ್ತು ಅತ್ಯಾವಶ್ಯಕ ಮಾತುಗಳನ್ನು ಮಾತ್ರ ಹೇಳಬೇಕು. ಮುಅ್‌ತಕಿಫ್ ಮಲಮೂತ್ರ ವಿಸರ್ಜನೆಗಳಿಗಾಗಿ ಮತ್ತು ಅವನು ಕುಳಿತಿರುವ ಮಸ್‌ಜಿದ್‌ನಲ್ಲಿ ಜುಮುಅ ನಮಾಝ್ ನಡೆಯುತ್ತಾ ಇಲ್ಲವಾದರೆ ಜುಮುಅ ನಮಾಝ್‌ಗಾಗಿ ಮಾತ್ರ ಹೊರಗೆ ಹೋಗಬಹುದು. ಆ ಆವಶ್ಯಕತೆಗಳಿಗಾಗಿ ಹೊರಗೆ ಹೋಗುವಾಗ ಯಾರಾದರೂ ರೋಗಿಯನ್ನು ಕಂಡರೆ ಅವನ ರೋಗದ ಬಗ್ಗೆ ನಡೆಯುತ್ತಾ ಇರುವಾಗಲೇ ಅನ್ವೇಷಿಸಬಹುದಾಗಿದೆ.

ಇಅ್‌ತಿಕಾಫ್ ಮಾಡುವವನು ಪರದೆಯನ್ನು ಕಟ್ಟಿ ಅದರೊಳಗೆ ಕುಳಿತುಕೊಳ್ಳುವುದು ಉತ್ತಮವಾಗಿದೆ. ರಮಝಾನ್ ತಿಂಗಳ 20ನೇ ದಿನಾಂಕ ಸುಬ್‌ಹ್ (ಫಜರ್) ನಮಾಝ್ ನಂತರ ಮಸ್‌ಜಿದ್‌ನಲ್ಲಿ ನಿಗದಿತ ಸ್ಥಳದಲ್ಲಿ ಇಅ್‌ತಿಕಾಫ್‌ಗಾಗಿ ಕುಳಿತುಕೊಳ್ಳಬೇಕು. ಐದು ಹೊತ್ತಿನ ನಮಾಝ್ ಸಾಮೂಹಿಕವಾಗಿ ಜಾರಿಯಲ್ಲಿರುವ ಮಸ್‌ಜಿದ್‌ನಲ್ಲಿ ಇಅ್‌ತಿಕಾಫ್‌ಗಾಗಿ ಕುಳಿತುಕೊಳ್ಳಬೇಕು. ಜುಮುಅ ನಮಾಝ್ ಸಹ ಆ ಮಸ್‌ಜಿದ್‌ನಲ್ಲಿ ಅನುಷ್ಠಿಸಲ್ಪಡುತ್ತಿದ್ದರೆ ಅದು ಉತ್ತಮವಾಗಿದೆ. ಚಂದ್ರದರ್ಶನವಾಗಿ ಈದ್ ಘೋಷಿಸಲ್ಪಟ್ಟ ನಂತರ ಇಅ್‌ತಿಕಾಫ್ ಕುಳಿತಲ್ಲಿಂದ ಹೊರಗೆ ಹೋಗಬೇಕು.

ಇಅ್‌ತಿಕಾಫ್ ಕುಳಿತಿರುವ ಕಾಲದಲ್ಲಿ ಉದ್ದೇಶಪೂರ್ವಕವಾಗಿ ಅಥವಾ ಮರವೆಯಿಂದ ಹಗಲು ಅಥವಾ ರಾತ್ರಿ ಪತ್ನಿಯೊಂದಿಗೆ ಲೈಂಗಿಕ ಸಂಪರ್ಕ ಮಾಡಿದರೆ ಇಅ್‌ತಿಕಾಫ್‌ಗೆ ಭಂಗವುಂಟಾಗುತ್ತದೆ. ಸರಿಯಾದ ಕಾರಣವಿಲ್ಲದೆ ಮಸ್‌ಜಿದ್‌ನಿಂದ ಹೊರಗೆ ಹೋಗುವುದರಿಂದಲೂ ಇಅ್‌ತಿಕಾಫ್ ಭಂಗವಾಗುತ್ತದೆ.

## ಸದಕತುಲ್ ಫಿತ್‌ರ್

ಇಸ್ಲಾಮ್ ಧರ್ಮವು ಬಡವರಿಗೆ ಮತ್ತು ನಿರ್ಗತಿಕರಿಗಾಗಿ ದಾನಧರ್ಮಗಳನ್ನು ನಿಶ್ಚಯಿಸಿದೆ. ಈ ದಾನ ಧರ್ಮಗಳಲ್ಲಿ ಒಂದು 'ಸದಕತುಲ್ ಫಿತ್‌ರ್' ಆಗಿದೆ. ಪ್ರತಿಯೊಬ್ಬ ಮುಸ್ಲಿಮ್ ಸ್ತ್ರೀ ಮತ್ತು ಪುರುಷ, ಬಡವ, ಐಶ್ವರ್ಯವಂತ, ಚಿಕ್ಕವ, ದೊಡ್ಡವ, ಸ್ವತಂತ್ರ ಮತ್ತು ಗುಲಾಮ ಈ ದಾನವನ್ನು ಕಡ್ಡಾಯವಾಗಿ ನೀಡಬೇಕು. ಇನ್ನೊಬ್ಬನ ರಕ್ಷಕ ಅಥವಾ ಪೋಷಕ ಅದನ್ನು ತನ್ನ ಅಧೀನದಲ್ಲಿರುವವರ ಪರವಾಗಿ ಕೊಡಬೇಕು. ಸದಕತುಲ್ ಫಿತ್‌ರ್ ಈದುಲ್ ಫಿತ್‌ರ್‌ಗೆ (ರಮಝಾನ್ ತಿಂಗಳು ಕೊನೆಗೊಂಡಾಗ ಬರುವ ಹಬ್ಬ) ಮೊದಲು ಕೊಡಬೇಕಾದುದು ಅವಶ್ಯವಾಗಿದೆ. ಎದೆ ಹಾಲು ಕುಡಿಯುವ ಶಿಶುವಿನ ಪರವಾಗಿಯೂ ಸದಕತುಲ್ ಫಿತ್‌ರ್ ಕೊಡಬೇಕು. ಶಿಶುವು ರಮಝಾನ್ ತಿಂಗಳ ಅಂತಿಮ ದಿನದಂದು ಜನಿಸಿದ್ದರೂ ಈ ದಾನ ಅದರ ಪರವಾಗಿ ಕೊಡಬೇಕು.

ಸದಕತುಲ್ ಫಿತ್‌ರ್ ಒಂದು ಸಾಅ್ ಧಾನ್ಯ ಆಗಿದೆ. ಈಗಿನ ಅಳತೆ ಪ್ರಕಾರ ಅಂದಾಜು ಎರಡುವರೆ ಕಿಲೋಗ್ರಾಂ ಆಗುತ್ತದೆ. ಆರ್ಥಿಕವಾಗಿ ಅನುಕೂಲತೆ ಇಲ್ಲದವರು ಇದರ ಅರ್ಧಾಂಶ ಸಹ ದಾನವಾಗಿ ಕೊಡಬಹುದು. ಆಯಾ ಪ್ರದೇಶದ ಆಹಾರ ಪ್ರಕಾರ ಗೋದಿ ಅಥವಾ ಅಕ್ಕಿ ದಾನವಾಗಿ ಕೊಡಬಹುದು.

♦

---

17ನೇ ಪುಟದಿಂದ

ಕೇಳಿದರು. ಕೊನೆಗೆ ಅವರು, "ನಿಮ್ಮ ವೈಯಕ್ತಿಕ ವಿಷಯದ ಕುರಿತು ಒಂದು ಪ್ರಶ್ನೆ – ನೀವು ಎಷ್ಟು ಕಲಿತಿದ್ದೀರಿ?" ಎಂದು ಕೇಳಿದರು. ಪೋಸ್ಟ್ ಡಾಕ್ಟರೇಟ್ ರಿಸರ್ಚ್ ಮಾಡುತ್ತಿದ್ದೇನೆಂದು ನಾನು ಹೇಳಿದೆ. ಇದು ಕೇಳಿದಾಗ ಅವರಿಬ್ಬರೂ ಚಕಿತರಾಗಿ ಹೇಳಿದರು: "ಮುಸ್ಲಿಮರು ತಮ್ಮ ಹೆಣ್ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವುದಿಲ್ಲವೆಂದು ನಾವು ತಿಳಿದುಕೊಂಡಿದ್ದೆವು. ಆದರೆ ನಮ್ಮ ಗಂಡು ಮಕ್ಕಳು ಕೂಡ ತಲುಪದ ಸ್ಥಾನಕ್ಕೆ ನೀವು ತಲುಪಿದ್ದೀರಿ." ನಾನು ತುಂಬಾ ಹೊತ್ತು ಅಲ್ಲಾಹನ ಸ್ತುತಿಗಾನ ಮಾಡುತ್ತಾ ಇದ್ದೆ. ("ಮಿಸ್ಬಾಹ್", ರಬ್ವ : ಡಿಸೆಂಬರ್ 1983)

♦

**LOVE FOR ALL**
**HATRED FOR NONE**



# ಮೂರನೇ ಜಾಗತಿಕ ಯುದ್ಧಕ್ಕೆ ಸಂಬಂಧಿಸಿ ಅಹ್ಮದಿಯಾ ಜಮಾಅತಿನ ಸರ್ವೋಚ್ಚ ನೇತಾರರ ಮುನ್ನೆಚ್ಚರಿಕೆ

ಇಂದು ಲೋಕ ಬಹಳ ಸಂಕಷ್ಟಮಯ ಸ್ಥಿತಿಯಲ್ಲಿದೆ. ಜಾಗತಿಕ ಆರ್ಥಿಕ ಬಿಕ್ಕಟ್ಟು ಹೊಸ ಮತ್ತು ತೀವ್ರ ಅಪಾಯಕರ ಪರಿಸ್ಥಿತಿಗಳನ್ನು ಪ್ರತಿ ವಾರ ಪ್ರಕಟಿಸುತ್ತಿದೆ. ಈಗಿನ ಪರಿಸ್ಥಿತಿ ದ್ವಿತೀಯ ಲೋಕ ಮಹಾಯುದ್ಧಕ್ಕೆ ತುಸು ಮುಂಚಿನ ದಿನಗಳಿಗೆ ಸಮಾನವಾಗಿದೆ ಎಂದು ಹೇಳಲಾಗುತ್ತಿದೆ. ಜಾಗತಿಕ ಶಕ್ತಿಗಳ ದೌರ್ಜನ್ಯ, ಶಾಂತಿ ಸ್ಥಾಪನೆಯ ನೆಪದಲ್ಲಿ ಒಳಜಗಳಗಳಲ್ಲಿ ದೊಡ್ಡ ಶಕ್ತಿಗಳ ಅನಗತ್ಯ ಮಧ್ಯೆ ಪ್ರವೇಶ, ಐ.ಎಸ್.ನಂತಹ ನಾಮಧಾರಿ ಸಂಘಟನೆಗಳ ಪಿತೂರಿಗಳು ಮುಂತಾದ ಎಲ್ಲ ಸಂಗತಿಗಳು ಲೋಕವು ಅಸಾಧಾರಣವಾದ ವೇಗದೊಂದಿಗೆ ಒಂದು ಭಯಾನಕವಾದ ತೃತೀಯ ಮಹಾಯುದ್ಧದ ಕಡೆಗೆ ಸಾಗುತ್ತಿದೆ ಎಂದು ಸ್ಪಷ್ಟಪಡಿಸುತ್ತಿವೆ.

ಜಾಗತಿಕ ಅಹ್ಮದಿಯಾ ಜಮಾಅತಿನ ಸರ್ವೋಚ್ಚ ನೇತಾರರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬರು ಕಳೆದ ಹಲವು ವರ್ಷಗಳಿಂದ ಲೋಕಕ್ಕೆ ಬಂದಿರುವ ಅಪಾಯಗಳ ಬಗ್ಗೆ ಎಲ್ಲರನ್ನು ಎಚ್ಚರಿಸುತ್ತಿದ್ದಾರೆ. ಇದು ಅಶಾಂತಿ ಹರಡುವ ಉದ್ದೇಶದಿಂದ ಅಲ್ಲ, ಲೋಕವು ಈ ಸ್ಥಿತಿಗೆ ಹೇಗೆ ತಲುಪಿತು ಮತ್ತು ಈಗ ಹೇಗೆ ಈ ವಿನಾಶದಿಂದ ಪಾರಾಗಬಹುದು ಎಂದು ಹೇಳಿಕೊಡಲಿಕ್ಕಾಗಿದೆ.

ಲೋಕದಲ್ಲಿ ಶಾಂತಿ ಸ್ಥಾಪನೆಗಿರುವ ಏಕಮಾತ್ರ ಮಾರ್ಗ ನ್ಯಾಯಪಾಲನೆ ಅವಲಂಬಿಸಿ ವಿನಯ ಮತ್ತು ಅನುಸರಣೆಯಿಂದ ದೇವನಿಗೆ ಶರಣಾಗುವುದಾಗಿದೆ ಎಂದು ಜಾಗತಿಕ ಅಹ್ಮದಿಯಾ ಜಮಾಅತಿನ ಸರ್ವೋನ್ನತ ನೇತಾರ ಬಹಳ ಸ್ಪಷ್ಟವಾಗಿ ಘೋಷಿಸಿದ್ದಾರೆ. ಅದೇ ರೀತಿಯಲ್ಲಿ ಮನುಕುಲದೊಂದಿಗೆ ಸಹಾನುಭೂತಿ ತೋರಿಸಿ, ದುರ್ಬಲರಿಗೆ ನೆರವು ನೀಡಿ, ಅವರನ್ನು ಗೌರವಿಸಿ ಅವರಿಗೆ ಸಾಂತ್ವನ ನೀಡಿ, ಸತ್ಯ ಮತ್ತು ದೇವಭಕ್ತಿಯ ಮಾರ್ಗದಲ್ಲಿ ನಡೆಯುತ್ತಾ ನಿಷ್ಠೆಯಿಂದ ತಮ್ಮ ಸೃಷ್ಟಿಕರ್ತನ ಕಡೆಗೆ ಮರಳಬೇಕಾಗಿದೆ.

## ರಾಜಕೀಯ ಮತ್ತು ಆರ್ಥಿಕ ಸಮಸ್ಯೆಗಳು ಯುದ್ಧಕ್ಕೆ ಕಾರಣವಾಗುತ್ತಿವೆ

ಅಮೇರಿಕದ ಅಧ್ಯಕ್ಷ ಒಬಾಮರಿಗೆ ಜಾಗತಿಕ ಅಹ್ಮದಿಯಾ ಜಮಾಅತಿನ ನೇತಾರ ಪತ್ರ ಮೂಲಕ ಹೀಗೆ ಗಮನ ಹರಿಸಿದರು:

"ನಮಗೆಲ್ಲರಿಗೂ ತಿಳಿದಿರುವಂತೆ ಎರಡನೇ ಜಾಗತಿಕ ಮಹಾ ಯುದ್ಧವು ಪ್ರಾರಂಭವಾಗಲು ಮುಖ್ಯ ಕಾರಣ ಲೀಗ್ ಆಫ್ ನೇಶನ್ಸ್ ತನ್ನ ಸ್ಥಾಪನೆಯ ಉದ್ದೇಶವನ್ನು ಸಾಧಿಸಲು ವಿಫಲವಾದುದು ಮತ್ತು 1932ರ ಆರ್ಥಿಕ ಮುಗ್ಗಟ್ಟು ಆಗಿತ್ತು. ಈಗಿನ ಆರ್ಥಿಕ ಬಿಕ್ಕಟ್ಟು 1932ರ ಆರ್ಥಿಕ ಮುಗ್ಗಟ್ಟಿಗೆ ಹಲವಾರು ವಿಷಯಗಳಲ್ಲಿ ಸಮಾನತೆ ಹೊಂದಿವೆ ಎಂದು ಪ್ರಸಿದ್ಧ ಅರ್ಥಶಾಸ್ತ್ರಜ್ಞರು ಈಗ ಹೇಳುತ್ತಿದ್ದಾರೆ. ರಾಜಕೀಯ ಮತ್ತು ಆರ್ಥಿಕ ಸಮಸ್ಯೆಗಳು ಚಿಕ್ಕ ದೇಶಗಳನ್ನು ಪುನಃ ಯುದ್ಧಕ್ಕೆ ತಳ್ಳಿವೆ. ಕೆಲವು ದೇಶಗಳು ಆಂತರಿಕ ಅಶಾಂತಿ ಮತ್ತು ಅಸಮಾಧಾನಕ್ಕೆ ಬಲಿಯಾಗಿದೆ. ಈ ಎಲ್ಲ ಸಂಗತಿಗಳು ಜಾಗತಿಕ ಯುದ್ಧಕ್ಕೆ ಕಾರಣವಾಗುವುವು. ಚಿಕ್ಕ ದೇಶಗಳ ಸಂಘರ್ಷಗಳನ್ನು ರಾಜಕೀಯವಾಗಿ ಮತ್ತು ರಾಜತಂತ್ರಗಳ ಮೂಲಕ ಪರಿಹರಿಸದಿದ್ದರೆ ಲೋಕದಲ್ಲಿ ದೇಶಗಳು ಒಗ್ಗೂಡಿದ ಹೊಸ ಗುಂಪುಗಳು ಸ್ಥಾಪಿಸಲ್ಪಡುವುವು. ಇದು ಮೂರನೆಯ ಜಾಗತಿಕ ಮಹಾಯುದ್ಧವು ತೊಡಗಲು ಮುನ್ನುಡಿಯಾಗುವುದು. ಇಂತಹ

ಸ್ಥಿತಿಯಲ್ಲಿ ಲೋಕವನ್ನು ಆರ್ಥಿಕ ಅಭಿವೃದ್ಧಿಗೊಯ್ಯುವ ಬಗ್ಗೆ ನಮ್ಮ ಗಮನವನ್ನು ಕೇಂದ್ರೀಕರಿಸುವುದಕ್ಕೆ ಬದಲಾಗಿ ಲೋಕವನ್ನು ನಾಶದಿಂದ ರಕ್ಷಿಸಲು ಪ್ರಯತ್ನಿಸುವುದು ಅನಿವಾರ್ಯವಾಗಿದೆ. ಮನುಕುಲ ತನ್ನ ಸೃಷ್ಟಿಕರ್ತನಾದ ಏಕದೇವನನ್ನು ಗುರುತಿಸುವುದು ಅತ್ಯಾವಶ್ಯಕವಾಗಿದೆ. ಹೀಗೆ ಮಾಡಿದರೆ ಮಾತ್ರ ಮಾನವತೆಯ ರಕ್ಷೆ ಖಾತರಿಗೊಳಿಸಲ್ಪಡುವುದು. ಇಲ್ಲದಿದ್ದರೆ ಲೋಕವು ವೇಗವಾಗಿ ಸ್ವಯಂನಾಶದ ಕಡೆಗೆ ಸಾಗುತ್ತಾ ಹೋಗುವುದು."

## ಇನ್ನೊಂದು ಜಾಗತಿಕ ಮಹಾ ಯುದ್ಧಕ್ಕೆ ಅಸ್ತಿಭಾರ ಹಾಕಲಾಗಿದೆ

ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್ ಅಧ್ಯಕ್ಷರ ಗಮನಹರಿಸುತ್ತಾ ಜಾಗತಿಕ ಅಹ್ಮದಿಯಾ ಜಮಾಅತಿನ ಇಮಾಮ್ ಹೇಳಿದರು:

"ಈಗ ಲೋಕದಲ್ಲಿ ಬಹಳ ಆತಂಕ ಮತ್ತು ಅಸಮಾಧಾನ ವ್ಯಾಪಿಸಿದೆ. ಲೋಕದ ಕೆಲವು ಪ್ರದೇಶಗಳಲ್ಲಿ ಚಿಕ್ಕಮಟ್ಟದಲ್ಲಿ ಯುದ್ಧಗಳು ಪ್ರಾರಂಭವಾಗಿವೆ. ಬೇರೆ ಕೆಲವು ಪ್ರದೇಶಗಳಲ್ಲಿ ಪ್ರಬಲ ರಾಷ್ಟ್ರಗಳು ಶಾಂತಿ ಸ್ಥಾಪಿಸುವ ನೆವನದಲ್ಲಿ ಮಧ್ಯೆ ಪ್ರವೇಶಿಸುತ್ತಿವೆ. ಇಂದು ಲೋಕದ ಪ್ರತಿಯೊಂದು ದೇಶ ಇತರ ದೇಶಗಳಿಗೆ ನೆರವು ನೀಡಲು ಅಥವಾ ವಿರೋಧಿಸಲು ಕಾರ್ಯನಿರತವಾಗಿದೆ. ಆದರೆ ನ್ಯಾಯಪಾಲನೆಯ ಆವಶ್ಯಕತೆಗಳನ್ನು ಈಡೇರಿಸುತ್ತಾ ಇಲ್ಲ. ಲೋಕದಲ್ಲಿ ಈಗಿರುವ ಸ್ಥಿತಿಗತಿಗಳನ್ನು ನೋಡುವುದಾದರೆ, ಇನ್ನೊಂದು ಜಾಗತಿಕ ಮಹಾಯುದ್ಧಕ್ಕೆ ಅಸ್ತಿಭಾರವನ್ನು ಈಗಾಗಲೇ ಹಾಕಲಾಗಿದೆ ಎಂದು ಖೇದಪೂರ್ವಕವಾಗಿ ಹೇಳಬೇಕಾಗುವುದು."

ಜಾಗತಿಕ ಅಹ್ಮದಿಯಾ ಜಮಾಅತಿನ ನೇತಾರ ತನ್ನ ಒಂದು ಭಾಷಣದಲ್ಲಿ ಹೇಳಿದರು:

"...ಇದರ ಮೊದಲು ನಡೆದ ಎರಡು ಜಾಗತಿಕ ಮಹಾಯುದ್ಧಗಳ ಭೀಕರ ನಾಶದ ಬಗ್ಗೆ ನಮಗೆ ಚೆನ್ನಾಗಿ ತಿಳಿದಿದೆ. ಕೆಲವು ದೇಶಗಳ ವರ್ತನೆಗಳ ಕಾರಣದಿಂದ ಇನ್ನೊಂದು ಮಹಾಯುದ್ಧದ ಚಿಹ್ನೆಗಳು ದಿಗಂತದಲ್ಲಿ ಕಾಣಿಸುತ್ತಿವೆ... ಲೋಕವು ಮುಂದೆ ಸಾಗುತ್ತಿರುವ ರೀತಿಯನ್ನು ನೋಡುವಾಗ, ಅಣ್ವಸ್ತ್ರ ಬಳಸಲ್ಪಡುವ ಯುದ್ಧವು ಸಂಭವಿಸುವ ಅಪಾಯವಿದೆ. ಇಂತಹ ಭಯಾನಕ ಪರಿಣಾಮಗಳನ್ನು ತಡೆಗಟ್ಟಲು ನಾವು ನ್ಯಾಯ, ಭಾವೈಕ್ಯತೆ, ಪ್ರಾಮಾಣಿಕತೆಯನ್ನು ಅವಲಂಬಿಸಬೇಕು. ದ್ವೇಷವನ್ನು ಹರಡಿ ಲೋಕದ ಶಾಂತಿ ಕೆಡಿಸುವ ಗುಂಪುಗಳನ್ನು ತಡೆಯಲು ನಾವು ಒಗ್ಗೂಡಬೇಕು."

(ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬ್ ಮಾಡಿದ ಭಾಷಣ, 2013)

## ನಾವು ನಮ್ಮ ಮುಂದಿನ ಪೀಳಿಗೆಗಳಿಗೆ ಅಂಗವೈಕಲ್ಯದ ಕೊಡುಗೆ ನೀಡುವವರಾಗದಿರಲಿ

ಇಸ್ರಾಯೇಲ್ ಪ್ರಧಾನ ಮಂತ್ರಿ ಬೆಂಜಮಿನ್ ನೆತನ್ಯಾಹೂರಿಗೆ ಜಾಗತಿಕ ಅಹ್ಮದಿಯಾ ಜಮಾಅತಿನ ನೇತಾರ ಹೀಗೆ ಪತ್ರ ಬರೆದರು:

"ಪ್ರವಾದಿ ಮುಹಮ್ಮದ್‌ರ(ಸ) ದಾಸನಾಗಿ ದೇವನಿಂದ ನೇಮಿಸಲ್ಪಟ್ಟ ವಾಗ್ದತ್ತ ಮಸೀಹ್ ಮತ್ತು ಮಹ್‌ದಿಯ ಖಲೀಫ ಎಂಬ ನೆಲೆಯಲ್ಲಿ ನಾನು ನಿಮ್ಮನ್ನು ಸಂಬೋಧಿಸುತ್ತಿದ್ದೇನೆ.... ದೇವಸಂದೇಶದ ಬಗ್ಗೆ ನಿಮಗೆ ಮುನ್ನೆಚ್ಚರಿಕೆ ನೀಡುವುದು ನನ್ನ ಕರ್ತವ್ಯವಾಗಿದೆ. ನೀವು ದೇವನ ಕರೆಗೆ ಓಗೊಡುವವರೂ ನೇರಮಾರ್ಗವನ್ನು ಕಂಡುಕೊಳ್ಳುವುದರಲ್ಲಿ ಜಯಶಾಲಿಗಳೂ ಆಗಿರುವವರ ಗುಂಪಿಗೆ ಸೇರಿದವರು ಆಗಿರುವಿರಿ ಎಂದು ನಾನು ಪ್ರತೀಕ್ಷಿಸುತ್ತೇನೆ... ನಾನು ನಿಮ್ಮೊಂದಿಗೆ ಅಪೇಕ್ಷಿಸುವುದೇನೆಂದರೆ, ಲೋಕವನ್ನು ಜಾಗತಿಕ ಮಹಾಯುದ್ಧದ ಮುಷ್ಟಿಯ ಹಿಡಿತಕ್ಕೊಳಪಡಿಸಲು ಕೊಂಡೊಯ್ಯುವುದಕ್ಕೆ ಪ್ರತಿಯಾಗಿ ಲೋಕವನ್ನು ಈ ಜಾಗತಿಕ ಅನಾಹುತದಿಂದ ರಕ್ಷಿಸಲು ಗರಿಷ್ಠ ಪ್ರಯತ್ನ ಮಾಡಬೇಕು. ಒಳಜಗಳಗಳನ್ನು ಬಲಪ್ರಯೋಗಿಸಿ ಪರಿಹರಿಸುವುದಕ್ಕೆ ಬದಲಾಗಿ ಮಾತುಕತೆ ಮತ್ತು ಚರ್ಚೆಯ ಮಾರ್ಗವನ್ನು ಅವಲಂಬಿಸಬೇಕು. ಹಾಗೆ ಮಾಡಿದರೆ ನಾವು ನಮ್ಮ ಮುಂದಿನ ಪೀಳಿಗೆಗಳಿಗೆ ಅಂಗವಿಕಲತೆ ಮತ್ತು ಅಂಗಹೀನತೆಯ "ಕೊಡುಗೆ"ಯ ಬದಲಾಗಿ ಪ್ರಕಾಶಮಾನವಾದ ಭಾವೀ ಜೀವಿತವನ್ನು ನೀಡುವವರಾಗುವೆವು."

ಬ್ರಿಟಿಷ್ ಪ್ರಧಾನ ಮಂತ್ರಿಗೆ ಅವರು ಹೀಗೆ ಪತ್ರ ಬರೆದರು:

"ನನ್ನ ಕೋರಿಕೆ ಏನೆಂದರೆ, ಪ್ರತಿಯೊಂದು ಹಂತದಲ್ಲಿಯೂ ಪ್ರತಿಯೊಂದು ದಿಸೆಯಲ್ಲಿಯೂ ದ್ವೇಷಾಗ್ನಿಯನ್ನು ನಂದಿಸಲು ನಾವು ಸಾಧ್ಯವಿರುವಷ್ಟು ಉತ್ತಮವಾಗಿ ಪ್ರಯತ್ನಿಸಬೇಕು. ನಾವು ನಮ್ಮ ಪ್ರಯತ್ನದಲ್ಲಿ ಜಯಶಾಲಿಗಳಾದರೆ ಮಾತ್ರ ನಾವು ಮುಂದಿನ ನಮ್ಮ ಪೀಳಿಗೆಗಳಿಗೆ ಪ್ರಕಾಶಮಾನವಾದ ಭವಿಷ್ಯವನ್ನು ಖಾತರಿ ನೀಡಲು ಶಕ್ತರಾಗುವೆವು. ನಾವು ನಮ್ಮ ಈ ಪ್ರಯತ್ನದಲ್ಲಿ ಸೋತು ಹೋಗುವುದಾದರೆ, ಮುಂದೆ ಸಂಭವಿಸುವ ಅಣ್ವಸ್ತ್ರಗಳು ಬಳಸಲ್ಪಡುವ ಯುದ್ಧದ ಕಾರಣದಿಂದ ನಮ್ಮ ಮುಂದಿನ ಪೀಳಿಗೆಗಳು ಎಲ್ಲ ಸ್ಥಳಗಳಲ್ಲೂ ನಮ್ಮ ಕೃತ್ಯಗಳ ಭಯಾನಕ ಪರಿಣಾಮಗಳನ್ನು ಅನುಭವಿಸುವರು ಮತ್ತು ಜಾಗತಿಕ ವಿನಾಶಕ್ಕೊಯ್ದು ತಮ್ಮ ಹಿರಿಯರನ್ನು ಅವರು ಎಂದೂ ಕ್ಷಮಿಸಲಾರರು."

## ದೇಶದ್ರೋಹ ಮತ್ತು ಸರ್ಕಾರದ ವಿರುದ್ಧ ವರ್ತಿಸುವುದು ದೇಶದ ಶಾಂತಿ ಮತ್ತು ಭದ್ರತೆಗೆ ಅಪಾಯಕಾರಿ

"ಇಸ್ಲಾಮಿನ ಅಧ್ಯಾಪನೆ ಪ್ರಕಾರ ದೇವನು ಎಲ್ಲ ರೀತಿಯ ಮೋಸಗಾರಿಕೆ, ದೇಶದ ವಿರುದ್ಧ ಅಥವಾ ಸರಕಾರದ ವಿರುದ್ಧ ಮಾಡುವ ವಿದ್ರೋಹಕರ ಕೃತ್ಯಗಳನ್ನು ನಿಷಿದ್ಧಗೊಳಿಸಿದ್ದಾನೆ. ಏಕೆಂದರೆ ದೇಶದ್ರೋಹ ಮತ್ತು ಸರ್ಕಾರದ ವಿರುದ್ಧ ವರ್ತಿಸುವುದು ದೇಶದ ಶಾಂತಿ ಮತ್ತು ಭದ್ರತೆಗೆ ಅಪಾಯ ಉಂಟುಮಾಡುತ್ತದೆ. ಆಂತರಿಕ ಗಲಭೆಗಳು ಮತ್ತು ವಿದ್ರೋಹಕರ ಕೃತ್ಯಗಳು ಯಾವಾಗಲೂ ಬಾಹ್ಯ ಜಗಳಗಳನ್ನು ಆಮಂತ್ರಿಸುತ್ತವೆ ಮತ್ತು ಆಂತರಿಕ ಗಲಭೆಗಳಿಂದ ಬಾಹ್ಯ ಶತ್ರುಗಳು ಧೈರ್ಯಗೊಂಡು ಹಸ್ತಕ್ಷೇಪ ನಡೆಸಲು ಮುಂದಾಗುತ್ತಾರೆ. ತನ್ನ ದೇಶದ ವಿರುದ್ಧ ಮಾಡುವ ವಿದ್ರೋಹಗಳಿಂದ ಅತ್ಯಂತ ತೀವ್ರ ಅಪಾಯಕರ ಪರಿಣಾಮಗಳು ತಲೆದೋರಬಹುದು. ಒಂದು ದೇಶದ ಬಗ್ಗೆ ನಿಷ್ಠೆ ಮತ್ತು ಭಕ್ತಿ ತೋರಿಸಬೇಕಾದುದು ಸಹನೆದೋರುವುದರ ಮೂಲಕ, ಉನ್ನತ ನೈತಿಕಗುಣಗಳನ್ನು ತೋರಿಸುವುದರ ಮತ್ತು ದೇಶದ ನಿಯಮಗಳನ್ನು ಅನುಸರಿಸುವ ಮೂಲಕವಾಗಿದೆ."

(ಮಿಲಿಟರಿ ಹೆಡ್‌ಕ್ವಾರ್ಟರ್, ಕೋಬ್ಲನ್ಸ್ ಜರ್ಮನಿಯಲ್ಲಿ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬ್ ಮಾಡಿದ ಭಾಷಣ, 2012)

## ಸತ್ಯ ಮತ್ತು ನ್ಯಾಯಪಾಲನೆಯ ವಾತಾವರಣ ಸೃಷ್ಟಿಯಾಗಲಿ

"ಇಂದು ಲೋಕವು ಒಂದು ಜಾಗತಿಕ ಗ್ರಾಮವಾಗಿರುವುದಾಗಿ ನಾವು ಕಾಣುತ್ತೇವೆ. ಮಾನವರೆಲ್ಲರೂ ಪರಸ್ಪರ ಬಹಳ ಹತ್ತಿರವಾಗಿರುವರು. ಎಲ್ಲ ದೇಶಗಳಲ್ಲೂ ಎಲ್ಲ ಜನಾಂಗಗಳ, ಎಲ್ಲ ಧರ್ಮಗಳ ಮತ್ತು ಎಲ್ಲ ಸಂಸ್ಕೃತಿಗಳ ಜನರನ್ನು ಕಾಣಬಹುದಾಗಿದೆ. ಆದ್ದರಿಂದ ಪ್ರತಿ ದೇಶದ ನಾಯಕರು ತಮ್ಮ ದೇಶದ ನಿವಾಸಿಗಳಾದ ಎಲ್ಲರ ಭಾವನೆಗಳನ್ನು ಗೌರವಿಸಬೇಕು. ರಾಜಕಾರಣಿಗಳು ಮತ್ತು ಸರಕಾರಗಳು ಸತ್ಯ ಮತ್ತು ನ್ಯಾಯಪಾಲನೆಯ ವಾತಾವರಣ ಸೃಷ್ಟಿಯಾಗುವಂತಹ ನಿಯಮಗಳನ್ನು ರಚಿಸಲು ಕಠಿಣ ಪ್ರಯತ್ನಮಾಡಬೇಕು. ಜನರಿಗೆ ಕಷ್ಟಕರವಾದ ಮತ್ತು ನಿರಾಶದಾಯಕ ನಿಯಮಗಳನ್ನು ರಚಿಸಬಾರದು. ಅನ್ಯಾಯ ಮತ್ತು ದೌರ್ಜನ್ಯವನ್ನು ಅಳಿಸಿಬಿಡಬೇಕು ಮತ್ತು ನಿಜವಾದ ಶಾಂತಿ ಸ್ಥಾಪನೆಗೋಸ್ಕರ ಪ್ರಯತ್ನಿಸಬೇಕು. ಇದಕ್ಕೆ ಇರುವ ಉತ್ತಮ ಮಾರ್ಗ ಸೃಷ್ಟಿಕರ್ತನಾದ ದೇವನನ್ನು ಲೋಕವು ಗುರುತಿಸಬೇಕು ಎಂಬುದಾಗಿದೆ. ಎಲ್ಲ ರೀತಿಯ ನಿಷ್ಠೆಗಳು ದೇವನೊಂದಿಗೆ ಇರುವ ನಿಷ್ಠೆಯ ಬುನಾದಿಯನ್ನು ಹೊಂದಿರಬೇಕು. ಹೀಗೆ ಮಾಡಲು ಸಾಧ್ಯವಾದರೆ ಅತ್ಯುನ್ನತ ಮಟ್ಟದ ದೇಶನಿಷ್ಠೆಯು ಎಲ್ಲ ದೇಶಗಳಲ್ಲಿ ಸ್ಥಾಪಿತವಾಗುವುದನ್ನು ನಾವು ಕಾಣುವೆವು. ಲೋಕದಾದ್ಯಂತ ಶಾಂತಿ ಮತ್ತು ಭದ್ರತೆ ಸ್ಥಾಪನೆಯಾಗುವ ಮಾರ್ಗಗಳು ತೆರೆದುಕೊಳ್ಳುವುವು." (2012ರಲ್ಲಿ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಮಿಲಿಟರಿ ಹೆಡ್‌ಕ್ವಾರ್ಟರ್ಸ್ ಕೋಬ್ಲೆನ್ಸ್ ಜರ್ಮನಿಯಲ್ಲಿ ಮಾಡಿದ ಭಾಷಣ)

ಸಾಮರಸ್ಯ, ನೀತಿ – ನ್ಯಾಯ ಮತ್ತು ಜಾಗತಿಕ ಶಾಂತಿ ಸ್ಥಾಪನೆಗೆ ಸಂಬಂಧಿಸಿ ಜಾಗತಿಕ ಅಹ್ಮದಿಯಾ ಜಮಾಅತಿನ ನೇತಾರ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್‌ರ (ಅಯ್ಯದಹುಲ್ಲಾಹ್) ಪ್ರಾಮಾಣಿಕ ಪ್ರಯತ್ನಗಳ ಮತ್ತು ಪ್ರಭಾವಶಾಲಿ ಉಪದೇಶಗಳ ಸಂಕ್ಷಿಪ್ತವಾದ ಪ್ರಸ್ತಾಪದೊಂದಿಗೆ ಕೊನೆಯದಾಗಿ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರ (ವಾಗ್ದತ್ತ ಸುಧಾರಕ) ಮುನ್ನೆಚ್ಚರಿಕೆಯನ್ನು ಪ್ರಸ್ತಾಪಿಸುವುದು ಕೂಡ ಆವಶ್ಯಕ. ಅವರು ಹೇಳುತ್ತಾರೆ:

"ಎಲ್ಲೈ ಯುರೋಪಿನ ಜನಾಂಗಗಳೇ, ನೀವು ಸುರಕ್ಷಿತರಲ್ಲ, ಎಲ್ಲೈ ಏಷ್ಯಾದ ಜನಾಂಗಗಳೇ ನೀವೂ ಸುರಕ್ಷಿತರಲ್ಲ. ಎಲ್ಲೈ ದ್ವೀಪನಿವಾಸಿಗಳೇ, ನಿಮ್ಮ ಸ್ವಯಂ ಕಲ್ಪಿತ ದೇವರುಗಳು ಆ ದಿನದಂದು ನಿಮ್ಮ ರಕ್ಷಣೆಗೆ ಬರಲಾರರು. ದೊಡ್ಡ ದೊಡ್ಡ ನಗರಗಳು ನಾಶವಾಗುವುದನ್ನು ಮತ್ತು ಜನಭರಿತ ಪ್ರದೇಶಗಳು ಜನಶೂನ್ಯವಾಗುವ ಭವಿಷ್ಯದ ಚಿತ್ರವನ್ನು ನಾನು ಈಗಲೇ ಕಾಣುತ್ತಿದ್ದೇನೆ. ಆ ಸರ್ವಾಧಿಪತಿಯಾದ ದೇವನು ಒಂದು ದೀರ್ಘಕಾಲದ ವರೆಗೆ ಮೌನಾವಲಂಬಿಯಾಗಿದ್ದನು. ಅವನ ಸಮ್ಮುಖದಲ್ಲೇ ಹೇಯವಾದ ಅನೇಕ ದುಷ್ಕೃತ್ಯಗಳು ನಡೆಯುತ್ತಿದ್ದರೂ ಅವನು ಸುಮ್ಮನಿದ್ದನು. ಆದರೆ ಈಗ ಅವನು ಭಯಂಕರ ಸ್ವರೂಪದಿಂದ ತನ್ನ ಮುಖವನ್ನು ತೋರಿಸುವನು. ಅಂತಹ ಕಾಲ ದೂರವಿಲ್ಲ! ಕಿವಿ ಇದ್ದವರು ಕೇಳಿಕೊಳ್ಳಲಿ! ನಾನು ಎಲ್ಲರನ್ನೂ ದೇವನ ರಕ್ಷಣೆಯಲ್ಲಿ ಒಂದುಗೂಡಿಸಲಿಕ್ಕೆ ಕೈಲಾದಷ್ಟು ಪ್ರಯತ್ನಿಸಿದೆ. ಆದರೆ ನಿಯತಿ ನಿಯಮ ಪೂರ್ಣಗೊಳ್ಳಬೇಕಲ್ಲವೇ? ನಾನು ಸತ್ಯವಾಗಿಯೂ ನಿಮ್ಮೊಡನೆ ಹೇಳುತ್ತೇನೆ: ಈ ರಾಜ್ಯದ ಸರದಿ ಸಹ ಸಮೀಪಿಸುತ್ತಿದೆ. ನೋಹಾ ಪ್ರವಾದಿಯ ಕಾಲ ನಿಮ್ಮ ಕಣ್ಣ ಮುಂದೆ ಪ್ರತ್ಯಕ್ಷವಾಗುವುದು. ಪ್ರವಾದಿ ಲೂತ್‌ರವರ ರಾಜ್ಯದಲ್ಲಿ ಸಂಭವಿಸಿದ್ದನ್ನು ನಿಮ್ಮ ಸ್ವಂತ ಕಣ್ಣುಗಳಿಂದ ಕಾಣುವಿರಿ. ಆದರೆ ದೇವನು ತನ್ನ ಕೋಪವನ್ನು ನಿಧಾನವಾಗಿ ತೋರಿಸುವನು. ನಿಮ್ಮ ಮೇಲೆ ದಯಾದೃಷ್ಟಿಯನ್ನು ಬೀರುವಂತೆ ನೀವು ಅವನನ್ನು ಪಶ್ಚಾತ್ತಾಪದಿಂದ ಪ್ರಾರ್ಥಿಸಿರಿ."

(ಹಖೀಖತುಲ್ ವಹ್ಯ್, ರೂಹಾನಿ ಖಝಾಇನ್ ಭಾಗ 22, ಪುಟ 269)

ಲೋಕವನ್ನು ನಾಶದಿಂದ ರಕ್ಷಿಸಲು ತಮ್ಮ ಸ್ವಾರ್ಥ ಮತ್ತು ವೈಯಕ್ತಿಕ ಇಚ್ಛೆಗಳನ್ನು ಹಿಂದೆ ಹಾಕಿಕೊಂಡು ತಮ್ಮ ಕರ್ತವ್ಯಗಳನ್ನು ಉತ್ತಮ ರೀತಿಯಲ್ಲಿ ನಿಭಾಯಿಸಲು ಅಲ್ಲಾಹನು ಎಲ್ಲರಿಗೂ ಸೌಭಾಗ್ಯ ನೀಡಲಿ ಮತ್ತು ಅಲ್ಲಾಹನು ನಮ್ಮೆಲ್ಲರನ್ನು ಜಾಗತಿಕ ಮಹಾ ಯುದ್ಧದ ವಿನಾಶಕಾರಿ ದುಷ್ಪರಿಣಾಮಗಳಿಂದ ರಕ್ಷಿಸಲಿ ಎಂದು ಪ್ರಾರ್ಥಿಸೋಣ.

**ಮುಖ್ಯವಾದ ಮನವಿ:** ಈ ಮುಖ್ಯವಾದ ವಿಷಯಕ್ಕೆ ಸಂಬಂಧಿಸಿ ಆವಶ್ಯಕ ವಿವರಗಳಿಗೆ ಜಾಗತಿಕ ಅಹ್ಮದಿಯಾ ಜಮಾಅತಿನ ಸರ್ವೋಚ್ಚ ನೇತಾರ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್‌ರ(ಅಯ್ಯದಹುಲ್ಲಾಹ್) **"World Crisis And Pathway to Peace"** ಎಂಬ ಪುಸ್ತಕವನ್ನು ಓದಿರಿ. ಅದರ ತರ್ಜುಮೆ **"ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿ ಮಾರ್ಗ"** ಎಂಬ ಹೆಸರಲ್ಲಿ ಕನ್ನಡದಲ್ಲಿ ಪ್ರಕಟವಾಗಿದೆ. ಆನ್‌ಲೈನ್‌ನಲ್ಲಿ ಕೂಡ ಓದಬಹುದಾಗಿದೆ:

**http://www.alislam.org/library/books/world crisis & the pathway to peace.pdf**
**http://www.alislam.org/urdu/pdf/Urdu-World-Crisis-and-the-Pathway-to-Peace.pdf**

**Contact Details:** Ahmadiyya Muslim Jama'at India
**Head Office**
Shoba Noor-ul-Islam
Qadian, Distt. Gurdaspur, Punjab, Pin:143516
**Branch Office:**
No1 3rd Cross, Wilson Garden, Bangalore-560027 | Darussalam, Near Railway, Level Crossing, Pandeshwar-575001
www.alislam.org /www.ahmadiyyamuslimjamaat.in
Feedback www.ahmadiyyamuslimjamaat.in/feedback
National Toll Free Number: 1800 3010 2131 (9:00AM to 10:30PM)
MUSLIM TELEVISION AHMADIYYA INTERNATIONAL
www.mta.tv
Satellite: Asia sat 7s, Degree: 105.5 East, Frequency 3760 Symbol Rate: 26000 FEC: Auto / C.Band 4 Feet Dish Antenna
EutelsatE70B,Degree:70° East,Frequency:11211,SymbolRate:5111,Polarization-HorizontalQPSK-1/2, KU Band 2 feet Dish Antenna

# ಮಹಾತ್ಮ ಗುರು ನಾನಕ್

* ಮೌಲವಿ ಮುಬಶ್ಶಿರ್ ಅಹ್ಮದ್ ಖಾದಿಮ್,
ಪ್ರಾಧ್ಯಾಪಕ, ಜಾಮಿಅ ಅಹ್ಮದಿಯಾ ಖಾದಿಯಾನ್

ಮಹಾತ್ಮ ಗುರು ನಾನಕ್‌ರವರು ಹಿಂದೂಸ್ಥಾನವೆಂಬ ಪುಣ್ಯ ಭೂಮಿಯ ಪಂಜಾಬು ಪ್ರಾಂತ್ಯದಲ್ಲಿ ಜನಿಸಿದ ದೇವ ಪ್ರಕಾಶ ಗಳಿಸಿದ, ದೇವನಿಗೆ ಪ್ರಿಯರಾದ ಸಂತರೂ ಪರಿಶುದ್ಧರೂ ಅಗಿದ್ದ ಮಹಾಪುರುಷರಾಗಿದ್ದರು. ಅವರ ಹೆಸರು ಸರ್ವರಿಗೂ ತಿಳಿದುದೂ ಆಗಿದೆ.

ಗುರುನಾನಕ್‌ರವರು ಜನಿಸಿ ಐನೂರು ವರ್ಷಗಳು ಪೂರ್ಣಗೊಂಡ ವರ್ಷ ಇದಾಗಿದೆ. ಈ ಅನುಗ್ರಹಭರಿತ ಸಂದರ್ಭದಲ್ಲಿ ಲೋಕದಾದ್ಯಂತ ವಾಸಿಸುವ ಎಲ್ಲ ಸಿಖ್ಖ್ ಬಾಂಧವರಿಗೆ ಅಹ್ಮದಿಯಾ ಜಮಾಅತಿನ ವತಿಯಿಂದ ಹೃದಯುದ ಅಂತರಾಳಗಳಿಂದ ಶುಭಾಶಯಗಳನ್ನು ಕೋರುತ್ತೇವೆ.

ಅಹ್ಮದಿಯಾ ಜಮಾಅತಿನ ಸ್ಥಾಪಕರು ತಮ್ಮ ಗ್ರಂಥಗಳಲ್ಲಿ ಬಾಬಾ ನಾನಕ್‌ಜಿಯವರ ಬಗ್ಗೆ ಬಹಳ ಪ್ರಶಂಸಿಸಿ ಬರೆದಿದ್ದಾರೆ. ಅವರು ತನ್ನ ಫಾರಸೀ ಪದ್ಯದಲ್ಲಿ ಹೇಳುತ್ತಾರೆ:

ಬವದ್ ನಾನಕ್ ಆರಿಫ್ ಮರ್ದೇಖುದಾ

ರಾಝ್ ಹಾಯೆ ಮಅ್‌ರಿಫತ್ ರಾ ರಹೆ ಕುಶಾ

ಅಂದರೆ, ಬಾಬಾ ನಾನಕ್‌ಜಿ ಅವರು ವಿದ್ಯೆ ಮತ್ತು ಸೂಕ್ಷ್ಮಜ್ಞಾನದ ಖಜಾನೆ ಆಗಿದ್ದರು. ಅವರು ಸೂಕ್ಷ್ಮಜ್ಞಾನದ ಎಲ್ಲ ರಹಸ್ಯಗಳನ್ನು ಅರಿತವರಾಗಿದ್ದರು.

ಅಹ್ಮದಿಯಾ ಜಮಾಅತಿನ ಸ್ಥಾಪಕರು ಹೀಗೆ ಸಹ ಹೇಳಿದ್ದಾರೆ: ಬಾಬಾ ನಾನಕರ ಬಗ್ಗೆ ಈ ದೇಶದ ಎಲ್ಲರಿಗೂ ತಿಳಿದ ವಿಚಾರವೇ ಆಗಿದೆ. ಈ ದೇಶದಲ್ಲಿ ಅವರ ಅನುಯಾಯಿಗಳನ್ನು ಸಿಖ್ಖರೆಂದು ಕರೆಯಲಾಗುತ್ತಿದೆ. ಬಾಬಾರವರು ತನ್ನ ಜನಮ್ ಸಾಖೀ ಗ್ರಂಥದಲ್ಲೂ ಮತ್ತು ಇತರ ಗ್ರಂಥಗಳಲ್ಲೂ ತನಗೆ ದೇವ ಸಂದೇಶವಾಣಿ ಲಭಿಸಿದ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ...... ಅವರಿಂದ ಅದ್ಭುತ ಕೃತ್ಯಗಳೂ ದೃಷ್ಟಾಂತಗಳೂ ಪ್ರಕಟಿಸಲ್ಪಟ್ಟವು ಎಂಬುದು ಸಾಬೀತಾಗಿದೆ. ಬಾಬಾ ನಾನಕ್ ಸಾತ್ವಿಕರಾದ ಮಹಾಪುರುಷರಾಗಿದ್ದರು ಎಂಬುದರ ಬಗ್ಗೆ ಸಂಶಯವಿಲ್ಲ. ಸರ್ವಶಕ್ತನಾದ ದೇವನು ತನ್ನ ಪ್ರೀತಿಯ ಪಾನೀಯವನ್ನು ಯಾರಿಗೆಲ್ಲ ಕುಡಿಸಿರುವನೋ ಅಂತಹ ಜನರಲ್ಲಿ ಅವರು ಒಬ್ಬರಾಗಿದ್ದರು. (ಪೈಗಾಮೆ ಸುಲ್ಹ್ ಪುಟ 13).

ಅಹ್ಮದಿಯಾ ಜಮಾಅತಿನ ಸ್ಥಾಪಕರು ಇನ್ನೊಂದು ಸಂದರ್ಭದಲ್ಲಿ ಹೇಳಿದರು: ಬಾಬಾ ನಾನಕ್‌ಜಿಯವರಿಗೆ ದೇವ ಸಂದೇಶವಾಣಿ ಲಭಿಸಿತ್ತೆಂದು ದೃಢವಾಗಿ ನಂಬಬಹುದಾಗಿದೆ.

ಇನ್ನೊಂದು ಸಂದರ್ಭದಲ್ಲಿ ಅವರು ಹೇಳಿದರು: ಬಾಬಾ ನಾನಕ್‌ಜಿ ಅವರು ವಾಸ್ತವಿಕವಾಗಿ ಅಲ್ಲಾಹನ ಪ್ರೀತಿಗೆ ಪಾತ್ರರಾದವರೂ ಅಲ್ಲಾಹನಿಂದ ಅನುಗ್ರಹಗಳನ್ನು ಗಳಿಸಿದವರೂ ಅಲ್ಲಾಹನಿಂದ ಪರಿಶುದ್ಧಗೊಳಿಸಲ್ಪಟ್ಟವರೂ ಆಗಿದ್ದಾರೆಂಬ ಬಗ್ಗೆ ನಾನು ಸಿಖ್ ಸಹೋದರರೊಂದಿಗೆ ಒಮ್ಮತ ಹೊಂದಿದ್ದೇನೆ. ಅಂತಹ ಪರಿಶುದ್ಧರಾದ ಮಹಾಪುರುಷರ ಬಗ್ಗೆ ಅಸಭ್ಯವಾಗಿ ಮಾತನಾಡುವವರನ್ನು ನಾನು ಉದ್ಧಟರೆಂದೂ ನೀಚ ಸ್ವಭಾವ ಹೊಂದಿದವರೆಂದೂ ಗಣಿಸುತ್ತೇನೆ. (ಮಜ್‌ಮೂಅ ಇಶ್ತಿಹಾರಾತ್ ಸಂಪುಟ 2 ಪುಟ 185).

ಅವರು ಇನ್ನೊಂದು ಕಡೆಯಲ್ಲಿ ಹೀಗೆ ಹೇಳುತ್ತಾರೆ: ಬಾಬಾ ನಾನಕ್‌ಜಿಯವರನ್ನು ಅಲ್ಲಾಹನ ಸಾಮೀಪ್ಯ ಗಳಿಸಿದವರೆಂದು ನಾನು ಭಾವಿಸುತ್ತೇನೆ. ಅವರನ್ನು ನಿಂದಿಸುವುದನ್ನು ನಾನು ಇಷ್ಟಪಡುವುದಿಲ್ಲ. ಅಲ್ಲಾಹನು ತನ್ನ ಪ್ರೀತಿಯನ್ನು ಯಾರ ಹೃದಯಗಳಲ್ಲಿ ಇರಿಸಿರುವನೋ ಅಂತಹ ಜನರಲ್ಲಿ ಅವರೊಬ್ಬರೆಂದು ನಾನು ಬಾಬಾ ನಾನಕ್‌ಜಿಯವರ ಬಗ್ಗೆ ಮನವರಿಕೆ ಮಾಡಿರುವೆನು. ಅಂತಹ ಜನರನ್ನು ಹಿಂಬಾಲಿಸಿರಿ. ಅವರ ಪ್ರಕಾಶದಿಂದ ಹೃದಯಗಳನ್ನು ಬೆಳಗಿಸಿರಿ. (ಮಲ್‌ಫೂಝಾತ್ ಸಂಪುಟ 7 ಪುಟ 212).

ಹಝ್ರತ್ ಬಾಬಾ ನಾನಕ್‌ಜಿಯವರ ಪವಿತ್ರ ನುಡಿಗಳು ಗ್ರಂಥಸಾಹಿಬ್‌ನಲ್ಲಿ ಸಂರಕ್ಷಿಸಿಡಲಾಗಿದೆ. ಅವುಗಳ ಬಗ್ಗೆ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ಪ್ರಶಂಸಿಸುತ್ತಾರೆ. ಆ ನುಡಿಗಳನ್ನು ಒಬ್ಬ ದೇವಭಕ್ತನ ಪ್ರೇಮ ಪ್ರಕಟನೆಯ ಮಾತುಗಳೆಂದು ಅವರು ಹೇಳುತ್ತಾರೆ. ಅದರ ಬಗ್ಗೆ ಹೀಗೆ ಹೇಳಿದ್ದಾರೆ: ಬಾಬಾ ಸಾಹಿಬರ ನುಡಿಗಳು ಎಂತಹ ನುಡಿಗಳೆಂದರೆ ಯಾರ ಹೃದಯವನ್ನು ವಾಸ್ತವಿಕವಾಗಿ ದೇವ ಪ್ರೇಮವು ಜಯಿಸಿದೆಯೋ ಅಂತಹ ವ್ಯಕ್ತಿಯ ನುಡಿಗಳು ಅವುಗಳಾಗಿವೆ. ಅವರು ಬರೆದ ಪ್ರತಿಯೊಂದು ಪದ್ಯ ಏಕದೇವ ವಿಶ್ವಾಸದ ಸುವಾಸನೆಯಿಂದ ಭರಿತವಾಗಿದೆ..... ಬಾಬಾ ಸಾಹಿಬರ ನುಡಿಗಳ ಮೇಲೆ ದೃಷ್ಟಿ ಹಾಯಿಸಿದಾಗ ಹೀಗೆ ಭಾಸವಾಗುತ್ತದೆ: ಈ ಮಹಾನುಭಾವರ ಹೃದಯ ಶಬ್ದಗಳ ಬರಡು ಮರುಭೂಮಿಯನ್ನು ದಾಟಿ ಅತ್ಯಂತ ಆಳವಾದ ದೇವ ಪ್ರೀತಿಯೆಂಬ ನದಿಯಲ್ಲಿ ನೆಗೆಯುತ್ತಿದೆ. (ಎಂದರೆ ಗುರು ನಾನಕರಿಗೆ ಅಲ್ಲಾಹನ ಅಸ್ತಿತ್ವದ ಬಗ್ಗೆ ಗಾಢವಾದ ಪ್ರೀತಿ ಮತ್ತು ವಿಶ್ವಾಸವಿತ್ತು.) (ಸತ್‌ಬಚನ್ ಪುಟ 135).

ಇದೇ ರೀತಿ ಅಹ್ಮದಿಯಾ ಜಮಾಅತಿನ ಸ್ಥಾಪಕರು ತನ್ನ ಗ್ರಂಥವಾದ ಚಶ್ಮೆ ಮಅರಿಫತ್‌ನಲ್ಲಿ ಹೀಗೆ ಬರೆದಿದ್ದಾರೆ: ಬಾಬಾ ನಾನಕ್‌ಜಿಯವರ ಜೀವನ ಚರಿತ್ರೆ ಬಗ್ಗೆ ತಿಳಿದುಕೊಂಡವನಿಗೆ ಮನವರಿಕೆ ಆಗುವುದು – ಆ ಮಹಾಪುರುಷರು ಲೌಕಿಕತೆಯ ಸಾವಿರಾರು ಪರದೆಗಳನ್ನು ಹರಿದುಹಾಕಿ ದೇವನನ್ನು ಅವಲಂಬಿಸಿದ್ದರು. ಅವರ ನುಡಿಗಳು ಮತ್ತು ಪ್ರತಿಯೊಂದು ಶಬ್ದ ಸ್ಪಷ್ಟಪಡಿಸುವುದೇನೆಂದರೆ ಅವರು ದೇವನ ಕೈಗಳಿಂದ ಪರಿಶುದ್ಧಗೊಳಿಸಲ್ಪಟ್ಟವರಲ್ಲಿ ಒಬ್ಬರಾಗಿದ್ದರು; ಅವರ ಹೃದಯುಗಳನ್ನು ಲೋಕದಿಂದ ಬೇಸರಗೊಳ್ಳುವಂತೆ ಮಾಡಿ ದೇವನು ತನ್ನ ಕಡೆಗೆ ಎಳೆದಿರುತ್ತಾನೆ. ಅವರ ಹೃದಯಗಳಲ್ಲಿ ದೇವನು ತನ್ನ ಪ್ರೀತಿಯ ಅಗ್ನಿಯನ್ನು ಇರಿಸಿರುತ್ತಾನೆ..... ವಾಸ್ತವಿಕವಾದುದೇನೆಂದರೆ ಬಾಬಾ ನಾನಕ್ ಜೀವಂತ ದೇವನನ್ನು ಅನ್ವೇಷಿಸುವವರಾಗಿದ್ದರು. ಅವರು ಜೀವಂತ ಧರ್ಮವನ್ನು ಅನ್ವೇಷಿಸುವವರಾಗಿದ್ದರು. ಕೊನೆಗೆ ದೇವನು ಅವರಿಗೆ ಕಾಣಿಸಿಕೊಂಡನು ಮತ್ತು ನೇರಮಾರ್ಗವನ್ನು ತೋರಿಸಿಕೊಟ್ಟನು. ಅಲ್ಲಾಹನ ಅನುಗ್ರಹಗಳಿಂದ ಅವರಿಂದ ಅದ್ಭುತ ಕೃತ್ಯಗಳು

ಪ್ರಕಟವಾಗುವಂತೆ ಆದುವು. ಅಂತಹ ಅನುಗ್ರಹಗಳು ದೇವನಿಂದ ಪರಿಶುದ್ಧರಾದವರಿಗೆ ನೀಡಲ್ಪಡುತ್ತವೆ.

ನಾನು ನಿಮ್ಮ ಮುಂದೆ ಇರಿಸಿದ ಉಲ್ಲೇಖಗಳು ಅಹ್ಮದಿಯಾ ಜಮಾಅತಿನ ಸ್ಥಾಪಕರು ಬರೆದ ಗ್ರಂಥಗಳಿಂದ ಉದಾಹರಣೆ ರೂಪದಲ್ಲಿ ನೀಡಿದವುಗಳಾಗಿವೆ. ವಾಸ್ತವಿಕವಾಗಿ ಅವರ ಗ್ರಂಥಗಳು ಬಾಬಾ ನಾನಕ್‌ಜಿಯವರ ಪ್ರಶಂಸೆಗಳಿಂದ ತುಂಬಿವೆ.

ನಾನು ಪ್ರಸ್ತಾಪಿಸಿದ ಉಪದೇಶಗಳ ಪ್ರಕಾರ ಪ್ರತಿಯೊಬ್ಬ ಅಹ್ಮದಿ ಮುಸ್ಲಿಮ್ ಬಾಬಾ ನಾನಕ್‌ಜಿಯವರನ್ನು ಪ್ರೀತಿಸುತ್ತಾ ಗೌರವಿಸುವುದು ತನ್ನ ಧಾರ್ಮಿಕವಾದ ಕಡ್ಡಾಯ ಕರ್ತವ್ಯವೆಂದು ಗಣಿಸುತ್ತಾನೆ.

ಬಾಬಾ ನಾನಕ್‌ಜಿಯವರಿಗೆ ಅಹ್ಮದಿಯಾ ಜಮಾಅತಿನ ಸ್ಥಾಪಕರು ನೀಡಿದ ಗೌರವ ಮತ್ತು ಅವರ ಬಗ್ಗೆ ಪ್ರಕಟಿಸಿದ ಪ್ರೀತಿಯ ಕಾರಣದಿಂದ ಒಬ್ಬ ಹಿರಿಯ ಸಿಖ್ಖ್ ವಿದ್ವಾಂಸ ಭಾಯಿ ಮೋಹನ್ ಸಿಂಗ್‌ಜಿ ವೈದ್ ತರನ್ ತಾರನ್ ವಾಲೋಂ ಹೀಗೆ ಬರೆಯುತ್ತಾರೆ: ಹಝ್ರತ್ ಮಿರ್ಝಾ ಖಾದಿಯಾನಿಜಿ ಅವರು ಸತ್‌ಬಚನ್ ಎಂಬ ಗ್ರಂಥವನ್ನು ಬರೆದಿದ್ದಾರೆ. ಆ ಗ್ರಂಥದಲ್ಲಿ ಅವರು ಶ್ರೀ ಗುರುನಾನಕ್‌ಜಿಯವರನ್ನು ಪೀರೋಂಕೆ ಪೀರ್ (ಪೀರ್‌ಗಳ ಪೀರ್) ಮತ್ತು ಅವ್‌ಲಿಯೋಂಕೆ ಅವ್‌ಲಿಯಾ (ಸಂತರ ಸಂತ) ಎಂದು ಹೇಳಿ ಬಹಳ ಪ್ರಶಂಸಿಸಿದ್ದಾರೆ. (ಮನ್‌ಮತ್‌ಪರ್ ಹಾರ್ ನಂಬರ್ 4 ಪುಟ 15).

ಇದೇ ರೀತಿ ಸರ್‌ದಾರ್ ಪ್ಯಾರಾ ಸಿಂಗ್‌ಜಿ ಭೂಗಲ್ ಬರೆಯುತ್ತಾರೆ: ಮುಸ್ಲಿಮರಲ್ಲಿ ಅಹ್ಮದಿ ಪಂಗಡದ ಮುಸ್ಲಿಮರು ಪಂಜಾಬಿನ ಖಾದಿಯಾನ್‌ನಲ್ಲಿದ್ದಾರೆ. ಅವರು ಪವಿತ್ರ ಖುರ್‌ಆನ್ ಮತ್ತು ಮುಹಮ್ಮದ್ ಪೈಗಂಬರರನ್ನು ನಂಬುತ್ತಾರೆ. ಅದರೊಂದಿಗೆ ಅನ್ಯ ಧರ್ಮಗಳ ಮತ್ತು ಪಂಗಡಗಳ ಜನರನ್ನು ದೇವನ ಪ್ರತಿಬಿಂಬ ಎಂದು ಗಣಿಸುತ್ತಾರೆ. ಅವರು ಶ್ರೀ ಗುರು ನಾನಕರನ್ನೂ ಶ್ರೀ ಗುರುಗ್ರಂಥ ಸಾಹಿಬನ್ನೂ ಬಹಳ ಗೌರವ ಭಾವದಿಂದ ಕಾಣುತ್ತಾರೆ. (ಖೌಮೀ ಸಂದೇಶ್ 1952 ಆಗಸ್ಟ್ 12).

ಇದೇ ರೀತಿ ಸಂತ್ ಸಿಪಾಹೀ ಎಂಬ ಪತ್ರಿಕೆಯಲ್ಲಿ ಇನ್ನೊಬ್ಬ ಸಿಖ್ಖ್ ವಿದ್ವಾಂಸರು ಹೀಗೆ ಬರೆದಿದ್ದಾರೆ: ಮುಸ್ಲಿಮರು ಮತ್ತು ವಿಶಿಷ್ಟವಾಗಿ ಅಹ್ಮದಿ ಮುಸ್ಲಿಮರು ಶ್ರೀ ಗುರು ನಾನಕ್‌ರನ್ನು ಕಾಮಿಲ್ ಮುರ್‌ಶಿದ್ (ಪರಿಪೂರ್ಣ ಮಾರ್ಗದರ್ಶಕ)ಎಂದು ನಂಬುತ್ತಾರೆ. (ಸಂತ್ ಸಿಪಾಹಿ – 1950 ಮಾರ್ಚ್).

ಅಹ್ಮದಿಯಾ ಜಮಾಅತಿನ ಸ್ಥಾಪಕರು ತಮ್ಮ ಗ್ರಂಥಗಳಲ್ಲಿ ಐಕ್ಯತೆ, ಪ್ರೀತಿ ವಾತ್ಸಲ್ಯ, ಧಾರ್ಮಿಕ ಮಾರ್ಗದರ್ಶಕರ ಬಗ್ಗೆ ಗೌರವ, ಜನರು ಪರಸ್ಪರ ಗೌರವಿಸಿ ಸೌಹಾರ್ದ ಸ್ಥಾಪಿಸುವುದು ಮೊದಲಾದುವುಗಳ ಬಗ್ಗೆ ಉನ್ನತ ಸ್ಥಾನ ನೀಡಿದ್ದಾರೆ ಮತ್ತು ಎಲ್ಲ ಧರ್ಮಗಳ ಸ್ಥಾಪಕರನ್ನು ಮತ್ತು ಮಾರ್ಗದರ್ಶಕರನ್ನು ಗೌರವಿಸುವುದರಿಂದಲೇ ರಾಷ್ಟ್ರೀಯ ಭಾವೈಕ್ಯತೆ ಸಾಧ್ಯವಾಗುವುದೆಂದು ಹೇಳಿದ್ದಾರೆ. ಇದೇ ತತ್ವ ಮುರಿದು ಹೋದ ಹೃದಯಗಳನ್ನು ಜೋಡಿಸಿ ಜನರನ್ನು ಒಬ್ಬರಿನ್ನೊಬ್ಬರಿಗೆ ಸಮೀಪವಾಗುವಂತೆ ಮಾಡುವುದು ಮತ್ತು ಹೃದಯಗಳಿಗೆ ಶಾಂತಿಯನ್ನೂ ಸಮಾಧಾನವನ್ನೂ ನೀಡುವುದು.

ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫರಾಗಿದ್ದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್(ರಹ್) ಭಾರತದ ನಿವಾಸಿಗಳಿಗೆ 1990ರ ಖಾದಿಯಾನಿನ ವಾರ್ಷಿಕ ಜಲ್ಸದ ಸಂದರ್ಭದಲ್ಲಿ ಒಂದು ಸಂದೇಶ ನೀಡಿದ್ದರು. ಅದರಲ್ಲಿ ಹೀಗೆ ಹೇಳುತ್ತಾರೆ: ನಾನು ಅಲ್ಲಾಹನೊಂದಿಗೆ ಪ್ರಾರ್ಥಿಸುತ್ತೇನೆ. ಹಿಂದೂಸ್ಥಾನಕ್ಕೆ ಶಾಂತಿಯನ್ನು ಅಲ್ಲಾಹನು ದಯಪಾಲಿಸಲಿ. ಭಾರತದ ಎಲ್ಲ ನಿವಾಸಿಗಳು ಮಾನವೀಯ ಮೌಲ್ಯದೊಂದಿಗೆ ಪರಸ್ಪರ ಸಂಬಂಧ ಸ್ಥಾಪಿಸುವ ಶಕ್ತಿಯನ್ನು ನೀಡಲಿ. ಹಿಂದುಗಳು, ಮುಸ್ಲಿಮರು, ಸಿಖ್ಖರು, ಪಾರ್ಸಿಗಳು ಮತ್ತು ಇತರ ಧರ್ಮಗಳ ಎಲ್ಲ ಜನರು ಪರಸ್ಪರ ಧಾರ್ಮಿಕ ವಿಶ್ವಾಸಕ್ಕೆ ಸಂಬಂಧಿಸಿ ಭಿನ್ನಾಭಿಪ್ರಾಯವಿದ್ದರೂ ಪರಸ್ಪರ ಒಬ್ಬರಿನ್ನೊಬ್ಬರನ್ನು ಪ್ರೀತಿಸಲು ಮತ್ತು ಗೌರವಿಸಲು ಶಕ್ತಿಯನ್ನು ದಯಪಾಲಿಸಲಿ. ಭಾರತದ ಎಲ್ಲ ನಿವಾಸಿಗಳ ಹೃದಯಗಳಲ್ಲಿ ಎಂತಹ ಮನೋಭಾವ ಹುಟ್ಟಬೇಕೆಂದರೆ ಯಾವುದೇ ಸತ್ಯಧರ್ಮ ದೇವನ ಸೃಷ್ಟಿಗಳನ್ನು ದ್ವೇಷಿಸುವ ಉಪದೇಶ ನೀಡುವುದಿಲ್ಲ ಎಂಬ ಸತ್ಯಾಂಶ ಅರಿತುಕೊಳ್ಳಬೇಕು. ಒಂದು ಧರ್ಮದ ಸತ್ಯತೆಯ ಚಿಹ್ನೆ ಏನೆಂದರೆ ದೇವನ ಸೃಷ್ಟಿಗಳೊಂದಿಗೆ ಕಾರುಣ್ಯ, ಸಹಾನುಭೂತಿ ಮತ್ತು ಮೃದುವರ್ತನೆಯ ಉಪದೇಶ ಸತ್ಯವಾದ ಧರ್ಮ ನೀಡುತ್ತದೆ. ನೀವು ನೆನಪಿಡಿರಿ, ದೇವನ ಸೃಷ್ಟಿಗಳನ್ನು ಪ್ರೀತಿಸದವನನ್ನು ದೇವನು ಸಹ ಪ್ರೀತಿಸುವುದಿಲ್ಲ.

ಅಹ್ಮದಿಯಾ ಜಮಾಅತಿನ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಲೋಕದಾದ್ಯಂತ ಶಾಂತಿಯನ್ನೂ ಸಮಾಧಾನವನ್ನೂ ಸ್ಥಾಪಿಸಲು ತೀವ್ರವಾಗಿ ಪ್ರಯತ್ನಮಾಡುತ್ತಿದ್ದಾರೆ. ಅವರು ಹೀಗೆ ಹೇಳಿದರು: ಅಹ್ಮದಿಯಾ ಜಮಾಅತ್ ಯಾವಾಗಲೂ ಪಾಲಿಸುತ್ತಿರುವ ತತ್ವ ಇದಾಗಿದೆ – ಎಂದೂ ಯಾರದಾದರೂ ಭಾವನೆಗೆ ನೋವನ್ನುಂಟುಮಾಡಬಾರದು. ಎಲ್ಲ ಧರ್ಮಗಳ ಧಾರ್ಮಿಕ ಮಾರ್ಗದರ್ಶಕರನ್ನು ಗೌರವಿಸಬೇಕು. ಪವಿತ್ರ ಖುರ್‌ಆನಿನ ಉಪದೇಶದ ಪ್ರಕಾರ ಅನ್ಯರ ನಂಬಿಕೆಗಳನ್ನು ಪರಿಹಾಸ ಮಾಡಬಾರದು ಎಂಬ ಉಪದೇಶಗಳನ್ನು ಸಹ ನಾವು ಪಾಲಿಸುತ್ತಿದ್ದೇವೆ. ಹಝ್ರತ್ ಬಾಬಾ ನಾನಕ್(ರಹ್) ಅವರನ್ನು ಗೌರವಿಸುವ ಬಗ್ಗೆ ಮತ್ತು ಅವರ ಉನ್ನತ ಸ್ಥಾನದ ಬಗ್ಗೆ ಅಹ್ಮದಿಯಾ ಸಾಹಿತ್ಯದಲ್ಲಿ ಬಹಳ ಸ್ಪಷ್ಟವಾಗಿ ಅಹ್ಮದಿಯಾ ಜಮಾಅತಿನ ಸ್ಥಾಪಕರು ಪ್ರಶಂಸಿಸಿದ್ದಾರೆ. ಅವರ ಬಗ್ಗೆ ಅಸಭ್ಯ ಮತ್ತು ಕೀಳು ಶಬ್ದಗಳನ್ನು ಯಾವುದೇ ಅಹ್ಮದಿ ಬಳಸುವುದನ್ನು ಎಂದೂ ಯೋಚಿಸಲಾರನು. ಅಹ್ಮದಿಯಾ ಜಮಾಅತಿನ ಸ್ಥಾಪಕರು ಹಝ್ರತ್ ಬಾಬಾ ನಾನಕ್(ರಹ್) ಬಗ್ಗೆ ಹೀಗೆ ಹೇಳಿದ್ದಾರೆ: ಪಂಜಾಬಿನಲ್ಲಿ ಆಧ್ಯಾತ್ಮಿಕತೆ ಕೊನೆಗೊಂಡಿದ್ದ ಕಾಲದಲ್ಲಿ ಅಲ್ಲಾಹನು ಹಝ್ರತ್ ಬಾಬಾ ಸಾಹಿಬರಿಗೆ ಸತ್ಯದ ಆತ್ಮವನ್ನು ದಯಪಾಲಿಸಿದನು. ಆದುದರಿಂದ ಅವರು ಅಲ್ಲಾಹನ ಪರಿಶುದ್ಧರಾದ ಮತ್ತು ಗೌರವಾರ್ಹರಾದ ಬಹಳ ಪ್ರಿಯರಾದ ಮಹಾನುಭಾವರಲ್ಲಿ ಒಬ್ಬರಾಗಿದ್ದರು ಎಂದು ಸಾಬೀತಾಗುತ್ತದೆ. ಅವರನ್ನು ದೇವನು ತನ್ನ ಕೈಯಿಂದ ಪ್ರಕಾಶದ ಕಡೆಗೆ ಎಳೆದನು. ಗುರು ನಾನಕ್ ಪರಿಶುದ್ಧರೂ ಸಾತ್ವಿಕರೂ ಸಂತರೂ ಅಲ್ಲಾಹನಿಗೆ ಪ್ರಿಯರಾದವರೂ ಆಗಿದ್ದರು.

ಹಝ್ರತ್ ಪಂಚಮ ಖಲೀಫರು ಹೀಗೆ ಸಹ ಹೇಳಿದರು: ವಾಸ್ತವಿಕವಾಗಿ ಹಝ್ರತ್ ಬಾಬಾ ನಾನಕರ ಸ್ಥಾನ ಬಹಳ ಉನ್ನತವಾಗಿದೆ. ನಾವು ಅವರನ್ನು ಬಹಳ ಪ್ರೀತಿಯಾದರಗಳಿಂದ ಕಾಣುತ್ತೇವೆ. (ಖುತ್‌ಬ ಜುಮುಅ – 2012 ಅಕ್ಟೋಬರ್ 12). ◆

# ನೀನು ಮಾಡು – ಮಾಡಬೇಡ

ಹಝ್ರತ್ ಡಾ॥ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್

## 5 – ಸ್ವಭಾವ ಗುಣಗಳು

71. ನೀನು ಅಹಂಭಾವದಿಂದ ವರ್ತಿಸಬೇಡ.
72. ನೀನು ಉಪಕಾರ ಮಾಡಿ ಅದರ ಬಗ್ಗೆ ಕಟುಮಾತು ಹೇಳಬೇಡ.
73. ನೀನು ಅಸೂಯೆಯಿಂದ ವರ್ತಿಸಬೇಡ.
74. ನೀನು ಜನರು ಮಾತಾಡುವಾಗ ಮಧ್ಯದಲ್ಲಿ ತಡೆಯಬೇಡ.
75. ನೀನು ವಿನಾಕಾರಣ ಹಗೆಹೊಂದಬೇಡ.
76. ನೀನು ಕಾಪಟ್ಯದಿಂದ ದೂರಸರಿ.
77. ನೀನು ಮುಖಸ್ತುತಿಯಿಂದ ದೂರವಿರು.
78. ನೀನು ನಾಚಿಕೆಯಿಲ್ಲದೆ ವರ್ತಿಸಬೇಡ.
79. ನೀನು ಜಿಪುಣನಾಗಬೇಡ.
80. ನೀನು ಕಠೋರ ಶಬ್ದಗಳನ್ನು ಬಳಸಬೇಡ.
81. ನೀನು ಅನ್ಯರ ಬಗ್ಗೆ ಕೆಟ್ಟದಾಗಿ ಯೋಚಿಸಬೇಡ.
82. ನೀನು ಪಕ್ಷಪಾತ ಮಾಡಬೇಡ.
83. ನೀನು ಶಂಕಿಸುವ ಸ್ವಭಾವ ಬಿಟ್ಟುಬಿಡು.
84. ನೀನು ಅಜಾಗ್ರತೆಯಿಂದಿರಬೇಡ.
85. ನೀನು ಸುಳ್ಳು ಆರೋಪಗಳನ್ನು ಮಾಡದಿರು.
86. ನೀನು ಮೋಸಮಾಡಬೇಡ.
87. ನೀನು ವಿಶ್ವಾಸದ್ರೋಹ ಮಾಡಬೇಡ.
88. ನೀನು ಅನ್ಯರನ್ನು ಮೆಚ್ಚಿಸಬೇಡ.
89. ನೀನು ನೀಚತನದಿಂದ ದೂರವಿರು.
90. ನೀನು ಸ್ವಂತ ಇಷ್ಟಪ್ರಕಾರ ವರ್ತಿಸುವವನಾಗಬೇಡ.
91. ನೀನು ಸುಳ್ಳು ಸೃಜಿಸುವುದರಿಂದ ಸುಳ್ಳು ಆರೋಪ ಮಾಡುವುದರಿಂದ ದೂರವಿರು.
92. ನೀನು ಪರಸ್ತ್ರೀಯರ ಮೇಲೆ ಕೆಟ್ಟ ದೃಷ್ಟಿಬೀರಬೇಡ.
93. ನೀನು ನಿರರ್ಥಕ ಆಟಗಳಾದ ಚದುರಂಗ, ಇಸ್ಪೀಟು ಆಟ ಮೊದಲಾದವುಗಳಿಂದ ದೂರಸರಿ.
94. ನೀನು ಸುಖಲೋಲುಪತೆಯಿಂದ ದೂರಸರಿ.
95. ನೀನು ಅಡಗಿಕೊಂಡು ಅನ್ಯರ ಮಾತುಗಳನ್ನು ಆಲಿಸಬೇಡ.
96. ನೀನು ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳು.
97. ನೀನು ಅನ್ಯರ ಬಗ್ಗೆಯೂ ನಂಬಿಕೆ ಇರಿಸು.
98. ನೀನು ರೋಗಿಗಳನ್ನು ಸಂದರ್ಶಿಸು.
99. ನೀನು ರಕ್ತಸಂಬಂಧಿಗಳೊಂದಿಗೆ ಒಳ್ಳೆಯ ಸಂಬಂಧ ಹೊಂದು.
100. ನೀನು ನಿನ್ನ ತಪ್ಪು ಒಪ್ಪಿಕೊಳ್ಳಲು ಹಿಂಜರಿಯಬೇಡ.
101. ನೀನು ಧೈರ್ಯವಂತನಾಗು.
102. ನೀನು ನಿನಗೋಸ್ಕರ ಪ್ರತೀಕಾರ ಮಾಡಬೇಡ.
103. ನೀನು ನ್ಯಾಯಬದ್ಧತೆಯನ್ನು ಕೈಬಿಡಬೇಡ.
104. ನೀನು ಅಭಿಮಾನಿಯಾಗಿ ಜೀವಿಸು.
105. ನೀನು ಮೃದು ಹೃದಯಿಯಾಗು.
106. ನೀನು ಮೃದುವಾಗಿ ವರ್ತಿಸು.
107. ನೀನು ಪರಾಶ್ರಯನಾಗದಿರು.
108. ನಿನ್ನ ಎಲ್ಲ ಕೆಲಸ ಪ್ರಾಮಾಣಿಕತೆಯಿಂದ ತುಂಬಿರಬೇಕು.
109. ನೀನು ಸಮಯ ನಿಷ್ಠೆಯುಳ್ಳವನಾಗು.
110. ನೀನು ನಗಿಸಲಿಕ್ಕೋಸ್ಕರ ಕೂಡ ಸುಳ್ಳು ಹೇಳಬೇಡ.
111. ನೀನು ಯಾರದಾದರೂ ಲೇಖನ ಅಥವಾ ಪದ್ಯ ಕೃತಿ ಚೌರ್ಯ ಮಾಡಿ ನಿನ್ನ ಹೆಸರಲ್ಲಿ ಪ್ರಕಟಿಸಬೇಡ.
112. ನೀನು ಕಷ್ಟಕಾಲದಲ್ಲಿ, ಹಣವಿಲ್ಲದಾಗ, ರೋಗಾವಸ್ಥೆಯಲ್ಲಿ ಸಹನೆಯಿಂದ ವರ್ತಿಸು.
113. ನೀನು ನಿರರ್ಥಕ ಕಥೆಗಳಿಂದಲೂ ನಿರರ್ಥಕ ದೃಶ್ಯಗಳಿಂದಲೂ ಕೆಟ್ಟ ಯೋಚನೆಗಳಿಂದಲೂ ನಿನ್ನನ್ನು ದೂರವಿರಿಸು.
114. ನೀನು ಅನ್ಯರ ತಪ್ಪು ಕಂಡುಹಿಡಿಯುವುದರಿಂದ ದೂರವಿರು.
115. ನೀನು ದುಂದು ವೆಚ್ಚ ಮಾಡಬೇಡ.
116. ನೀನು ಒರಟು ಸ್ವಭಾವ ಹೊಂದಬೇಡ.
117. ನೀನು ಆವಶ್ಯವಿರುವಾಗ ತೇಪೆ ಹಚ್ಚಿದ ಅಂಗಿ, ತೇಪೆ ಹಚ್ಚಿದ ಶೂ ಧರಿಸಲು ನಾಚಿಕೆಪಡಬೇಡ.
118. ನೀನು ಜನರ ತಪ್ಪುಗಳ ಬಗ್ಗೆ ಪತ್ತೇದಾರಿಕೆ ಮಾಡಬೇಡ.
119. ನೀನು ಲೇವಡಿ ಮಾಡಬೇಡ.
120. ನೀನು ಧೈರ್ಯಶಾಲಿಯಾಗು.
121. ನೀನು ಪಕ್ಷಪಾತಿಯಾಗಬೇಡ.
122. ನೀನು ಸತ್ಯ ಹೇಳಲು ಹೆದರಬೇಡ. ಆದರೆ ನೀನು ಜಾಣ್ಮೆಯಿಂದ ಸತ್ಯ ಹೇಳು; ಒರಟಾಗಿ ಅವಿವೇಕಭರಿತನಾಗಿ ಹೇಳಬೇಡ.

123. ಯಾವುದೇ ಸತ್ಯವಿಶ್ವಾಸಿ ವಿರುದ್ಧ ನಿನ್ನ ಹೃದಯದಲ್ಲಿ ದ್ವೇಷವಿಲ್ಲದಿರಲಿ.

124. ನೀನು ನಿನ್ನ ಅಭಿಪ್ರಾಯದ ಬಗ್ಗೆ ಒತ್ತಾಯಿಸುವವನಾಗಬೇಡ. ಅನ್ಯರು ಅದನ್ನು ಅಂಗೀಕರಿಸಲು ನಿರ್ಬಂಧಿಸಬೇಡ.

125. ನೀನು ಅನಾವಶ್ಯಕ ಮುಖಸ್ತುತಿ ಮಾಡಬೇಡ.

126. ನೀನು ದುರಾಶೆವುಳ್ಳವನಾಗಬೇಡ.

127. ನೀನು ನ್ಯಾಯಾಧೀಶನಾಗಿದ್ದರೆ ನ್ಯಾಯವನ್ನು ಕೈಬಿಡದಿರು.

128. ನೀನು ನಿನ್ನ ಸಮುದಾಯ ಮತ್ತು ಜಾತಿಯ ಬಗ್ಗೆ ಹೆಮ್ಮೆ ಪಡಬೇಡ.

129. ಹೇ ಮಹಿಳೆ, ಲಜ್ಜೆ ಮತ್ತು ಚಾರಿತ್ರ್ಯ ನಿನ್ನ ನಿಜವಾದ ಆಭರಣಗಳಾಗಿವೆ.

130. ನಿನ್ನ ನಾಲಗೆ, ನಿನ್ನ ಕೈ ಮತ್ತು ಲೇಖನಿಯಿಂದ ಯಾರಿಗೂ ಅನಾವಶ್ಯಕ ಕಷ್ಟ ಉಂಟಾಗದಿರಲಿ.

131. ನೀನು ಒಳ್ಳೆಯ ಪ್ರಯೋಜನಕರ ಕೆಲಸವನ್ನು ಪೂರ್ಣ ಮಾಡದೆ ಬಿಡಬೇಡ.

132. ನೀನು ಕೆಲಸದಿಂದ ದೂರವಿರಲು ನೆವನ ಹೇಳಬೇಡ.

133. ನೀನು ನಿನ್ನ ಜವಾಬ್ದಾರಿಗಳನ್ನು ಅನ್ಯರ ಮೇಲೆ ಹೊರಿಸಬೇಡ.

134. ನೀನು ಸ್ವಭಾವಗಳನ್ನು ಬಿಗಡಾಯಿಸುವ ಚಲಚಿತ್ರ ಮತ್ತು ನಾಟಕಗಳಿಂದ ದೂರಸರಿ.

135. ನೀನು ಅನ್ಯ ಮಹಿಳೆಯರ ಹಾಡು ಆಲಿಸಬೇಡ.

136. ನೀನು ನೌಕರರ ಮೇಲೆ ಮತ್ತು ನಿನ್ನ ಅಧೀನವಿರುವವರ ಮೇಲೆ ದಬ್ಬಾಳಿಕೆ ನಡೆಸಬೇಡ.

137. ನಿನಗೆ ಸಾಂಪತ್ತಿಕ ನಷ್ಟವಾದರೆ ಅಪರಿಮಿತವಾಗಿ ದುಃಖಿಸಬೇಡ.

138. ನೀನು ವಿರೋಧಿಗೆ ಪ್ರತೀಕಾರ ಸಭ್ಯವರ್ತನೆಯಿಂದ ಮಾಡು.

139. ನೀನು ಬೈಗಳಿಗೆ ಬದಲಾಗಿ ಬಯ್ಯಬೇಡ.

140. ನೀನು ಹಿರಿಯರ ಮುಂದೆ ಉಚ್ಚ ಸ್ವರದಲ್ಲಿ ಮಾತನಾಡಬೇಡ.

141. ನೀನು ಮಾತಿನಲ್ಲೂ ವರ್ತನೆಯಲ್ಲೂ ಡಾಂಬಿಕತನ ತೋರಿಸಬೇಡ.

142. ನೀನು ಹೆಚ್ಚು ಹಣ ಸಂಪಾದನೆಯ ದುರಾಶೆ ಹೊಂದಬೇಡ.

143. ಬುದ್ಧಿವಂತಿಕೆಯ ಮಾತು ಎಲ್ಲಿ ದೊರೆತರೂ ಅದು ನಿನ್ನ ಸಂಪತ್ತಾಗಿದ್ದು ಅದನ್ನು ಎತ್ತಿಕೊಳ್ಳು.

144. ನೀನು ನಿನ್ನ ನ್ಯೂನತೆಗಳನ್ನೂ ಪಾಪಗಳನ್ನೂ ಜನರಿಂದ ಮರೆಯಾಗಿಡು. ನೀನು ಸ್ವತಃ ಅವುಗಳನ್ನು ಬಹಿರಂಗಪಡಿಸಬೇಡ.

145. ನೀನು ಪ್ರತಿದಿನ ಒಂದು ಸಾರಿಯಾದರೂ ಮೃತ್ಯು ಬಗ್ಗೆ ಯೋಚಿಸು.

146. ನೀನು ಸಿಟ್ಟಿಗೆ ಅಧೀನನಾಗದಿರು.

147. ನೀನು ವಂಚಕನಿಗೆ ಬೆಂಬಲ ನೀಡಬೇಡ.

148. ನಿನಗೆ ತಿಳಿದರೆ ಅಸಹ್ಯವಾಗುವ ವಿಷಯಗಳ ಬಗ್ಗೆ ವಿಚಾರಿಸಬೇಡ.

149. ನೀನು ಸತ್ಯವಿಶ್ವಾಸಿಗಳಾದ ಸಹೋದರರ ಭಾರ ಹೊರುವವನಾಗು.

150. ನೀನು ಎಲ್ಲರ ಮಾತುಗಳನ್ನು ಆಲಿಸು. ಅವುಗಳಿಂದ ಉತ್ತಮ ಮತ್ತು ಒಳ್ಳೆಯದನ್ನು ತೆಗೆದುಕೊಳ್ಳು.

151. ನೀನು ಮಾಡದೆ ಇರುವುದನ್ನು ಮಾಡಲು ಉಪದೇಶಿಸಬೇಡ.

152. ನೀನು ಸುಖಪ್ರಿಯನಾಗಬೇಡ.

153. ನೀನು ಒಬ್ಬನಿಗೆ ಉಪಕಾರ ಮಾಡುವಾಗ ನಿನಗೆ ಅವನು ಅದಕ್ಕೆ ಬದಲಾಗಿ ಬಹಳ ಹೆಚ್ಚು ಕೊಡುವನು ಎಂಬ ಸಂಕಲ್ಪ ಹೊಂದಬೇಡ.

154. ನೀನು ಅನ್ಯರ ಆರಾಧ್ಯ ಮೂರ್ತಿಗಳನ್ನು ನಿಂದಿಸಬೇಡ. ಏಕೆಂದರೆ ಅವುಗಳ ಆರಾಧಕರು ನಿನ್ನ ದೇವನನ್ನು ಮತ್ತು ನಿನ್ನ ಹಿರಿಯರನ್ನು ನಿಂದಿಸುವರು.

155. ಧರ್ಮಕ್ಕೆ ಸಂಬಂಧಿಸಿ ನೀನು ನಿನ್ನ ತಂದೆ ತಾಯಂದಿರ ಮಾತುಗಳನ್ನು ಒಪ್ಪದಿದ್ದರೂ ಅವರೊಂದಿಗೆ ಆದರದಿಂದ ವರ್ತಿಸು.

156. ನೀನು ಯಾರನ್ನಾದರೂ ಭೇಟಿಯಾಗಲು ಹೋದಾಗ ಆತನು ಯಾವುದಾದರೂ ಕಾರಣದಿಂದ ಭೇಟಿಯಾಗಲು ನಿರಾಕರಿಸಿದರೆ ನೀನು ಅದರ ಬಗ್ಗೆ ಕೆಟ್ಟದಾಗಿ ಭಾವಿಸಬೇಡ.

157. ನೀನು ಅನ್ಯರ ಸಂಪತ್ತನ್ನು ಲಾಲಸೆಯಿಂದ ವೀಕ್ಷಿಸಬೇಡ. ನೀನು ನೆನಪಿಡು, ಸತ್ಯ ವಿಶ್ವಾಸಿ ಸರಳ ಸ್ವಭಾವದವನಾಗಿರುತ್ತಾನೆ. ಅವನು ಮೋಸಗಾರನಾಗಿರುವುದಿಲ್ಲ.

158. ನೀನು ಆತ್ಮಹತ್ಯೆ ಮಾಡಬೇಡ.

159. ನೀನು ನಿನ್ನನ್ನು ಅನಾವಶ್ಯಕವಾಗಿ ಅಪಾಯಕ್ಕೆ ಒಡ್ಡಬೇಡ.

160. ನೀನು ಮುಸ್ಲಿಮನನ್ನು ಶಪಿಸಬೇಡ. ಅವನನ್ನು ಕೊಳಕನೆಂದು ಕರೆಯಬೇಡ.

161. ನೀನು ಯಾವುದಾದರೂ ದುರಾಶೆಯಿಂದ ಸತ್ಯವನ್ನು ಹೇಳಲು ಹೆದರಬೇಡ. (ಅದರಿಂದ ಕಲಹ ಉಂಟಾಗಬಾರದು).

162. ನೀನು ತಮಾಷೆಗೋಸ್ಕರ ಕೂಡ ಸುಳ್ಳು ಹೇಳಬೇಡ.

163. ನೀನು ಒಬ್ಬನಿಗೆ ಇಷ್ಟವಾಗದ ರೀತಿಯಲ್ಲಿ ಅವನನ್ನು ತಮಾಷೆ

ಮಾಡಬೇಡ.

164. ನೀನು ನಿನ್ನ ಮನಸ್ಸಿಗೆ ವಿನಯವನ್ನು ಕಲಿಸು. ಆದರೆ ಅದನ್ನು ಹೀನಗೊಳಿಸಬೇಡ.

165. ನೀನು ಸತ್ಯ ಹೇಳು. ಆದರೆ ನಿನ್ನ ಮತ್ತು ಇತರ ಜನರ ನ್ಯೂನತೆಗಳನ್ನು ಹೇಳುತ್ತಾ ತಿರುಗಾಡಬಾರದು. ಏಕೆಂದರೆ ಕೆಲವು ಸತ್ಯಗಳಿಂದಲೂ ಕಲಹ ಉಂಟಾಗುತ್ತದೆ.

166. ನೀನು ನಿನ್ನ ಸ್ವಭಾವ ಗುಣಗಳಲ್ಲೂ ಕೆಲಸಗಳಲ್ಲೂ ಮಧ್ಯಮಾರ್ಗವನ್ನು ಅನುಸರಿಸು.

167. ನೀನು ಸೃಷ್ಟಿಗಳೊಂದಿಗೆ ವರ್ತಿಸುವಾಗ ದಯೆಯಿಂದ ವರ್ತಿಸು.

168. ನೀನು ಎಲ್ಲ ವಿಧ ಅಭಿಮಾನ ಶೂನ್ಯತೆಗಳಿಂದ ಮುಕ್ತನಾಗು.

169. ನಿನಗೆ ದೇವನು ನೀಡಿದ ಸಹಜ ಗುಣಗಳನ್ನು ನೀನು ನಾಶ ಗೊಳಿಸಬೇಡ. ಅವುಗಳನ್ನು ಸರಿಯಾದ ಮಾರ್ಗದಲ್ಲಿ ಚಲಾಯಿಸು. ಆ ಗುಣಗಳು ನಿರರ್ಥಕವಾದವುಗಳಲ್ಲ.

170. ನೀನು ಹಿರಿಯರಿಗಿಂತ ಶ್ರೇಷ್ಠನಾಗುವ ತನಕ ಅವರ ಮೇಲೆ ಆರೋಪ ಹೊರಿಸಬೇಡ.

171. ನೀನು ಪ್ರತಿಯೊಂದು ವಿಷಯದ ಕೆಟ್ಟ ಪಾರ್ಶ್ವವನ್ನು ಮಾತ್ರ ನೋಡಬೇಡ.

172. ನೀನು ಶರೀರ ಶುದ್ಧಿಗೂ ಆರೋಗ್ಯ ಪಾಲನೆಗೂ ಹೆಚ್ಚು ಮಹತ್ವ ನೀಡಿ ನಿನ್ನ ಸ್ವಭಾವ ಗುಣಗಳನ್ನು ಸರಿಪಡಿಸಲು ನಿರ್ಲಕ್ಷಿಸಬಾರದು. ನೀನು ಸ್ವಭಾವಗುಣಗಳನ್ನು ಸರಿಪಡಿಸಲು ಹೆಚ್ಚು ಮಹತ್ವ ನೀಡಿ ಆರಾಧನೆಯನ್ನು ನಿರ್ಲಕ್ಷಿಸಬಾರದು. ನೀನು ಆರಾಧನೆಯಲ್ಲಿಯೇ ನಿರತನಾಗಿ ಬಲಹೀನನೂ ಆಗಬಾರದು.

173. ನಿನ್ನ ಮೇಲೆ ನಿನ್ನ ದೇವನ ಹಕ್ಕುಗಳಿವೆ. ನಿನ್ನ ಮೇಲೆ ಸೃಷ್ಟಿಗಳ ಹಕ್ಕುಗಳಿವೆ. ನಿನ್ನ ಮೇಲೆ ನಿನ್ನ ಕುಟುಂಬದ ಹಕ್ಕುಗಳಿವೆ. ನಿನ್ನ ಮೇಲೆ ನಿನ್ನ ಸ್ವಂತ ಜೀವದ ಹಕ್ಕುಗಳಿವೆ. ನಿನ್ನ ಮೇಲೆ ನಿನ್ನ ದೇಶದ ಮತ್ತು ನಿನ್ನ ದೇಶದ ಸರಕಾರದ ಹಕ್ಕುಗಳಿವೆ. ನೀನು ಈ ಎಲ್ಲ ಹಕ್ಕುಗಳನ್ನು ಅವುಗಳ ಸ್ಥಾನ ಮತ್ತು ಸಂದರ್ಭಕ್ಕೆ ಅನುಸಾರವಾಗಿ ಈಡೇರಿಸು.

174. ನೀನು ನಟನೆಯಿಂದ ದೂರವಿರು.

175. ನೀನು ಉಪದೇಶವನ್ನು ಆಲಿಸಿ ಕೂಡಲೆ ಅದಕ್ಕೆ ವಿರುದ್ಧ ವರ್ತಿಸಬೇಡ. ನೀನು ಉಪದೇಶ ನಿರಾಕರಿಸುವ ಮೊದಲು ಚಿಂತಿಸು.

176. ನೀನು ಜನರ ಉತ್ತಮ ಗುಣಗಳನ್ನು ಸಹ ಮೆಚ್ಚುವವನಾಗು.

177. ನೀನು ನೆನಪಿಡು – ಎಲ್ಲದಕ್ಕಿಂತ ದೊಡ್ಡ ಜಿಹಾದ್ ನಿನ್ನ ಸ್ವಂತ ಆತ್ಮದೊಂದಿಗೆ ಮಾಡುವ ಜಿಹಾದ್ ಆಗಿದೆ.

178. ನೀನು ಯಾವಾಗಲೂ ನಿನ್ನ ಕಣ್ಣು ರೆಪ್ಪೆಗಳನ್ನು ಎತ್ತಿಡುವ ಅಭ್ಯಾಸ ಬಿಡು.

179. ನೀನು ನಗುಮುಖದವನಾಗಲು ಪ್ರಯತ್ನಿಸು; ಕೆರಳುವವನಾಗಬೇಡ.

180. ನೀನು ನಿನ್ನ ಸಮಯವನ್ನೂ ಅನ್ಯರ ಸಮಯವನ್ನೂ ಹಾಳುಮಾಡಬೇಡ. ನಿನಗೆ ಈಡೇರಿಸಲು ಸಾಧ್ಯವಿಲ್ಲದ ವಾಗ್ದಾನ ಮಾಡಬೇಡ.

181. ನೀನು ಸರಕಾರದ ಸಾಮಗ್ರಿಗಳನ್ನು ಕಾಪಾಡುವವನಾದರೆ ನಿನ್ನ ಬಳಿ ಇರುವ ಕೆಟ್ಟ ವಸ್ತುಗಳನ್ನು ಒಳ್ಳೆಯ ವಸ್ತುಗಳಿಗೆ ಬದಲಾಯಿಸಬಾರದು.

182. ನೀನು ನಿಯಮದ ಬಲದಿಂದ ಮೋಸ, ವಂಚನೆ ಮಾಡಬೇಡ.

183. ಹೇ ಮಹಿಳೆ, ನೀನು ಅಶ್ಲೀಲ ಸಾಹಿತ್ಯ ಓದಬೇಡ. ಓದಿದರೆ ನಿನ್ನ ಚಾರಿತ್ರ್ಯಕ್ಕೆ ಕೊಳಕು ತಗಲಬಹುದು.

* * * * *

## ಸಂಪಾದಕರಿಗೆ ಪತ್ರ

ಮಾನ್ಯರೇ,

ಜನವರಿ 2022ರ 'ಯುಗರಶ್ಮಿ' ಬಂದು ತಲಪಿದೆ. ಧನ್ಯವಾದಗಳು. ಮುಖಪುಟ ಚಿತ್ರ: 'ಬರ್ಲಿನ್‌ನ ಮಸ್ಜಿದ್ ಉಮರ್ ಖತ್ತಾಬ್' ತುಂಬಾ ಸೊಗಸಾಗಿದೆ. ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು ಚೆನ್ನಾಗಿವೆ.

ಆರೋಗ್ಯದಲ್ಲಿ 'ಶಕ್ತಿವರ್ಧಕ ಹಣ್ಣು ಖರ್ಜೂರ', ವಾಟ್ಸಾಪ್ ಸಂದೇಶಗಳು, ಜಿಲ್ಲಾ ಸಮ್ಮೇಳನದ ವಿವಿಧ ದೃಶ್ಯಗಳಿಂದ ಕಂಗೊಳಿಸುವ 'ಯುಗರಶ್ಮಿ' ಪತ್ರಿಕೆಗೆ ಧನ್ಯವಾದಗಳು.

ತಮ್ಮ ಸಹೋದರಿ

ಬಿ.ಎಸ್ ಶಾಂತಾಬಾಯಿ, ಪ್ರಧಾನ ಕಾರ್ಯದರ್ಶಿ,

ಕರ್ನಾಟಕ ಮಹಿಳಾ ಹಿಂದಿ ಸೇವಾ ಸಮಿತಿ, ಬೆಂಗಳೂರು.

## ರಷ್ಯಾ – ಉಕ್ರೇನ್ ಬಿಕ್ಕಟ್ಟಿಗೆ ಸಂಬಂಧಿಸಿ ಅಹ್ಮದಿಯಾ ಜಮಾಅತಿನ ಜಾಗತಿಕ ನೇತಾರ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹಿಬ್‌ರ ಹೇಳಿಕೆ:

ಇತಿಹಾಸದಿಂದ, ವಿಶೇಷವಾಗಿ 20ನೇ ಶತಮಾನದಲ್ಲಿ ಘಟಿಸಿದ ಎರಡು ವಿನಾಶಕಾರಿ ವಿಶ್ವ ಯುದ್ಧಗಳಿಂದ ಪಾಠಗಳನ್ನು ಕಲಿಯಬೇಕು ಎಂದು ನಾನು ಹಲವು ವರ್ಷಗಳಿಂದ ಲೋಕದ ಪ್ರಮುಖ ರಾಷ್ಟ್ರಗಳಿಗೆ ಮುನ್ನೆಚ್ಚರಿಕೆ ನೀಡುತ್ತಾ ಬಂದಿದ್ದೇನೆ. ಈ ನಿಟ್ಟಿನಲ್ಲಿ ಸಮಾಜದ ಎಲ್ಲ ಹಂತಗಳಲ್ಲೂ ನಿಜವಾದ ನ್ಯಾಯವನ್ನು ಸ್ಥಾಪಿಸುತ್ತಾ ವಿಶ್ವದ ಶಾಂತಿ ಮತ್ತು ಭದ್ರತೆಗೆ ಆದ್ಯತೆ ನೀಡುವ ಸಲುವಾಗಿ ತಮ್ಮ ರಾಷ್ಟೀಯ ಮತ್ತು ಸ್ವಾರ್ಥ ಹಿತಾಸಕ್ತಿಗಳನ್ನು ಬದಿಗಿಡಲು ಒತ್ತಾಯಿಸಿ ವಿವಿಧ ರಾಷ್ಟ್ರಗಳ ನಾಯಕರಿಗೆ ಪತ್ರಗಳನ್ನು ಬರೆದಿದ್ದೆ. ಅತ್ಯಂತ ದುಃಖಕರವಾಗಿ, ಈಗ ಉಕ್ರೇನ್‌ನಲ್ಲಿ ಯುದ್ಧ ಪ್ರಾರಂಭವಾಗಿದೆ ಹಾಗೂ ಪರಿಸ್ಥಿತಿಯು ಗಂಭೀರ ಮತ್ತು ಅನಿಶ್ಚಿತವಾಗಿದೆ. ಇದಲ್ಲದೆ, ರಷ್ಯಾ ಸರಕಾರದ ಮುಂದಿನ ಕ್ರಮಗಳಿಂದ ಹಾಗೂ ನ್ಯಾಟೋ ಮತ್ತು ಪ್ರಮುಖ ರಾಷ್ಟ್ರಗಳ ಪ್ರತಿಕ್ರಿಯೆಯಿಂದ ಇದು ಇನ್ನಷ್ಟು ಉಲ್ಬಣಗೊಳ್ಳುವ ಸಾಧ್ಯತೆಯಿದೆ. ಯಾವುದೇ ಉಲ್ಬಣಗೊಳ್ಳುವಿಕೆಯ ಪರಿಣಾಮ ಅತ್ಯಂತ ಭಯಾನಕ ಮತ್ತು ವಿನಾಶಕಾರಿಯಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಆದ್ದರಿಂದ ಇನ್ನಷ್ಟು ಯುದ್ಧ ಮತ್ತು ಹಿಂಸಾಚಾರವನ್ನು ತಪ್ಪಿಸಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡುವುದು ಈಗಿನ ಮುಖ್ಯ ಅಗತ್ಯವಾಗಿದೆ. ವಿಪತ್ತಿನ ಅಂಚಿನಿಂದ ಹಿಂದೆ ಸರಿಯಲು ಲೋಕಕ್ಕೆ ಇನ್ನೂ ಸಮಯವಿದೆ. ಆದ್ದರಿಂದ ಮಾನವೀಯತೆಯ ಸಲುವಾಗಿ ಸಂಘರ್ಷವನ್ನು ತಗ್ಗಿಸಲಿಕ್ಕಾಗಿ ಮತ್ತು ಶಾಂತಿಯುತ ಪರಿಹಾರಕ್ಕಾಗಿ ದಕ್ಷತೆಯಿಂದ ಎಲ್ಲ ಪ್ರಯತ್ನಗಳನ್ನು ಮಾಡುವ ಕಡೆಗೆ ಗಮನಹರಿಸಬೇಕೆಂದು ನಾನು ರಷ್ಯಾ, ನ್ಯಾಟೋ ಮತ್ತು ಎಲ್ಲ ಪ್ರಮುಖ ರಾಷ್ಟ್ರಗಳೊಡನೆ ನಿವೇದಿಸಿಕೊಳ್ಳುತ್ತೇನೆ.

ಮನುಕುಲದ ಯೋಗಕ್ಷೇಮಕ್ಕಾಗಿ ರಾಷ್ಟ್ರೀಯ ಹಿತಾಸಕ್ತಿಗಳನ್ನು ಮತ್ತು ಶತ್ರುತ್ವಗಳನ್ನು ಬದಿಗಿಟ್ಟು ಜಾಗತಿಕ ಶಾಂತಿಗೆ ಆದ್ಯತೆ ನೀಡುವ ಕಡೆಗೆ ಅಹ್ಮದಿಯಾ ಮುಸ್ಲಿಂ ಜಮಾಅತಿನ ನೇತಾರನೆಂಬ ನೆಲೆಯಲ್ಲಿ ನಾನು ಲೋಕದ ರಾಜಕೀಯ ನಾಯಕರ ಗಮನವನ್ನು ಸೆಳೆಯಬಲ್ಲೆ ಅಷ್ಟೆ. ಹೀಗಾಗಿ, ಲೋಕದ ಆಡಳಿತಗಾರರು ಜಾಣ್ಮೆ ಮತ್ತು ವಿವೇಕದಿಂದ ವರ್ತಿಸಬೇಕು ಹಾಗೂ ಮಾನವೀಯತೆಯ ಹಿತಕ್ಕಾಗಿ ಶ್ರಮಿಸಬೇಕು ಎಂಬುದು ನನ್ನ ಪ್ರಾಮಾಣಿಕವಾದ ಪ್ರಾರ್ಥನೆಯಾಗಿದೆ. ಯುದ್ಧದ ಯಾತನೆ, ರಕ್ತಪಾತ ಹಾಗೂ ವಿನಾಶದಿಂದ ಮನುಕುಲವನ್ನು ರಕ್ಷಿಸಲು ಜಾಗತಿಕ ನಾಯಕರು ಭಗೀರಥ ಪ್ರಯತ್ನಗಳನ್ನು ಈಗಲೂ ಮುಂದೆಯೂ ನಡೆಸಲಿ ಎಂದು ನಾನು ಪ್ರಾರ್ಥಿಸುತ್ತೇನೆ. ನಮ್ಮ ಮಕ್ಕಳ ಮತ್ತು ಮುಂದಿನ ಪೀಳಿಗೆಗಳ ಭವಿಷ್ಯವನ್ನು ನಾಶಮಾಡುವ ಕ್ರಮಗಳನ್ನು ಪ್ರಮುಖ ರಾಷ್ಟ್ರಗಳು ಮತ್ತು ಅವುಗಳ ಸರ್ಕಾರಗಳು ಕೈಗೆತ್ತಿಕೊಳ್ಳದಿರಲಿ ಎಂದು ನಾನು ಮನಸ್ಸಾರೆ ಪ್ರಾರ್ಥಿಸುತ್ತೇನೆ. ಬದಲಿಗೆ, ಅವುಗಳ ಪ್ರತಿ ಪ್ರಯತ್ನ ಮತ್ತು ಪ್ರೇರಣೆಯು ನಮ್ಮ ಮುಂದಿನ ಪೀಳಿಗೆಗಳಿಗಾಗಿ ಶಾಂತಿ ಮತ್ತು ಸಮೃದ್ಧಿಯ ಜಗತ್ತನ್ನು ಬಿಟ್ಟು ಹೋಗುವಂತಾಗಿರಬೇಕು.

ಲೋಕದ ಶಾಂತಿ ಮತ್ತು ಭದ್ರತೆಯನ್ನು ಖಾತರಿಪಡಿಸಲು ಸಮಯದ ಸಂದಿಗ್ಧತೆ ಮತ್ತು ಮೌಲ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ತಮ್ಮ ಮಹತ್ವಪೂರ್ಣ ಹೊಣೆಗಾರಿಕೆಗಳನ್ನು ಜಾಗತಿಕ ನಾಯಕರು ಅರಿತು ನಡೆದುಕೊಳ್ಳುವವರಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಸರ್ವಶಕ್ತನಾದ ಅಲ್ಲಾಹನು ಎಲ್ಲ ಮುಗ್ಧ ಮತ್ತು ನಿರಾಶ್ರಿತ ಜನರನ್ನು ರಕ್ಷಿಸಲಿ ಹಾಗೂ ಲೋಕದಲ್ಲಿ ನಿಜವಾದ ಹಾಗೂ ಶಾಶ್ವತವಾದ ಶಾಂತಿ ಸ್ಥಾಪಿತವಾಗಲಿ.

**ಮಿರ್ಝಾ ಮಸ್ರೂರ್ ಅಹ್ಮದ್, ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ನೇತಾರ**

(ಪತ್ರಿಕಾ ಪ್ರಕಟನೆ: 24–2–2022)

## ನಮ್ಮ ಜಿಹಾದ್

“ನಮ್ಮ ಜಿಹಾದ್ ಖಡ್ಗ, ಕೋವಿ ಅಥವಾ ಬಾಂಬಿನ ಜಿಹಾದ್ ಅಲ್ಲ. ನಮ್ಮ ಜಿಹಾದ್ ಕ್ರೌರ್ಯ, ಮೃಗೀಯ ಮತ್ತು ಅನ್ಯಾಯದ ಜಿಹಾದ್ ಅಲ್ಲ. ಬದಲು, ನಮ್ಮ ಜಿಹಾದ್ ಪ್ರೀತಿ, ದಯೆ ಮತ್ತು ಅನುಕಂಪದ ಜಿಹಾದ್ ಆಗಿದೆ. ನಮ್ಮ ಜಿಹಾದ್ ಸಹನೆ, ನ್ಯಾಯ ಮತ್ತು ಮಾನವ ಸಹಾನುಭೂತಿಯ ಜಿಹಾದ್ ಆಗಿದೆ. ನಮ್ಮ ಜಿಹಾದ್ ಸರ್ವಶಕ್ತನಾದ ದೇವನ ಹಕ್ಕುಗಳನ್ನು ಮತ್ತು ಅವನ ಸೃಷ್ಟಿಗಳ ಹಕ್ಕುಗಳನ್ನು ಈಡೇರಿಸುವ ಜಿಹಾದ್ ಆಗಿದೆ.”

**– ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್**

**ಅಹ್ಮದಿಯಾ ಜಮಾಅತಿನ ಪಂಚಮ ಖಲೀಫ**

(ವಾಟ್ಸಾಪ್ ಸಂದೇಶಗಳು)

## Ahmadi woman awarded 'Nari Shakti' award by President of India

President Kovind presented Nari Shakti Puraskar to Nasira Akhter for grassroot innovation in environmental conservation. Hailing from Kulgam, Jammu and Kashmir, she developed a herb that converts polythene to ashes, thereby making polythene biodegradable.



## ಸಮಯವಿದ್ದರೆ ಓದಿ.....!

ಸಂಗ್ರಹ:- ನಂಜುಂಡಸ್ವಾಮಿ ಎಂ ಎಸ್

ಲತಾ ಮಂಗೇಶ್ಕರ್ ಅವರ ಕೊನೆಯ ಮಾತುಗಳು.
ಈ ಪ್ರಪಂಚದಲ್ಲಿ ಸಾವಿಗಿಂತ ನಿಜವಾದದ್ದು ಮತ್ತೊಂದಿಲ್ಲ. !
ವಿಶ್ವದ ಅತ್ಯಂತ ದುಬಾರಿ ಬ್ರ್ಯಾಂಡ್ ಕಾರು ನನ್ನ ಗ್ಯಾರೇಜ್‌ನಲ್ಲಿ ನಿಂತಿದೆ.
ಆದರೆ ನಾನು ಗಾಲಿಕುರ್ಚಿಯಲ್ಲಿ ಕರೆದೊಯ್ಯುತ್ತೇನೆ.!
ಈ ಜಗತ್ತಿನಲ್ಲಿ ಎಲ್ಲಾ ರೀತಿಯ ವಿನ್ಯಾಸಗಳು ಮತ್ತು ಬಣ್ಣಗಳು, ಬೆಲೆಬಾಳುವ ಬಟ್ಟೆಗಳು, ದುಬಾರಿ ಶೂಗಳು, ದುಬಾರಿ ಉತ್ಪನ್ನಗಳು ಎಲ್ಲವೂ ನನ್ನ ಮನೆಯಲ್ಲಿವೆ. ಆದರೆ ನಾನು ಆಸ್ಪತ್ರೆ ಒದಗಿಸಿದ ಚಿಕ್ಕ ಕೋಣೆಯಲ್ಲಿದ್ದೇನೆ.!
ನನ್ನ ಬ್ಯಾಂಕ್ ಖಾತೆಯಲ್ಲಿ ಸಾಕಷ್ಟು ಹಣವಿದೆ ಆದರೆ ಏನೂ ಪ್ರಯೋಜನವಾಗಿಲ್ಲ.
ನನ್ನ ಮನೆ ಕೋಟೆಯಂತಿದೆ ಆದರೆ ನಾನು ಆಸ್ಪತ್ರೆಯಲ್ಲಿ ಸಣ್ಣ ಹಾಸಿಗೆಯಲ್ಲಿ ಮಲಗಿದ್ದೇನೆ.
ನಾನು ಈ ಜಗತ್ತಿನ ಪಂಚತಾರಾ ಹೋಟೆಲ್‌ಗಳಿಗೆ ಪ್ರಯಾಣಿಸುತ್ತಲೇ ಇದ್ದೆ.
ಆದರೆ ಆಸ್ಪತ್ರೆಯ ಲ್ಯಾಬ್‌ನಲ್ಲಿರುವ ಮತ್ತೊಂದು ಲ್ಯಾಬ್‌ಗೆ ನನ್ನನ್ನು ವರ್ಗಾಯಿಸಲಾಗುತ್ತಿದೆ.!
ಆ ದಿನ 7 ಕೇಶ ವಿನ್ಯಾಸಕರು ನನಗೆ ಪ್ರತಿದಿನ ಮೇಕಪ್ ಮಾಡುತ್ತಾರೆ. ಆದರೆ ಇಂದು ನನ್ನ ತಲೆಯಲ್ಲಿ ಕೂದಲಿಲ್ಲ.
ನಾನು ಪ್ರಪಂಚದಾದ್ಯಂತದ ಅನೇಕ ರೀತಿಯ ಹೈ ಸ್ಟಾರ್ ಹೋಟೆಲ್‌ಗಳಲ್ಲಿ ಊಟ ಮಾಡುತ್ತಿದ್ದೇನೆ. ಆದರೆ ಇಂದು ದಿನಕ್ಕೆ ಎರಡು ಮಾತ್ರೆ ಮತ್ತು ರಾತ್ರಿಯಲ್ಲಿ ಒಂದು ಹನಿ ಉಪ್ಪು. !
ನಾನು ಖಾಸಗಿ ಜೆಟ್‌ನಲ್ಲಿ ಜಗತ್ತನ್ನು ಸುತ್ತುತ್ತಿದ್ದೆ. ಆದರೆ ಇಂದು ಆಸ್ಪತ್ರೆಯ ವರಾಂಡಕ್ಕೆ ಹೋಗಲು ಇಬ್ಬರು ಸಹಾಯ ಮಾಡುತ್ತಾರೆ. ?
ಎಲ್ಲಾ ಸೌಕರ್ಯಗಳು ನನಗೆ ಸಹಾಯ ಮಾಡಲಿಲ್ಲ. ಯಾವುದೇ ರೀತಿಯಲ್ಲಿ ಸಾಂತ್ವನ ನೀಡುವುದಿಲ್ಲ. ! ಆದರೆ



ಮತ್ತು ಕೆಲವು ಪ್ರೀತಿಪಾತ್ರರ ಮುಖಗಳು
ಅವರ ಪೂಜೆಯೂ ನನ್ನನ್ನು ಬದುಕಿಸುತ್ತದೆ. !
ತುಂಬಾ ಸಹಿಸಿಕೊಳ್ಳುವ ಜೀವನ...
ಯಾರಿಗೂ ಸಹಾಯ ಮಾಡುವುದಿಲ್ಲ...
ಕೇವಲ ಹಣದ ಬಲ ಹೊಂದಿರುವ ಜನರನ್ನು ಮೌಲ್ಯೀಕರಿಸುವುದನ್ನು ತಪ್ಪಿಸಿ
...
ಒಳ್ಳೆಯ ಮನುಷ್ಯರನ್ನು ಪ್ರೀತಿಸಿ..

**15ನೇ ಪುಟದಿಂದ**


ಹೊರಗೆ ಕಳೆಯಬೇಕಾಗಿದೆ. ಹಾಗೆ ಪುರುಷರ ಕಾರ್ಯಕ್ಷೇತ್ರ ರಸ್ತೆಗಳೂ ಸಾರ್ವಜನಿಕ ಸ್ಥಳಗಳೂ ಆಗಿರುವಾಗ ಸ್ತ್ರೀಯರದು ಸ್ವಂತ ಮನೆಯಾಗಿದೆ. ಇಸ್ಲಾಂ ಧರ್ಮ ಪ್ರತಿಯೋರ್ವರಿಗೆ ಅವರವರ ಕಾರ್ಯಕ್ಷೇತ್ರಗಳಲ್ಲಿ ಸ್ವಾತಂತ್ರ್ಯ ನೀಡಿ, ಇತರರ ಕಾರ್ಯಕ್ಷೇತ್ರಗಳಲ್ಲಿ ಆ ಸ್ವಾತಂತ್ರ್ಯಕ್ಕೆ ಒಂದು ಪರಿಮಿತಿಯನ್ನು ನಿಶ್ಚಯಿಸಿದೆ. ಪುರುಷರು ಅನ್ಯಗೃಹವನ್ನು ಪ್ರವೇಶಿಸುವಾಗ ಆ ಮನೆಯವರೊಡನೆ ಪ್ರಥಮವಾಗಿ ಒಪ್ಪಿಗೆಯನ್ನು ಪಡೆಯಬೇಕೆಂದು ವಿಧಿಸಿದೆ. ಏಕೆಂದರೆ ಅದು ಸ್ತ್ರೀಯರ ಸ್ವಾತಂತ್ರ್ಯರಂಗವಾಗಿದೆ. ಆದರೆ ಸ್ತ್ರೀಯರು ಹೊರಗೆ ಸಂಚರಿಸಲು ಪುರುಷರ ಒಪ್ಪಿಗೆಯನ್ನು ಪಡೆಯಬೇಕೆಂಬ ನಿಬಂಧನೆ ಇಲ್ಲ. ಆದರೂ ಮೇಲೆ ಪ್ರಸ್ತಾಪಿಸಿದ ರೀತಿಯ ಮುಂಜಾಗ್ರತೆಯನ್ನು ಕೈಗೊಳ್ಳಲು ವಿಧಿಸಿದೆ. ಸ್ತ್ರೀಯರಿಗೆ ರಸ್ತೆಗಳಲ್ಲೂ ಸಾರ್ವನಿಕ ಸ್ಥಳಗಳಲ್ಲೂ ನ್ಯಾಯೋಚಿತ ಆವಶ್ಯಕತೆ ಇರಬಹುದು. ಆದುದರಿಂದ ಪುರುಷರ ಸಮ್ಮತಿ ಇಲ್ಲದೆ ಅವರು ಹೊರಗೆ ಸಂಚರಿಸಬಹುದಾಗಿದೆ. ಆದರೆ ಪುರುಷರಿಗೆ ಅನ್ಯಗೃಹದೊಳಗೆ, ಒಳಗಿರುವವರ ಅನುಮತಿ ಇಲ್ಲದೆ ನ್ಯಾಯೋಚಿತವಾದ ಒಂದು ಆವಶ್ಯಕತೆ ಉಂಟಾಗಬಾರದುದರಿಂದ, ಅವರ ಸಮ್ಮತಿ ಪಡೆಯದೆ ಒಳಗೆ ಪ್ರವೇಶಿಸಬಾರದೆಂಬ ಒಂದು ನಿಬಂಧನೆಯನ್ನು ಇಸ್ಲಾಂ ನಿರ್ದೇಶಿಸಿರುತ್ತದೆ. ಒಟ್ಟಾರೆ, ಪರದಾ ಸಂಪ್ರದಾಯಕ್ಕೆ ಸಂಬಂಧಿಸಿದ ಈ ನಿಬಂಧನೆ ಸ್ತ್ರೀಗಾಗಲೀ ಪುರುಷನಿಗಾಗಲೀ ಅಪಮಾನಕರವೆಂಬ ಪ್ರಶ್ನೆಗೆ ಅವಕಾಶವಿಲ್ಲ. ಈ ಪರದಾ ಸಂಪ್ರದಾಯವಾದರೋ ಸದಾಚಾರ ಪರವಾದ ಸುಧಾರಣೆಗಿರುವ ಒಂದು ಪರಿಪೂರ್ಣ ಪದ್ಧತಿಯಾಗಿದೆ. ♦


## (ವಾಟ್ಸಾಪ್ ಸಂದೇಶಗಳು)


ಪ್ರಮುಖ ಧರ್ಮಗಳಲ್ಲಿ ಹಿಜಾಬಿನ ವ್ಯಾಖ್ಯಾನ
ಕುರ್‌ಆನ್
"ಸತ್ಯವಿಶ್ವಾಸಿನಿಯರೊಡನೆ ಹೇಳಿರಿ – ಅವರು ತಮ್ಮ ದೃಷ್ಟಿಗಳನ್ನು ಕೆಳಗಿರಿಸಿ ಕೊಳ್ಳಲಿ ತಮ್ಮ ಗುಪ್ತಾಂಗಗಳನ್ನು ರಕ್ಷಿಸಿಕೊಳ್ಳಲಿ ಮತ್ತು ತಮ್ಮ ಶೃಂಗಾರಗಳನ್ನು ತೋರಿಸದಿರಲಿ (ಆದರೆ) ಸ್ವಯಂ ಪ್ರಕಟವಾಗುವಂತಹವುಗಳನ್ನು ಹೊರತು. ಮತ್ತು ತಮ್ಮ ಎದೆಯ ಮೇಲೆ ತಮ್ಮ ಮೇಲು ಹೊದಿಕೆಯ ಸೆರಗನ್ನು ಹಾಕಿಕೊಂಡಿರಲಿ."
ಪವಿತ್ರ ಕುರ್‌ಆನ್ 24:31
ಋಗ್ವೇದ
"ಓ ಹೆಣ್ಣೆ, ನೀನು ನಿನ್ನ ನೋಟವನ್ನು ತಗ್ಗಿಸು, ಅನ್ಯ ಪುರುಷರೊಂದಿಗೆ ದೃಷ್ಟಿಯನ್ನು ತಗ್ಗಿಸು. ನಿನ್ನ ಶರೀರವನ್ನು ಪೂರ್ಣ ಮುಚ್ಚಿಕೊ, ಸಂಸಾರದಲ್ಲಿ ನಿನ್ನ ಘನತೆಯು ತುಂಬಾ ಪ್ರಾಮುಖ್ಯತೆ ಹೊಂದಿದೆ."
ಋಗ್ವೇದ 8.33.19
ಬೈಬಲ್
"ಸ್ತ್ರೀಯು ಪ್ರಾರ್ಥಿಸುವಾಗ ಅಥವಾ ಪ್ರವಾದಿಸುವಾಗ ತನ್ನ ತಲೆಗೆ ಮುಸುಕನ್ನು ಹಾಕಿಕೊಂಡಿರಬೇಕು. ಆಕೆಯು ತನ್ನ ತಲೆಗೆ ಮುಸುಕು ಹಾಕಿಲ್ಲದಿದ್ದರೆ, ಅವಳಿಗೂ ತಲೆಯನ್ನು ಬೋಳಿಸಿಕೊಂಡಿರುವ ಸ್ತ್ರೀಗೂ ಯಾವ ವ್ಯತ್ಯಾಸವಿಲ್ಲ. ಸ್ತ್ರೀಯು ತನ್ನ ತಲೆಗೆ ಮುಸುಕು ಹಾಕಿಕೊಳ್ಳದಿದ್ದರೆ, ಆಕೆಯು ತನ್ನ ತಲೆಯನ್ನು ಬೋಳಿಸಿಕೊಳ್ಳಲಿ."
1.ಕೊರಿಂಥದವರಿಗೆ 11:5,6
@sathyasandesh
ಏಕ ದೇವ, ಏಕ ಸಂದೇಶ



ಭಗವದ್ಗೀತೆಯ ಸಾರ
NEWS ARROW
447
ನಿನಗೆ ಕರ್ಮ ಮಾಡುವುದರಲ್ಲಿ ಮಾತ್ರ ಅಧಿಕಾರವಿದೆ, ಅದರ ಫಲದಲ್ಲಿ ಇಲ್ಲ. ಆದ್ದರಿಂದ ಮಾಡಿದ ಕೆಲಸಕ್ಕೆ ಪ್ರತಿಫಲ ಪಡೆಯಲು ಬಯಸಬೇಡ ಮತ್ತು ಕರ್ಮ ಮಾಡದೇ ಇರಬೇಕೆಂಬ ಹಂಬಲ ನಿನ್ನಲ್ಲಿ ಉಂಟಾಗದಿರಲಿ.


ಭಗವದ್ಗೀತೆಯ ಸಾರ
NEWS ARROW
451
ನೀವು ನಿಮ್ಮ ಜೀವನದಲ್ಲಿ ಯಶಸ್ವಿಯಾಗಬೇಕೆಂದರೆ ಜ್ಞಾನ ಮತ್ತು ಶಿಸ್ತನ್ನು ಬೆಳೆಸಿಕೊಳ್ಳಲೇಬೇಕು. ಜ್ಞಾನ ಮತ್ತು ಶಿಸ್ತುಗಳು ನಿಮ್ಮನ್ನು ಅನಾವಶ್ಯಕ ಸಮಸ್ಯೆಗಳಿಂದ ರಕ್ಷಿಸುತ್ತವೆ.


ನಗ್ನಸತ್ಯ
ಶಾಲೆಗಳಿಗೆ ಅರೆ ಬೆತ್ತಲೆ, ಬಿಗಿಯುಡುಪು ಧರಿಸಿ ಬರುವವರಿಗೆ ಬಟ್ಟೆ ನೀಡಬೇಕಿದ್ದ ಧರ್ಮದವರು, ಇತರೆ ಹೆಣ್ಣು ಮಕ್ಕಳ ಬಟ್ಟೆ ಬಿಚ್ಚಿಸಲು ಹೋರಾಡುತ್ತಿರುವುದು ಧರ್ಮರಕ್ಷಣೆಯೇ?
ಎದೆಯನ್ನು ಮುಚ್ಚಿಕೊಳ್ಳಲು ನಮ್ಮ ಮುತ್ತಜ್ಜಿಗಳಿಂದ ತೆರಿಗೆ ಕಟ್ಟಿಸಿಕೊಳ್ಳುತ್ತಿದ್ದಂಥ ಧರ್ಮ ರಕ್ಷಕರಿಂದ ಏನು ನಿರೀಕ್ಷಿಸಲು ಸಾಧ್ಯ?
– ಶ್ರೀ ಸಿದ್ಧರಾಮಾನಂದ ಸ್ವಾಮೀಜಿ
ಕನಕ ಗುರುಪೀಠ, ತಿಂಥಣಿಬ್ರಿಜ್


ಸುದ್ದಿದಿನ
ಹಿಂದೂರಾಷ್ಟ್ರ ಒಂದು ವೇಳೆ ನಿಜಗೊಂಡ ಪಕ್ಷದಲ್ಲಿ ಅದು ಈ ದೇಶದ ಪಾಲಿಗೆ ಅತಿದೊಡ್ಡ ವಿಕೋಪವಾಗಲಿದೆ. ಹಿಂದುಗಳು ಏನೇ ಹೇಳಲಿ ಹಿಂದುತ್ವ ಎಂಬುದು ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತೆಗೆ ದೊಡ್ಡ ಕಂಟಕ. ಹಾಗಾಗಿಯೇ ಅದು ಪ್ರಜಾಪ್ರಭುತ್ವದ ಜೊತೆ ಹೊಂದಿಕೊಳ್ಳುವುದಿಲ್ಲ. ಯಾವುದೇ ಬೆಲೆ ತೆತ್ತಾದರೂ ಸರಿ (ಸಾವರ್ಕರ್ ಹೇಳುವ) ಹಿಂದೂ ರಾಷ್ಟ್ರ ಬರುವುದನ್ನು ತಡೆಗಟ್ಟಬೇಕು.
suddidina.com
~ ಡಾ.ಬಿ.ಆರ್.ಅಂಬೇಡ್ಕರ್
(ಪಾಕಿಸ್ತಾನ ಅಥವಾ ಭಾರತದ ವಿಭಜನೆ, ಭಾಗ V, ಚಾಪ್ಟರ್ XIII)

**ನಿಧನ ವಾರ್ತೆಗಳು**




## ಜನಾಬ್ ಮೌಲಾನಾ ಮುಬಾರಕ್ ನಧೀರ್ ಸಾಹಿಬ್

**ಕೆನಡ:** ಜ। ಮೌ। ಮುಬಾರಕ್ ನಧೀರ್ ಸಾಹಿಬ್ ಮಾರ್ಚ್ 8ರಂದು ತನ್ನ 87ನೇ ವಯಸ್ಸಿನಲ್ಲಿ ನಿಧನರಾದರು. ("ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.") ಅವರು ಕೆನಡದ ಮುಬಲ್ಲಿಗ್ ಇನ್‌ಚಾರ್ಜ್ ಮತ್ತು ಕೆನಡ ಜಾಮಿಅ ಅಹ್ಮದಿಯಾದ ಪ್ರಿನ್ಸಿಪಲ್ ಆಗಿದ್ದರು. ಅವರು ಜಮಾಅತಿನ ಮುಬಲ್ಲಿಗ್ ಮೌಲಾನಾ ನಧೀರ್ ಅಹ್ಮದ್ ಅಲಿ ಸಾಹಿಬರ ಎರಡನೇ ಮಗನಾಗಿದ್ದರು.

ಅವರು ತನ್ನ 11ನೇ ವಯಸ್ಸಿನಲ್ಲಿ ತಂದೆಯೊಂದಿಗೆ 3 ತಿಂಗಳ ದೀರ್ಘ ಯಾತ್ರೆಯಲ್ಲಿ ಸಿಯ್ರಾಲಿಯೋನ್‌ಗೆ ಹಡಗಿನಲ್ಲಿ ಪ್ರಯಾಣಕ್ಕೆ ಹೊರಟಾಗ, ಅವರಿಗೆ ತೀವ್ರವಾದ ಅಸ್ವಸ್ಥತೆ ಇತ್ತು. ಯಾತ್ರೆಯ ಮಧ್ಯೆ ಮರಣ ಸಂಭವಿಸಿದರೆ ಮೃತದೇಹವನ್ನು ಸಮುದ್ರಕ್ಕೆ ಎಸೆಯುವ ಶರತ್ತಿನಲ್ಲಿ ನಿಮಗೆ ಪ್ರಯಾಣಕ್ಕೆ ಅನುಮತಿ ನೀಡಲಾಗುವುದೆಂದು ಹಡಗಿನ ಕ್ಯಾಪ್ಟನ್ ಮುಬಾರಕ್ ಸಾಹಿಬರ ತಂದೆಗೆ ಹೇಳಿದರು. ಶರತ್ತಿಗೆ ಸಹಿ ಹಾಕಿದ ತಂದೆ ಹೇಳಿದರು – ಅಲ್ಲಾಹನ ಅನುಗ್ರಹದಿಂದ ಇವನಿಗೆ ಏನೂ ಆಗಲಿಕ್ಕಿಲ್ಲ. ಆ 11 ವಯಸ್ಸು ಪ್ರಾಯದ ಹುಡುಗ ಬದುಕಿ ಉಳಿದು 87ನೇ ವಯಸ್ಸಿನಲ್ಲಿ ಮೃತರಾದರು.

1963ರಲ್ಲಿ ಅವರು ಜಮಾಅತಿನ ಸೇವೆ ಆರಂಭಿಸಿದರು. 1988ರಲ್ಲಿ ಮುಬಲ್ಲಿಗ್ ಆಗಿ ಅವರನ್ನು ಕೆನಡಕ್ಕೆ ಕಳುಹಿಸಲಾಯಿತು. 2003ರಲ್ಲಿ ಕೆನಡದ ಜಾಮಿಅವನ್ನು ತೆರೆದಾಗ ಮುಬಾರಕ್ ಸಾಹಿಬರು ಅದರ ಪ್ರಿನ್ಸಿಪಲ್ ಆದರು. 2009ರ ತನಕ ಅಲ್ಲಿ ಅವರು ಸೇವೆ ಸಲ್ಲಿಸಿದರು. 2010ರಿಂದ 2018ರ ತನಕ ಅವರು ಕೆನಡದ ಮಿಶನರಿ ಇನ್‌ಚಾರ್ಜ್ ಆಗಿ ಸೇವೆ ಸಲ್ಲಿಸಿದರು. ಅವರಿಗೆ ಕೇಂದ್ರ ಪ್ರತಿನಿಧಿ ಎಂಬ ನೆಲೆಯಲ್ಲಿ ಅನೇಕ ಜಲ್ಸಗಳಲ್ಲಿ ಮತ್ತು ಪ್ರೋಗ್ರಾಮುಗಳಲ್ಲಿ ಭಾಗವಹಿಸಲು ಸೌಭಾಗ್ಯ ಲಭಿಸಿತ್ತು. ಅವರ ಭಾಷಣಗಳು ಬಹಳ ಪ್ರಭಾವಶಾಲಿಯಾಗಿದ್ದವು. ಅವರ ತಬ್ಲೀಗ್‌ಪರವಾದ ಲೇಖನಗಳು ಕೆನಡದ ನ್ಯಾಶನಲ್ ನ್ಯೂಸ್, ಟೊರೊಂಟೋ ಸ್ಟಾರ್ ಮತ್ತು ಆಟ್ವಾಸ್ವೇರುನ್ ಮುಂತಾದ ವಾರ್ತಾ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತಿದ್ದವು.

ಅವರು ಅನೇಕ ಗುಣ ವೈಶಿಷ್ಟ್ಯಗಳನ್ನು ಹೊಂದಿದ್ದರು. ಒಬ್ಬ ಮಾದರಿ ವಖ್ಫೇ ಝಿಂದಗಿಯಾಗಿದ್ದರು ಮತ್ತು ಮುರಬ್ಬಿಗಳಿಗೆ ವಿಶೇಷವಾಗಿ ಒಂದು ಮಾದರಿಯಾಗಿದ್ದರು. ದಿವಂಗತರು ಪತ್ನಿ, ಮೂವರು ಪುತ್ರರು ಮತ್ತು ಇಬ್ಬರು ಪುತ್ರಿಯರನ್ನು ಅಗಲಿರುವರು. ಅಲ್ಲಾಹನು ದಿವಂಗತರಿಗೆ ಮಗ್ಫಿರತ್ ಮತ್ತು ಜನ್ನತನ್ನು ದಯಪಾಲಿಸಲಿ – ಆಮೀನ್.

===================================================================



## ಜನಾಬ್ ಫಹೀಮ್ ಅಹ್ಮದ್ ನೂರ್ ಸಾಹಿಬ್

**ಗುಲ್ಬರ್ಗ:** ಜ। ಫಹೀಮ್ ಅಹ್ಮದ್ ನೂರ್ ಸಾಹಿಬ್ ಅಡ್ವಕೇಟ್ 28–5–2021 ರಂದು ತನ್ನ 65ನೇ ವರ್ಷ ಪ್ರಾಯದಲ್ಲಿ ನಿಧನರಾದರು. ("ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.")

ಅವರು ರಾಯಚೂರು ಜಿಲ್ಲೆಯ ಅಮೀರ್ ಮತ್ತು ದೇವದುರ್ಗ ಜಮಾಅತಿನ ಸದರ್ ಆಗಿದ್ದರು. ಅವರು ಬೆಂಗಳೂರು ಮತ್ತು ಮಂಗಳೂರಿನಲ್ಲಿ ಪಬ್ಲಿಕ್ ಪ್ರೊಸಿಕ್ಯೂಟರ್ ಆಗಿ ಸೇವೆ ಸಲ್ಲಿಸಿದ್ದಾರೆ.

ಅವರು ಬಡವರಿಗೆ ಸಹಾಯ ಮಾಡುತ್ತಿದ್ದರು. ಅನೇಕ ಬಡವರಿಗೆ ಸರಕಾರಿ ಉದ್ಯೋಗಗಳನ್ನು ಒದಗಿಸಿಕೊಟ್ಟಿದ್ದರು. ದೇವದುರ್ಗದಲ್ಲಿ ಹಳೆಯ ಮಸೀದಿಯ ಸ್ಥಳದಲ್ಲಿ ಹೊಸ ಮಸೀದಿ ನಿರ್ಮಿಸಲು ತುಂಬಾ ಪರಿಶ್ರಮಿಸಿದರು. ದೇವದುರ್ಗ ಜಮಾಅತಿಗೆ ಖಬರಸ್ಥಾನಕ್ಕೆ ತನ್ನ ಜಮೀನು ನೀಡಲು ವಸೀಯ್ಯತ್ ಮಾಡಿದರು.

ಅವರು "ಯುಗರಶ್ಮಿ"ಯ ಹಿತೈಷಿಯೂ ಆಗಿದ್ದರು. ಅವರು ಪತ್ನಿ, ಇಬ್ಬರು ಪುತ್ರಿಯರು ಮತ್ತು ಅನೇಕ ಬಂಧು ಮಿತ್ರಾದಿಗಳನ್ನು ಅಗಲಿದ್ದಾರೆ.

ಅಲ್ಲಾಹನು ಅವರಿಗೆ ಮಗ್ಫಿರತನ್ನೂ ಜನ್ನತನ್ನೂ ಕರುಣಿಸಲಿ – ಆಮೀನ್.

### ಯುಗರಶ್ಮಿಗೆ ಧನಸಹಾಯ ನೀಡಿದ ಉದಾರಮತಿಗಳು

**1. ಜ। ಎಂ.ಇ. ಮುಹಮ್ಮದಲಿ ಸಾಹಿಬ್, ಮೈಸೂರು. ರೂ. 1000/–**

**2. ಜ। ಕೆ.ಕೆ. ಬದ್ರುದ್ದೀನ್ ಸಾಹಿಬ್, ಬೆಂಗಳೂರು. ರೂ. 1000/–**

# ಶಿವಾಜಿ ಬಗ್ಗೆ ನಿಮಗೆಷ್ಟು ಗೊತ್ತಿದೆ?

■ ತನಿಯ

ದಲಿತರು ಮತ್ತು ಮುಸ್ಲಿಮರು ಒಂದಾಗಿ ಶಿವಾಜಿಯ ನೇತೃತ್ವದಲ್ಲಿ ದಿಲ್ಲಿಯ ಮೊಗಲರನ್ನು ಎದುರಿಸಿ ಗೆದ್ದರು. ಮೊಗಲರನ್ನು ಎದುರಿಸುವ ವೇಳೆ ಶಿವಾಜಿ ಮತ್ತು ಆತನ ಸೇನೆಯನ್ನು ವಂಚಿಸಿದವರು ಯಾರು? ಉತ್ತರ ಕೆಳಗಿದೆ.

* ಶಿವಾಜಿ ಮರಾಠ ಮೇಲ್ಜಾತಿಯಿಂದ ಬಂದವನಲ್ಲ. ಭೋಸಲೆ ಎನ್ನುವ ಕೆಳ ಜಾತಿಗೆ ಸೇರಿದ ನಾಯಕ. ಆದುದರಿಂದಲೇ ಮೇಲ್‌ಜಾತಿಯ ಜನರಿಗೆ ಶಿವಾಜಿಯ ಮೇಲೆ ಅಸಮಾಧಾನವಿತ್ತು.

* ಶಿವಾಜಿ ಮತ್ತು ಅಫ್ಝಲ್ ಖಾನ್ ಬೇಟಿಯಾಗುವ ಸಂದರ್ಭದಲ್ಲಿ ಶಿವಾಜಿಯ ನಂಬಿಕಸ್ಥ ಅಂಗರಕ್ಷಕರಲ್ಲಿ ಓರ್ವನ ಹೆಸರು ಇಬ್ರಾಹೀಂ ಖಾನ್. ಇನ್ನೋರ್ವ ದಲಿತ ಸೇನಾನಿ ಜೀವಾ ಮಹಾರ್, ಅಫ್ಝಲ್ ಖಾನ್‌ನ ಅಂಗರಕ್ಷಕನ ಹೆಸರು ಕೃಷ್ಣಜೀ ಭಾಸ್ಕರ್ ಕುಲಕರ್ಣಿ. ಕುಲಕರ್ಣಿ ಹಿಂದುಗಡೆಯಿಂದ ಶಿವಾಜಿಯ ಮೇಲೆ ದಾಳಿ ನಡೆಸಿದಾಗ ಕುಲಕರ್ಣಿಯನ್ನು ಕೊಂದಿರುವುದು ಜೀವಾ ಮಹಾರ್ ಎನ್ನುವ ದಲಿತ ಅಂಗರಕ್ಷಕ. ಇದನ್ನೇ ಮುಂದಿಟ್ಟು ಸಂತ ತುಕಾರಾಮರು ತಮ್ಮ ಹಾಡಿನಲ್ಲಿ ಕೇಳುತ್ತಾರೆ "ಜೀವಾಜಿ ಇದ್ದುದಕ್ಕೆ ಶಿವಾಜಿ ಬದುಕಿದ"

* ಇಬ್ರಾಹೀಂ ಖಾನ್, ದೌಲತ್ ಖಾನ್, ಸಿದ್ದಿ ವಾಹ್ ವಾಹ್, ದಾರ್ಯ ಸಾರಂಗ್ ಮೊದಲಾದ ಮುಸ್ಲಿಮ್ ಸೇನಾನಿಗಳು ಶಿವಾಜಿಯ ದಂಡನಾಯಕರಾಗಿದ್ದರೆ, ಶಿವಾಜಿಯ ವಿರುದ್ಧ ಮೊಗಲರ ಸೇನೆಯ ದಂಡನಾಯಕನ ಹೆಸರು ರಾಜ ಜಯಸಿಂಹ. ಈತ ರಜಪೂತ ಹಿಂದೂ ಆಗಿದ್ದ.

* ಮೊಗಲರ ಪರವಾಗಿ ಸೇನೆಯಲ್ಲಿ ಮರಾಠರು, ಜಾಟರು, ರಜಪೂತರು ಇದ್ದರು. ರಾಜ ರಾಯ ಸಿಂಗ್, ಸುಜನ್ ಸಿಂಗ್, ಹರಿಬಾನ್ ಸಿಂಗ್, ಉದಯಬಾನ್ ಗೌರ, ಶೇರ್ ಸಿಂಹ್ ರಾಥೋಡ್, ಚತುರ್ಭುಜ ಚೌಹಾನ್, ಮಿತ್ರಸೇನ, ಬಾಜಿರಾವ್ ಚಂದ್ರರಾವ್ ಇವರೆಲ್ಲ ಮೊಗಲರ ಸೇನಾನಿಗಳು, ಶಿವಾಜಿಯ ವಿರುದ್ಧ ಯುದ್ಧ ಮಾಡಿದರು.

ಇದೇ ಸಂದರ್ಭದಲ್ಲಿ ದಲಿತರು ಮತ್ತು ಮುಸ್ಲಿಮ್ ದಂಡ ನಾಯಕರು ಶಿವಾಜಿಯ ಪರ ನಿಂತು ಮೊಗಲರ ವಿರುದ್ಧ ಹೋರಾಡಿದರು.

* ರಾಜಾ ಜಯಸಿಂಹ ನೇತೃತ್ವದಲ್ಲಿ ಮೊಗಲರ ಪಡೆ ಶಿವಾಜಿಯ ಮೇಲೆ ಯುದ್ಧ ಹೇರಿದಾಗ, ಮೊಗಲರ ಗೆಲುವಿಗಾಗಿ, ಶಿವಾಜಿಯ ಸೋಲಿಗಾಗಿ ಬ್ರಾಹ್ಮಣರು ಕೋಟಿ ಚಂಡಿ ಹವನ ಮಾಡಿದರು. ಕಾಮನಾರ್ಥಕ್ಕಾಗಿ ಬಗಲಾಮುಖಿ ಕಾಳರಾತ್ರಿ ಪ್ರೀತ್ಯರ್ಥ ಜಪ ಮಾಡಲಾಯಿತು. ನಾನೂರು ಬ್ರಾಹ್ಮಣರು ಇದರಲ್ಲಿ ಭಾಗವಹಿಸಿದರು. ಮೂರು ತಿಂಗಳ ಕಾಲ ಈ ಅನುಷ್ಠಾನ ನಡೆಯಿತು. ಶಿವಾಜಿಯ ಸೋಲಿಗಾಗಿ ಬ್ರಾಹ್ಮಣರಿಗೆ ಭಾರೀ ದಕ್ಷಿಣೆಯನ್ನು ರಾಜಾ ಜಹಸಿಂಹ ನೀಡಿದ. ಇದೇ ಯುದ್ಧದಲ್ಲಿ ಶಿವಾಜಿ ಮತ್ತು ಅವನ ಮಗ ಸಾಂಭಾಜಿ ಮೊಗಲರಿಗೆ ಸೆರೆ ಸಿಕ್ಕರು.

* ಶಿವಾಜಿ ರಾಜನಾಗಿ ಆಳ್ವಿಕೆ ಮಾಡಿದ್ದು ಕೇವಲ ಐದು ವರ್ಷ ಮಾತ್ರ. ಶಿವಾಜಿಗೆ ಪಟ್ಟಾಭಿಷೇಕ ಮಾಡಲು ಬ್ರಾಹ್ಮಣರು ಒಪ್ಪಲಿಲ್ಲ. ಆದುದರಿಂದ ಕಾಶಿಯಿಂದ ಗಾಗಾಭಟ್ಟ ಎಂಬವನನ್ನು ಕರೆಸಿಕೊಳ್ಳಬೇಕಾಯಿತು, ಶಿವಾಜಿ ಕೆಳಜಾತಿಯಾಗಿರುವುದರಿಂದ ಈತ ಶಿವಾಜಿಯನ್ನು ವೈದಿಕ ಪದ್ಧತಿಯಂತೆ ಶುದ್ಧೀಕರಿಸುತ್ತಾನೆ. ಉಪನಯನ ಮಾಡುತ್ತಾನೆ. ಆತನಿಗೆ ಮರುಮದುವೆ ಮಾಡುತ್ತಾನೆ. ಆ ಬಳಿಕ ಶಿವಾಜಿಗೆ ಪಟ್ಟಾಭಿಷೇಕ ಮಾಡುತ್ತಾನೆ. ಗಾಗಾಭಟ್ಟನಿಗೆ ನೀಡಿದ ದಕ್ಷಿಣೆಯನ್ನು ಹೊರಲು ಹಲವು ಗಾಡಿಗಳೇ ಬೇಕಾಯಿತಂತೆ. ಪಟ್ಟಾಭಿಷೇಕ ಸಂದರ್ಭದಲ್ಲಿ ಗಾಗಾ ಭಟ್ಟ ಶಿವಾಜಿಗೆ ತನ್ನ ಎಡ ಕಾಲಿನ ಹೆಬ್ಬೆಟ್ಟಿನಲ್ಲಿ ತಿಲಕ ಇಟ್ಟ ಎಂದು ಭಾಪುಲೆ ತಮ್ಮ ಕೃತಿಯಲ್ಲಿ ಹೇಳುತ್ತಾರೆ.

* ಇಷ್ಟಾದರೂ ಶಿವಾಜಿಯ ಪಟ್ಟಾಭಿಷೇಕ ಯಶಸ್ವಿಯಾಗಲಿಲ್ಲ. ಪಟ್ಟಾಭಿಷೇಕದ ಬಗ್ಗೆ ಮತ್ತೆ ಆಕ್ಷೇಪ ವ್ಯಕ್ತವಾಯಿತು. ಮತ್ತೆ ಮೂರೇ ತಿಂಗಳಲ್ಲಿ ಹೊಸದಾಗಿ ಮಗದೊಮ್ಮೆ ಆತನಿಗೆ ಪಟ್ಟಾಭಿಷೇಕ ಮಾಡಲಾಯಿತು.

* ಕೆಳ ಜಾತಿ ಎನ್ನುವ ಕಾರಣಕ್ಕೆ ಶಿವಾಜಿ ರಾಜನಾಗಿಯೂ ಪದೇ ಪದೇ ಅವಮಾನವನ್ನು ಎದುರಿಸಿದ. ರೈತನ ಮಗಳನ್ನು ಬಲಾತ್ಕಾರ ಮಾಡಿದನೆಂಬ ಕಾರಣಕ್ಕೆ ರಾಂಝ್ಯದ ಪಾಟೀಲನೊಬ್ಬನನ್ನು ಹೆಡೆಮುರಿ ಕಟ್ಟಿ ಶಿವಾಜಿಯ ಮುಂದೆ ತರಲಾಯಿತು. ಶಿವಾಜಿ ಪಾಟೀಲನಿಗೆ ಶಿಕ್ಷೆಯನ್ನು ಆದೇಶಿಸಿದ. ಆಗ ಪಾಟೀಲ, ಸಭೆಯಲ್ಲಿ ಹಾಜರಿದ್ದ ದಾದಾಜಿ ಕೊಂಡದೇವನಿಗೆ "ಪಂತ ಕುಲೀನ ಮನೆತನದವರು ನ್ಯಾಯ ನೀಡಲಿ" ಎಂದು ಶಿವಾಜಿಯನ್ನು ನೀದಿಸಿದ. ಮರಾಠಾ ಸರದಾರರಿಗೂ ಶಿವಾಜಿಯನ್ನು ರಾಜನೆಂದು ಒಪ್ಪಿಕೊಳ್ಳಲು ಮುಜುಗರವಿತ್ತು. ಆದರೆ ಶಿವಾಜಿಯ ಬೆನ್ನ ಹಿಂದೆ ನಿಂತಿರುವ ದಲಿತರು ಮತ್ತು ಮುಸ್ಲಿಮರ ಸೇನೆಯ ಕುರಿತಂತೆ ಅವರಿಗೆ ಭಯವಿತ್ತು. ಈ ಕಾರಣದಿಂದಲೇ ಶಿವಾಜಿ ತನ್ನೆಲ್ಲ ನಂಬಿಕೆಗೆ ಅರ್ಹವಾಗಿರುವ ಪ್ರಮುಖ ದಂಡನಾಯಕ ಸ್ಥಾನಗಳನ್ನು ಮುಸ್ಲಿಮರಿಗೆ ನೀಡಿದ್ದ.

* ಶಿವಾಜಿಯ ಮಗ ಸಂಭಾಜಿ ಪೇಶ್ವೆಯರ (ಇವರು ಚಿತ್ಪಾವನ ಸಮುದಾಯಕ್ಕೆ ಸೇರಿದವರು) ಸಂಚಿನಿಂದ ಮೊಗಲರಿಗೆ ಸೆರೆ ಸಿಕ್ಕ. ಅವನನ್ನು ಮೊಗಲರು ಕೊಂದು ಎಸೆದಾಗ ಶಿವಾಜಿಯ ಮಂತ್ರಿಗಳಾಗಿರುವ ಪೇಶ್ವೆಗಳು ಶವ ಸಂಸ್ಕಾರವನ್ನೂ ಮಾಡಲಿಲ್ಲ. ಸಂಭಾಜಿಯ ಅಂತಿಮ ಸಂಸ್ಕಾರವನ್ನು ಗೋವಿಂದ್ ಗೋಪಾಲ್ ಎಂಬ ಮಹಾರ್ ದಲಿತನೊಬ್ಬ ಮಾಡಿದ. ಸಂಭಾಜಿಯ ಗೋರಿಯ ಪಕ್ಕದಲ್ಲೇ ಬಳಿಕ ಆ ದಲಿತ ಮಹಾರನ ಅಂತ್ಯ ಸಂಸ್ಕಾರವನ್ನು ಮಾಡಲಾಯಿತು. ಈ ದಲಿತನ ಗೋರಿಯನ್ನು ಸಂಘ ಪರಿಹಾರ ಧ್ವಂಸ ಮಾಡಿದ ಕಾರಣಕ್ಕೆ ಕೆಲವು ವರ್ಷಗಳ ಹಿಂದೆ ಕೋರೆಗಾಂವ್‌ನಲ್ಲಿ ಹಿಂಸೆ ಭುಗಿಲೆದ್ದಿತು.

* ಶಿವಾಜಿಯ ಆನಂತರ ಆತನ ವಂಶಸ್ಥರಿಂದ ಅಧಿಕಾರವನ್ನು ವಶಪಡಿಸಿಕೊಳ್ಳುವಲ್ಲಿ, ಶಿವಾಜಿಯ ಮಂತ್ರಿಗಳಾಗಿದ್ದ ಪೇಶ್ವೆಗಳು

ಅಂದರೆ ಚಿತ್ಪಾವನ ಬ್ರಾಹ್ಮಣರು ಯಶಸ್ವಿಯಾದರು. ಪೇಶ್ವೆಗಳ ಕಾಲದಲ್ಲಿ ಜಾತೀಯತೆ ಮುಗಿಲು ಮುಟ್ಟಿತು. ಪೇಶ್ವೆ ಎರಡನೇ ಬಾಜೀರಾಯನ ಕಾಲದಲ್ಲಿ ಸೇನಾ ಪಡೆಯಲ್ಲಿದ್ದ ದಲಿತರು ಬಂಡೆದ್ದು ಬ್ರಿಟಿಷರ ಜೊತೆ ಸೇರಿ ಪೇಶ್ವೆಗಳ ಸಾಮ್ರಾಜ್ಯದ ಅವಸಾನಕ್ಕೆ ಕಾರಣವಾದರು. ಶಿವಾಜಿಯು ದಲಿತರು ಮತ್ತು ಮುಸ್ಲಿಮರನ್ನು ಜೊತೆಯಲ್ಲಿಟ್ಟುಕೊಂಡು ಸಾಮ್ರಾಜ್ಯ ಕಟ್ಟಿದ. ಪೇಶ್ವೆಗಳು ತಮ್ಮ ಜಾತೀಯತೆಯ ಕಾರಣದಿಂದ ದಲಿತರನ್ನು ಹೊರಗಿಟ್ಟು ಅಂತಿಮವಾಗಿ ಸಾಮ್ರಾಜ್ಯವನ್ನು ಬ್ರಿಟಿಷರಿಗೆ ಒಪ್ಪಿಸಿದರು.

* ಇತಿಹಾಸ ಪುನರಾವರ್ತನೆ ಆಯಿತು. ಮುಂದೆ ಇದೇ ಚಿತ್ಪಾವನ ಸಮುದಾಯದಿಂದ ಗೋಡ್ಸೆ ಹುಟ್ಟಿದ. ಶಿವಾಜಿ ಭರವಸೆ ಇಟ್ಟ ಮಹಾರ್ ದಲಿತರ ಸಮುದಾಯದಿಂದ ಅಂಬೇಡ್ಕರ್ ಹುಟ್ಟಿದರು.

* ಶಿವಾಜಿ ಮಹಾರಾಜರ ಸಮಾಧಿ ಸ್ಥಳವನ್ನು 300 ವರ್ಷಗಳ ಬಳಿಕ ಗುರುತಿಸಿದ್ದು ಮಹಾತ್ಮಾ ಜ್ಯೋತಿಬಾ ಫುಲೆಯವರು. ಮೊತ್ತ ಮೊದಲ ಬಾರಿಗೆ ಶಿವಾಜಿ ಮಹಾರಾಜರ ಜಯಂತಿಯನ್ನು ಸಾರ್ವಜನಿಕವಾಗಿ ಆಚರಿಸಿದವರು ಜ್ಯೋತಿಬಾ ಫುಲೆಯವರು. ಇದು ಇತಿಹಾಸದಲ್ಲಿ ಕೂಡ ದಾಖಲಾಗಿದೆ. ಶಿವಾಜಿಯನ್ನು ಶೂದ್ರ ಸಮುದಾಯದ, ಕೃಷಿಕ ಸಮುದಾಯದ ಅರಸ ಎಂದು ಗುರುತಿಸಿದವರೂ ಜ್ಯೋತಿಬಾ ಫುಲೆ.

* 20,000 ಪೇಶ್ವೆ ಸೈನಿಕರ ವಿರುದ್ಧ ಬರಿಯ 500 ಮಂದಿ ದಲಿತರು ಯುದ್ಧಗೈದು ವಿಜಯಶಾಲಿಯಾದ ಗಳಿಗೆಯ ಸ್ಮಾರಕ 'ಕೋರೆಂಗಾವ್ ವಿಜಯ ಸ್ತಂಭ'. ಈ ವಿಜಯ ದಿವಸವನ್ನು ಆಚರಿಸಲು ನಾಂದಿ ಹಾಡಿದ್ದು ಅಂಬೇಡ್ಕರ್.

* ಅಂದ ಹಾಗೆ ಶಿವಾಜಿಯ ಕುರಿತ ಮಾಹಿತಿಯುಳ್ಳ, 'ದಗಲಬಾಜಿ ಶಿವಾಜಿ' ಕೃತಿಯನ್ನು ಬರೆದಿರುವುದು ಪ್ರಬೋಧಾಂಕರ್ ಠಾಕ್ರೆ. ಇವರು ಬಾಳಠಾಕ್ರೆಯ ತಂದೆ.

**ಶಿವಾಜಿ ಮಹಾರಾಜರ ಎಂಟು ಜನ ರಾಣಿಯರು:**
1) ಸಯೀ ಬಾಯಿ. 2) ಸೋಯಿರಾಬಾಯಿ. 3) ಸುಗುಣಬಾಯಿ. 4) ಸರವಾರಬಾಯಿ.
5) ಕಾಶೀಬಾಯಿ. 6) ಗುಣವಂತಾಬಾಯಿ. 7) ಲಕ್ಷ್ಮೀ ಬಾಯಿ. 8) ಪುತಳಾಬಾಯಿ.

ಆಕರ ಗ್ರಂಥ: ಸರ್ಕಾರ್ ಜೆ.ಎನ್. ಶಿವಾಜಿ ಎಂಡ್ ಹಿಸ್ ಟೈಮ್ಸ್ ಗ್ರಾಂಡ್ ಡಫ್ – ಹಿಸ್ಟರಿ ಅಫ್ ಮರಾಠಾಸ್. ಭಾವರೆ ಎನ್.ಜಿ: ಕಾಸ್ಟ್ಸ್ ಫೇವರ್ಸ್, ಪ್ಯಾಟರ್ನೇಜ್ ಆ್ಯಂಡ್ ಪ್ರಿವಿಲೇಜಸ್ ಅಂಡರ್ ಶಿವಾಜಿಸ್ ರೂಲ್ ಶಕಕರ್ತಾ ಶಿವಾಜಿ ಗೋವಿಂದ ಪನ್ಸಾರೆ "ಶಿವಾಜಿ ಯಾರು?" ಸುಧಾಕರ ಖಾಂಬೆ: ಭೀಮಾ ಕೋರೆಗಾಂವಾಚಾ ವಿಜಯಸ್ತಂಭ. **(ವಾರ್ತಾಭಾರತಿ 19–2–2022)**

==========================================================================

## ದೈವ ನಿಂದನೆ: ಪಾಕ್ ಮಹಿಳೆಗೆ ಗಲ್ಲು

ಇಸ್ಲಾಮಾಬಾದ್: ವಾಟ್ಸ್‌ಆ್ಯಪ್‌ನಲ್ಲಿ ಪ್ರವಾದಿ ಮೊಹಮ್ಮದ್ ವಿರುದ್ಧ ಅವಹೇಳನಕಾರಿಯಾದ ಚಿತ್ರಗಳನ್ನು ಕಳುಹಿಸಿದ ಆರೋಪಕ್ಕೆ ಗುರಿಯಾಗಿರುವ ಮಹಿಳೆಗೆ ಮರಣ ದಂಡನೆ ಶಿಕ್ಷೆ ವಿಧಿಸಲಾಗಿದೆ. ಪಾಕಿಸ್ಥಾನದ ರಾವಲ್ಪಿಂಡಿಯ ಸ್ಥಳೀಯ ಕೋರ್ಟ್ ಅನಿಕಾ ಅತೀಕ್ ಎಂಬಾಕೆಯ ವಿರುದ್ಧ 2020ರಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆ ನಡೆಸಿ ಈ ತೀರ್ಪು ನೀಡಿದೆ. ಆಕೆಯ ವಿರುದ್ಧ ದೈವ ನಿಂದನೆ, ಇಸ್ಲಾಂ ಧರ್ಮದ ಗೌರವಕ್ಕೆ ಚ್ಯುತಿ ತಂದದ್ದು, ಸೈಬರ್ ಕಾನೂನುಗಳ ಉಲ್ಲಂಘನೆ ಆರೋಪಗಳನ್ನು ಹೊರಿಸಲಾಗಿದೆ. ಅನಿಕಾ ವಿರುದ್ಧ ಆಕೆಯ ಸ್ನೇಹಿತ ಫಾರೂಕ್ ಹಸನ್ನತ್ ಎಂಬಾತನೇ ದೂರು ನೀಡಿದ್ದ. ವಿಚಾರಣೆ ವೇಳೆ, ಅನಿಕಾ ಪರ ವಕೀಲರು ಎಲ್ಲ ಆರೋಪಗಳನ್ನು ನಿರಾಕರಿಸಿದ್ದಾರೆ. **(ಉದಯವಾಣಿ 21–1–2022)**

==========================================================================

## ಅರಿಶಿಣದಿಂದ ಕ್ಯಾನ್ಸರ್ ಚಿಕಿತ್ಸಾಧಾತು!

ಹೈದರಾಬಾದ್: ಇಲ್ಲಿನ 'ಸೆಂಟರ್ ಫಾರ್ ಸೆಲ್ಯೂಲರ್ ಆ್ಯಂಡ್ ಮಾಲೆಕ್ಯುಲರ್ ಬಯೋಲಜಿ' (ಸಿಸಿಎಂಬಿ) ಸಂಸ್ಥೆಯು ಅರಿಶಿನದಿಂದ ಕ್ಯಾನ್ಸರ್ ವಾಸಿ ಮಾಡುವಂಥ ನ್ಯಾನೋ–ಕ್ಯುರ್‌ಕುಮಿನ್ ಧಾತುಗಳನ್ನು ಹೊರತೆಗೆದಿರುವುದಾಗಿ ತಿಳಿಸಿದೆ. ನ್ಯಾನೋ ಮಾಲೆಕ್ಯುಲರ್ ಕಣಗಳು, ದೇಹದ ಜೀವಕಣಗಳ ಆರ್‌ಎನ್‌ಎ ಇಂಟರ್‌ಫೇಸ್ (ಆರ್‌ಎನ್‌ಎ–ಐ) ವ್ಯವಸ್ಥೆಯನ್ನು ಇತರ ಜೀವಕಣಗಳನ್ನು ಸುತ್ತುವರಿದು ಅವು ಕ್ಯಾನ್ಸರ್ ಬಾಧಿತ ಜೀವಕಣಗಳ ಮೇಲೆ ಪರಿಣಾಮಕಾರಿಯಾಗಿ ಕೆಲಸ ಮಾಡುವಂತೆ ಪ್ರೇರೇಪಿಸುತ್ತವೆ. ಕ್ಯಾನ್ಸರ್‌ಗೆ ಈವರೆಗೆ ಲಭ್ಯವಿರುವ ಚಿಕಿತ್ಸೆಗಳಲ್ಲಿ ನ್ಯಾನೋ–ಕ್ಯುರ್‌ಕುಮಿನ್ ಮಾದರಿಯ ಚಿಕಿತ್ಸೆ ಅತ್ಯಂತ ಪರಿಣಾಮಕಾರಿ ಎಂದೆನಿಸಿದೆ

**(ಉದಯವಾಣಿ 22–1–2022)**

==========================================================================

## ಸಂತ್ರಸ್ತೆಗೆ ಸ್ತ್ರೀಯರಿಂದಲೇ ಚಿತ್ರಹಿಂಸೆ

ಹೊಸದಿಲ್ಲಿ: ಇತ್ತೀಚೆಗೆ ಗ್ಯಾಂಗ್‌ರೇಪ್‌ಗೆ ಒಳಗಾಗಿದ್ದ ಸಂತ್ರಸ್ತ ಯುವತಿಗೆ ಮಹಿಳೆಯರ ಗ್ಯಾಂಗ್ ಒಂದು ಚಿತ್ರಹಿಂಸೆ ಕೊಟ್ಟಿದ್ದು, ಆಕೆಯ ತಲೆ ಬೋಳಿಸಿ, ಚಪ್ಪಲಿ ಹಾರ ಹಾಕಿ ಮೆರವಣಿಗೆ ಮಾಡಿರುವ ಅಮಾನವೀಯ ಘಟನೆ ಹೊಸದಿಲ್ಲಿಯಲ್ಲಿ ನಡೆದಿದೆ. ಪ್ರಕರಣ

ಸಂಬಂಧ ನಾಲ್ವರು ಮಹಿಳೆಯರನ್ನು ಬಂಧಿಸಲಾಗಿದೆ. ಇತ್ತೀಚೆಗೆ 20 ವರ್ಷದ ಯುವತಿಯನ್ನು ಕಸ್ತೂರ್‌ಬಾ ನಗರದ ಬಳಿ ಅಕ್ರಮ ಮದ್ಯ ಮಾರಾಟ ಮಾಡುವ ಮೂವರು ಗ್ಯಾಂಗ್ ರೇಪ್ ಮಾಡಿದ್ದರು. ಅದಾದ ಅನಂತರ ಮಹಿಳೆಯರ ಗ್ಯಾಂಗ್‌ವೊಂದು ಆಕೆಯ ತಲೆ ಬೋಳಿಸಿ, ಮುಖಕ್ಕೆ ಮಸಿ ಬಳಿದು, ಚಪ್ಪಲಿ ಹಾರ ಹಾಕಿ ಮೆರವಣಿಗೆ ಮಾಡಿಸಿದ್ದಾರೆ. ಈ ವೀಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ. ಈ ವಿಚಾರವಾಗಿ ದಿಲ್ಲಿ ಮಹಿಳಾ ಆಯೋಗದ ಅಧ್ಯಕ್ಷೆ ಸ್ವಾತಿ ಮಲಿವಾಲ್ ಧ್ವನಿ ಎತ್ತಿದ್ದು, ಆರೋಪಿಗಳ ವಿರುದ್ಧ ಕ್ರಮಕ್ಕೆ ಒತ್ತಾಯಿಸಿದ್ದಾರೆ. **(ಉದಯವಾಣಿ 28–1–2022)**

==============================================================

# ಕ್ಷೀರಪಥದಲ್ಲಿ ಕಂಡಿತು ವಿಚಿತ್ರ ಶಕ್ತಿಪುಂಜ!

*** ಪ್ರತೀ 18.18 ನಿಮಿಷಗಳಿಗೆ ಒಮ್ಮೆ ತೀವ್ರ ರೇಡಿಯೊ ಅಲೆ ಹೊಮ್ಮಿಸುತ್ತದೆ ಆ ಶಕ್ತಿ**

*** ವಿದ್ಯಾರ್ಥಿಯ ಕಣ್ಣಿಗೆ ಬಿತ್ತು ವಿಜ್ಞಾನಿಗಳು ಹಿಂದೆಂದೂ ಕಂಡಿರದ ಆಕಾಶಕಾಯ**

ಸಿಡ್ನಿ: ಆಸ್ಟ್ರೇಲಿಯಾದ ಖಗೋಳ ವಿಜ್ಞಾನಿಗಳು ಸೌರಮಂಡಲದ ಕ್ಷೀರಪಥದಲ್ಲಿ (ನಕ್ಷತ್ರಗಳ ಸಮೂಹ) ವಿಚಿತ್ರ ಶಕ್ತಿಯೊಂದನ್ನು ಪತ್ತೆಹಚ್ಚಿದ್ದಾರೆ. ವಿದ್ಯಾರ್ಥಿಯೊಬ್ಬರು ತಮ್ಮ ಥೀಸಿಸ್‌ಗಾಗಿ ಅಧ್ಯಯನ ನಡೆಸುತ್ತಿದ್ದಾಗ ಟೆಲಿಸ್ಕೋಪ್‌ನಲ್ಲಿ ವಿಚಿತ್ರ ಶಕ್ತಿಯೊಂದನ್ನು ನೋಡಿದ್ದಾರೆ. ಅದೇನು ಎಂದು ನತಾಶಾ ಹರ್ಲೆ ವಾಕರ್ ಎಂಬ ಭೌತಶಾಸ್ತ್ರಜ್ಞೆ ನೇತೃತ್ವದ ಸಂಶೋಧಕರ ತಂಡ ಪತ್ತೆಹಚ್ಚಲು ಶ್ರಮಿಸುತ್ತಿದೆ.

ಈ ವಿಚಿತ್ರ ಶಕ್ತಿ ಪ್ರತೀ ಗಂಟೆಗೆ ಮೂರು ಬಾರಿ ತೀವ್ರ ಪ್ರಮಾಣದ ರೇಡಿಯೊ ಅಲೆಗಳನ್ನು ಹೊರಹಾಕುತ್ತದೆ. ಅದೂ ಸರಿಯಾಗಿ 18.18 ನಿಮಿಷಗಳಿಗೊಮ್ಮೆ. ಆಯಸ್ಕಾಂತೀಯ ಶಕ್ತಿಯನ್ನು ಹೊರ ಹೊಮ್ಮಿಸುವ ಪಲ್ಸರ್ ಎಂಬ ನಕ್ಷತ್ರವನ್ನು ವಿಜ್ಞಾನಿಗಳು ಪತ್ತೆ ಹಚ್ಚಿದ್ದಾರೆ. ಸರಿಯಾಗಿ 18.18 ನಿಮಿಷಗಳಿಗೆ ರೇಡಿಯೊ ಅಲೆಗಳನ್ನು ಹೊರಹಾಕುವ ವಸ್ತುವನ್ನು ಮಾತ್ರ ಹಿಂದೆಂದೂ ಕಂಡಿರಲಿಲ್ಲ ಎಂದು ಸಂಶೋಧಕರ ತಂಡ ಹೇಳಿಕೊಂಡಿದೆ. ಅದೇಕೆ ಹಾಗೆ ಅದರಿಂದ ಹೊರಬರುತ್ತಿರುವ ಶಕ್ತಿಯೇನು ಎಂದು ಈ ತಂಡ ಹುಡುಕುತ್ತಿದೆ. ಈ ಶಕ್ತಿಪುಂಜದ ಬಗ್ಗೆ ಇನ್ನೂ ಹಲವು ಸಂಗತಿಗಳನ್ನು ವಿಜ್ಞಾನಿಗಳು ಕಂಡುಕೊಂಡಿದ್ದಾರೆ. ಅದು ಭೂಮಿಯಿಂದ 4,000 ಜ್ಯೋತಿರ್ವರ್ಷಗಳಷ್ಟು ದೂರದಲ್ಲಿದೆ. ಬಹಳ ತೀಕ್ಷ್ಣ ಹೊಳಪನ್ನು ಹೊಂದಿದೆ. ಹಾಗೆಯೇ ಅತೀ ಬಲಿಷ್ಠವಾದ ಆಯಸ್ಕಾಂತೀಯ ವಲಯವನ್ನು ಹೊಂದಿದೆ. ಇದರ ಕುರಿತ ಹಲವು ಸಾಧ್ಯತೆಗಳ ಸಂಶೋಧನೆಗಳು ಸಾಗಿವೆ. **(ಉದಯವಾಣಿ 28–1–2022)**

==============================================================

# ಲೈಂಗಿಕ ಕಿರುಕುಳ: ಮದ್ರಸ ಅಧ್ಯಾಪಕನ ಬಂಧನ

ಪುತ್ತೂರು, ಫೆ. 7: ಮದ್ರಸದಲ್ಲಿ ಅಪ್ರಾಪ್ತ ವಯಸ್ಕ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪದಡಿ ಬೆಳ್ತಂಗಡಿ ತಾಲೂಕಿನ ಪುತ್ತಿಲ ಗ್ರಾಮದ ಕುಂಡಡ್ಕ ಸಂಶುಲ್ ಹುದಾ ಮದ್ರಸ ಶಾಲೆಯ ಉಸ್ತಾದ್ ಸಿರಾಜುದ್ದೀನ್ ಮದನಿಯನ್ನು ಪುತ್ತೂರು ಮಹಿಳಾ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಬಂಧಿತನನ್ನು ಮಂಗಳೂರು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ನ್ಯಾಯಾಂಗ ಬಂಧನ ವಿಧಿಸಲಾಗಿದೆ.

ಪುತ್ತಿಲ ಗ್ರಾಮದ ಕುಂಡಡ್ಕದ ಸಂಶುಲ್ ಹುದಾ ಮದ್ರಸ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಹೆಣ್ಣು ಮಕ್ಕಳಿಬ್ಬರು ಉಸ್ತಾದ್ ಲೈಂಗಿಕ ದೌರ್ಜನ್ಯ ಎಸಗುತ್ತಿರುವ ಬಗ್ಗೆ ತಾಯಿಗೆ ತಿಳಿಸಿದ್ದರು. ಈ ನಿಟ್ಟಿನಲ್ಲಿ ಅವರು ಪುತ್ತೂರು ಮಹಿಳಾ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಮೂಲತಃ ಉರುವಾಲುಪದವು ನಿವಾಸಿ ಉಸ್ತಾದ್ ಸಿರಾಜುದ್ದೀನ್ ಮದನಿ ವಿರುದ್ಧ ಪೋಕ್ಸೊ ಕಾಯ್ದೆ ದಾಖಲಿಸಿಕೊಂಡ ಪುತ್ತೂರು ಮಹಿಳಾ ಠಾಣೆಯ ಪೊಲೀಸರು ಇನ್‌ಸ್ಪೆಕ್ಟರ್ ಎಂ.ಎನ್. ರಾವ್, ಎಸ್ಸೈ ಸೇಸಮ್ಮ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ. **(ಉದಯವಾಣಿ 8–2–2022)**

==============================================================

# ಗಂಡು ಮಗುವಿಗಾಗಿ ಗರ್ಭಿಣಿ ತಲೆಗೆ ಮೊಳೆ!

ಇಸ್ಲಾಮಾಬಾದ್: ಗಂಡು ಮಗುವೇ ಜನಿಸಬೇಕು ಎನ್ನುವ ಕಾರಣಕ್ಕೆ ಮುಸ್ಲಿಂ ಧರ್ಮಗುರುವೊಬ್ಬರು ಗರ್ಭಿಣಿಯ ತಲೆಗೇ ಮೊಳೆ ಹೊಡೆದಿರುವ ಘಟನೆ ಪಾಕಿಸ್ಥಾನದಲ್ಲಿ ನಡೆದಿದೆ. ಈಗಾಗಲೇ ಮೂರು ಹೆಣ್ಣು ಮಕ್ಕಳ ತಾಯಿಯಾಗಿರುವ ಗರ್ಭಿಣಿ, ಈಗ ಗರ್ಭದಲ್ಲಿರುವ ಮಗು ಗಂಡೇ ಆಗಬೇಕೆಂದು ಕೋರಿಕೊಂಡು ಧರ್ಮಗುರುವಿನ ಬಳಿ ತೆರಳಿದ್ದಾಳೆ. ಆತ ಸುಮಾರು 5 ಸೆಂ.ಮೀ ಉದ್ದದ ಮೊಳೆಯನ್ನು ಆಕೆಯ ತಲೆಯ ಮೇಲೆ ಹೊಡೆದಿದ್ದಾನೆ. ಅದೃಷ್ಟವಶಾತ್ ಆಕೆಯ ಮೆದುಳಿಗೆ ಅದು ತಾಕಿಲ್ಲ. ನೋವು ತಡೆಯಲಾರದ ಮಹಿಳೆ ಮೊಳೆಯನ್ನು ಕಟಿಂಗ್ ಪ್ಲೇಯರ್ ಸಹಾಯದಿಂದ ಹೊರಗೆ ತೆಗೆಯಲು ಪ್ರಯತ್ನಿಸಿದ್ದಾಳೆ. ಆದರೆ ಅದು ಆಗದಿದ್ದಾಗ ವೈದ್ಯರ ಬಳಿ ತೆರಳಿದ್ದಾಳೆ. ಈ ವಿಚಾರ ಪೊಲೀಸ್ ಠಾಣೆಯ ಮೆಟ್ಟಿಲೇರಿದ್ದು, ತನಿಖೆ ನಡೆಯುತ್ತಿದೆ. **(ಉದಯವಾಣಿ 10–2–2022)**

## ಮುಸ್ಲಿಂ ವಿದ್ಯಾರ್ಥಿನಿಗೆ ಸಂಸ್ಕೃತದಲ್ಲಿ 5 ಚಿನ್ನದ ಪದಕ!

ಲಕ್ನೋ: ಹಿಜಾಬ್ ಗಲಾಟೆ ನಡುವೆಯೇ ಉತ್ತರಪ್ರದೇಶದ ಲಕ್ನೋ ವಿಶ್ವವಿದ್ಯಾಲಯದ ಮುಸ್ಲಿಂ ವಿದ್ಯಾರ್ಥಿನಿ ಘಜಾಲಾ ಸಂಸ್ಕೃತ ಭಾಷೆಯಲ್ಲಿ ಐದು ಚಿನ್ನದ ಪದಕ ಪಡೆದಿದ್ದಾರೆ! ಘಜಾಲಾಗೆ ಕಳೆದ ವರ್ಷ ನವೆಂಬರ್‌ನಲ್ಲೇ ಸ್ನಾತಕೋತ್ತರ ಪದವಿಯಲ್ಲಿ ಅತ್ಯುತ್ತಮ ಸಾಧಕಿ ಪ್ರಶಸ್ತಿಯನ್ನು ಘೋಷಿಸಲಾಗಿತ್ತು. ಗುರುವಾರ ಉಪನ್ಯಾಸಕರ ನಡುವೆ ನಡೆದ ಕಾರ್ಯಕ್ರಮದಲ್ಲಿ ಈ ಪದಕಗಳನ್ನು ಪ್ರದಾನ ಮಾಡಲಾಯಿತು. ಕೆಲವು ವರ್ಷಗಳ ಹಿಂದೆ ಈಕೆಯ ತಂದೆ ಕ್ಯಾನ್ಸರ್‌ನಿಂದ ತೀರಿಕೊಂಡಿದ್ದರು. ಇಬ್ಬರು ಸಹೋದರರು, ಒಬ್ಬ ಸಹೋದರಿಯ ಪೈಕಿ ಘಜಾಲಾ ಮಾತ್ರ ಶಿಕ್ಷಣ ಮುಂದುವರಿಸಿದರು. **(ಉದಯವಾಣಿ 12–2–2022)**

=====================================================================

## ಗುವಾಹಾಟಿ ವಿಜ್ಞಾನಿಗಳಿಂದ ಹೊಸ ಸಂಶೋಧನೆ

## ಇಳಿವಯಸ್ಸಿನ ಸಮಸ್ಯೆಗೆ ಬ್ರೇಕ್ ಹಾಕಬಲ್ಲ ಮೊಸರು!

ಗುವಾಹಾಟಿ: 'ಅಯ್ಯೋ... ವಯಸ್ಸಾಯ್ತು.... ಮೊದಲಿನಂತೆ ಈಗ ಕೆಲಸ ಮಾಡೋದಕ್ಕೇ ಆಗಲ್ಲ...' ಇದು 35–40 ದಾಟಿದ ಬಹುತೇಕರ ದೂರು. ಈ ಸಮಸ್ಯೆಯನ್ನು ಮನಗಂಡಿರುವ ಗುವಾಹಾಟಿಯ ವಿಜ್ಞಾನಿಗಳು ಅದಕ್ಕೊಂದು ಹೊಸ ಪರಿಹಾರ ಕಂಡುಹಿಡಿದಿದ್ದಾರೆ. ಅದೇ 'ಯೋಗರ್ಟ್' (ಮೊಸರು).

ಅಸ್ಸಾಂನ ಗುವಾಹಾಟಿ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸಡ್ ಸ್ಟಡಿ ಇನ್ ಸೈನ್ಸ್ ಅಂಡ್ ಟೆಕ್ನಾಲಜಿ (ಐಎಎಸ್‌ಎಸ್‌ಟಿ)ಯ ವಿಜ್ಞಾನಿಗಳು 'ಲಕ್ಟೋಬಕಿಲಸ್ ಪ್ಲಾಂಟರಂ ಜೆಬಿಸಿ5' ಹೆಸರಿನ ಬ್ಯಾಕ್ಟೀರಿಯಾವನ್ನು ಪತ್ತೆ ಹಚ್ಚಿದ್ದಾರೆ. ಅದನ್ನು ಕೆನೋಹರ್ಾಬ್‌ಡಿಟಿಸ್ ಎಲಿಗೆನ್ಸ್ ಹೆಸರಿನ ಹುಳುವೊಂದರ ಮೇಲೆ ಪ್ರಯೋಗಿಸಿದ್ದಾರೆ. ಹೀಗೆ ಮಾಡಿದ ಅನಂತರ ಆ ಹುಳುವಿನ ಜೀವಿತಾವಧಿ ಶೇ. 27.8ರಷ್ಟು ಹೆಚ್ಚಾಗಿದೆ. ಹಾಗೆಯೇ ಅದು ಅತೀ ಹೆಚ್ಚು ಕಾಲ ಸದೃಢವಾಗಿರುವುದನ್ನೂ ವಿಜ್ಞಾನಿಗಳು ಗಮನಿಸಿದ್ದಾರೆ. ಈ ಬ್ಯಾಕ್ಟೀರಿಯಾವು ಮನುಷ್ಯನನ್ನು ವಯೋಸಹಜವಾಗಿ ಕಾಡುವ ಬೊಜ್ಜು ಪ್ರತಿಕಾಯದ ಸಮಸ್ಯೆಗಳಿಂದ ಕಾಯಬಲ್ಲುದು ಎಂದು ಎಐಎಸ್‌ಎಸ್‌ಟಿ ನಿರ್ದೇಶಕರಾಗಿರುವ ಆಶಿಶ್ ಕೆ. ಮುಖರ್ಜಿ ತಿಳಿಸಿದ್ದಾರೆ.

ಸಂಸ್ಥೆ ಕಂಡುಹಿಡಿದ 'ಲಕ್ಟೋಬಕಿಲಸ್ ಪ್ಲಾಂಟರಂ ಜೆಬಿಸಿ5' ಬ್ಯಾಕ್ಟೀರಿಯಾ ಬಳಸಿಕೊಂಡು ಪ್ರೊಬಯೋಟಿಕ್ ಮೊಸರನ್ನು (ಯೋಗರ್ಟ್) ತಯಾರಿಸಿದೆ. ಅದರ ಪೇಟೆಂಟ್‌ಗೆಂದು ಅರ್ಜಿಯನ್ನೂ ಸಲ್ಲಿಸಿದೆ. ಈ ಮೊಸರನ್ನು ಮನುಷ್ಯರು ಬಳಸುವುದರಿಂದ ಅವರ ದೈಹಿಕ ಸಾಮರ್ಥ್ಯ ಹೆಚ್ಚಬಹುದು ಎನ್ನುವುದು ಸಂಶೋಧಕರ ವಾದ. **(ಉದಯವಾಣಿ 12–2–2022)**

=====================================================================

## ಧರ್ಮ ನಿಂದನೆ ಆರೋಪ: ವ್ಯಕ್ತಿ ಹತ್ಯೆ

ಪಾಕಿಸ್ಥಾನದ ಪಂಜಾಬ್ ಪ್ರಾಂತ್ಯದ ಕುಗ್ರಾಮವೊಂದರಲ್ಲಿ ಧರ್ಮ ನಿಂದನೆ ಮಾಡಿದ್ದಾರೆ ಎಂಬ ಕಾರಣಕ್ಕಾಗಿ ವ್ಯಕ್ತಿಯನ್ನು ಕಲ್ಲು ಹೊಡೆದು ಹತ್ಯೆ ಮಾಡಲಾಗಿದೆ. ಆತನನ್ನು ಮರದ ಕೊಂಬೆಗೆ ಇಳಿಬಿಟ್ಟು ಇಟ್ಟಿಗೆಗಳಿಂದ ಹೊಡೆದು ಕೊಲ್ಲಲಾಗಿದೆ ಎಂದು ಮೂಲಗಳು ತಿಳಿಸಿವೆ. **(ಉದಯವಾಣಿ 14–2–2022)**

=====================================================================

## ಬಾನೆಟ್ ಮೇಲೆ ಗಾಯಾಳು ಇರಿಸಿಕೊಂಡು ಕಾರು ಓಡಿಸಿದ!

ಹೊಸದಿಲ್ಲಿ: ಆತ ಸರಕಾರಿ ಅಧಿಕಾರಿಯೊಬ್ಬರ ಪುತ್ರ. ಇತ್ತೀಚೆಗೆ ಕಾರು ಓಡಿಸುವ ಭರದಲ್ಲಿ ಪಾದಚಾರಿಯೊಬ್ಬನಿಗೆ ಢಿಕ್ಕಿ ಹೊಡೆದಿದ್ದ. ಆದರೆ ಅಷ್ಟಕ್ಕೆ ಬಿಡದ ಆತ, ಕಾರು ಇಳಿದು ಬಂದು ಗಾಯಗೊಂಡಿದ್ದ ಆ ಪಾದಚಾರಿಯನ್ನು ತನ್ನ ಕಾರಿನ ಬಾನೆಟ್ ಮೇಲೆ ಇರಿಸಿ ಆ ಕಾರನ್ನು ಡ್ರೈವ್ ಮಾಡಿಕೊಂಡು ಪಂಚತಾರಾ ಹೊಟೇಲೊಂದಕ್ಕೆ ಹೋದ!

ದಕ್ಷಿಣ ದಿಲ್ಲಿಯ ಗ್ರೇಟರ್ ಕೈಲಾಶ್‌ನಲ್ಲಿ ಈ ಘಟನೆ ನಡೆದಿದ್ದು, ಆತನನ್ನು ಪೊಲೀಸರು ಬಂಧಿಸಿದ್ದಾರೆ. ಸಿಸಿಟಿವಿಯಲ್ಲಿ ಅಪಘಾತದ ದೃಶ್ಯಗಳು ದಾಖಲಾಗಿದ್ದು, ಅವುಗಳ ಆಧಾರದಲ್ಲಿ ಆತನ ವಿರುದ್ಧ ಪ್ರಕರಣದ ದಾಖಲಾಗಿವೆ. ಈ ಯುವಕ ಖಾಸಗಿ ವಿವಿಯಲ್ಲಿ ಕಾನೂನು ಪದವಿ ಕಲಿಯುತ್ತಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. **(ಉದಯವಾಣಿ 14–2–2022)**

=====================================================================

## ಅಹ್ಮದಾಬಾದ್ ಸರಣಿ ಸ್ಫೋಟ 38 ಮಂದಿಗೆ ಗಲ್ಲುಶಿಕ್ಷೆ

## 2008 ಜುಲೈಯಲ್ಲಿ ಸಂಭವಿಸಿದ್ದ ಪ್ರಕರಣ 11 ಮಂದಿಗೆ ಆಜೀವ ಜೈಲು

ಅಹ್ಮದಾಬಾದ್, ಫೆ.18: ಅಹ್ಮದಾಬಾದ್ ಸ್ಫೋಟ ಪ್ರಕರಣ ಸಂಬಂಧ 38 ಮಂದಿಗೆ ವಿಶೇಷ ನ್ಯಾಯಾಲಯ ಗಲ್ಲುಶಿಕ್ಷೆ ವಿಧಿಸಿದೆ. ಸ್ವತಂತ್ರ

ಭಾರತದಲ್ಲಿ ಇದೇ ಮೊದಲ ಬಾರಿಗೆ ಇಷ್ಟೊಂದು ಮಂದಿಗೆ ಗಲ್ಲು ಶಿಕ್ಷೆ ವಿಧಿಸಲಾಗಿದೆ. ಫೆ.8ರಂದು ವಿಶೇಷ ಕೋರ್ಟ್ 49 ಮಂದಿಯನ್ನು ದೋಷಿ ಎಂದು ತೀರ್ಪು ನೀಡಿದ್ದು ಶುಕ್ರವಾರ ಶಿಕ್ಷೆಯ ಪ್ರಮಾಣವನ್ನು ಪ್ರಕಟಿಸಿದೆ.

2008ರ ಜು. 26ರಂದು ಗುಜರಾತ್‌ನ ಅಹ್ಮದಾಬಾದ್‌ನ 19 ಕಡೆಗಳಲ್ಲಿ ಸರಣಿ ಸ್ಫೋಟ ಸಂಭವಿಸಿದ್ದವು. ಇದರಲ್ಲಿ 56 ಮಂದಿ ಮೃತಪಟ್ಟು ಇತರ 200 ಮಂದಿ ಗಾಯಗೊಂಡಿದ್ದರು. **(ಉದಯವಾಣಿ 19–2–2022)**

==========================================================================

## 22022022: ವಿಶೇಷ ದಿನ.

ಹೊಸದಿಲ್ಲಿ: 22–02–2022. ಈ ದಿನಾಂಕವನ್ನು ಗಮನಿಸಿ. ಬಿಡಿ ಬಿಡಿ ಅಂಕಿಯಾಗಿ ಎಡದಿಂದ ಬಲಕ್ಕೆ ಓದಿ. ಹಾಗೆಯೇ ಬಲದಿಂದ ಎಡಕ್ಕೆ ಓದಿ. ಎರಡೂ ಬಾರಿ ಒಂದೇ ರೀತಿ ಬರುತ್ತದೆ. ಹಾಗಾಗಿ ಈ ವರ್ಷದ ಫೆ.22 ಅತ್ಯಂತ ವಿಶೇಷ ದಿನಾಂಕವಾಗಿದೆ. ಈ ದಿನಾಂಕವನ್ನು ಬಿಡಿಬಿಡಿಯಾಗಿ 2,2,0,2,2,0,2,2 ಎಂದು ಓದಬಹುದು. ಇದನ್ನು ಪ್ಯಾಲಿಂಡ್ರೋಮ್ ಎನ್ನಲಾಗುತ್ತದೆ. ಇಂಥ ದಿನಾಂಕ ಮುಂದೆ ಭವಿಷ್ಯದಲ್ಲಿ ಬರುವುದಕ್ಕೆ ಸಾಧ್ಯವಿಲ್ಲ ಎಂದು ಸಂಖ್ಯಾ ತಜ್ಞರು ಹೇಳಿದ್ದಾರೆ. ಜೋತಿಷಿಗಳು ಇದೊಂದು ವಿಶೇಷ ದಿನ ಎಂದಿದ್ದಾರೆ.

**(ಉದಯವಾಣಿ 22–2–2022)**

==========================================================================

## ಕಾನ್‌ಸ್ಟೆಬಲ್ ಹುದ್ದೆಗೆ ಉನ್ನತ ಶಿಕ್ಷಣ ಪಡೆದವರ ಆಸಕ್ತಿ
## 8 ಮಂದಿ ಪಿಜಿ, 18 ಬಿಇ, 49 ಪದವೀಧರರು!

ಉಡುಪಿ, ಫೆ. 24: ಎಸೆಸೆಲ್ಸಿ ವಿದ್ಯಾಭ್ಯಾಸ ಮುಗಿಸಿ ದೈಹಿಕ ಹಾಗೂ ಮಾನಸಿಕವಾಗಿ ಸದೃಢರಾಗಿದ್ದರೆ ಪೊಲೀಸ್ ಇಲಾಖೆ ಸೇರಲು ಯತ್ನಿಸುವ ಕಾಲವೊಂದಿತ್ತು. ಆದರೆ ಈಗ ಎಲ್ಲವೂ ಉಲ್ಟಾ ಹೊಡೆಯುತ್ತಿದೆ. ಬಿಇ, ಎಂಎಸ್ಸಿ ಮಾಡಿದ ಪದವೀಧರರು ಕಾನ್‌ಸ್ಟೆಬಲ್‌ಗಳಂತಹ ಸರಕಾರಿ ಹುದ್ದೆಗಳನ್ನು ಅರಸಿ ಬರುತ್ತಿದ್ದಾರೆ.

ಜಿಲ್ಲೆಯ ತಾತ್ಕಾಲಿಕ ಪೊಲೀಸ್ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆದ 13ನೇ ತಂಡದ ಸಶಸ್ತ್ರ ಮೀಸಲು ಪೊಲೀಸ್ ಕಾನ್‌ಸ್ಟೆಬಲ್‌ಗಳ ನಿರ್ಗಮನ ಪಥಸಂಚಲನ ಫೆ. 25ರಂದು ನಡೆಯಲಿದ್ದು, ಎಎಸ್ಸಿ (2 ಮಂದಿ), ಎಂಎ (2), ಎಂಕಾಂ (3), ಎಂಬಿಎ (1), ಬಿಇ (18), ಸಾಮಾನ್ಯ ಪದವಿ (49), ಡಿಪ್ಲೊಮಾ ಐಟಿಐ (1), ಪಿಯುಸಿ (20), ಎಸೆಸೆಲ್ಸಿ (4) ವ್ಯಾಸಂಗ ಮಾಡಿದ ಒಟ್ಟು 100 ಮಂದಿ ಭಾಗವಹಿಸುತ್ತಿರುವುದು ವಿಶೇಷವಾಗಿದೆ.

**ವಿವಿಧ ಜಿಲ್ಲೆಗಳಿಂದ ಆಗಮನ**

ಒಟ್ಟು 100 ಮಂದಿ ತರಬೇತಿ ಪಡೆದಿದ್ದು, ಕೋಲಾರದಿಂದ 25, ಬೆಂಗಳೂರು ಗ್ರಾಮಾಂತರ 16, ಚಿಕ್ಕಬಳ್ಳಾಪುರ 14, ಬೀದರ್ 12, ದ.ಕ 7, ಮಂಡ್ಯ, ಚಿತ್ರದುರ್ಗ, ಚಾಮರಾಜ ನಗರದಿಂದ ತಲಾ 6, ಬೆಳಗಾವಿ 4, ಯಾದಗಿರಿ ಮತ್ತು ತುಮಕೂರಿನಿಂದ ತಲಾ ಇಬ್ಬರು ತರಬೇತಿ ಪಡೆದಿದ್ದಾರೆ.

ದೈಹಿಕ ಕಸರತ್ತುಗಳ ಜತೆಗೆ ಪೊಲೀಸ್ ಇಲಾಖೆಯ ವಿವಿಧ ಅಧಿಕಾರಿಗಳಿಂದ ಮನಃಶಾಸ್ತ್ರ ಮನೋಕೌಲಶ ತರಬೇತಿಯನ್ನೂ ನೀಡಲಾಗುತ್ತದೆ. ಇದುವರೆಗೆ ಈ ಕೇಂದ್ರದಲ್ಲಿ ಸಾವಿರಕ್ಕೂ ಅಧಿಕ ಮಂದಿ ವಿವಿಧ ಜಿಲ್ಲೆಯ ಪೊಲೀಸ್ ಕಾನ್‌ಸ್ಟೆಬಲ್‌ಗಳು ತರಬೇತಿ ಪಡೆದುಕೊಂಡಿದ್ದಾರೆ.

"ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗೆ ನೇಮಕಾತಿ ಆದ ಬಳಿಕ ಅವರಿಗೆ ತರಬೇತಿ ನೀಡುವ ಬಗ್ಗೆ ಬೆಂಗಳೂರಿನಿಂದ ನಿರ್ದೇಶನ ನೀಡಲಾಗುತ್ತದೆ. ಅದರಂತೆ ಕೆಲವೊಂದು ಜಿಲ್ಲೆಗೆ ಅಭ್ಯರ್ಥಿಗಳನ್ನು ಕಳುಹಿಸಿಕೊಡಲಾಗುತ್ತದೆ. ಇಲ್ಲಿ ಅವರಿಗೆ ದೈಹಿಕ ತರಬೇತಿ ಸಹಿತ ತರಗತಿಗಳನ್ನು ನಡೆಸಿ ವಿವಿಧ ರೀತಿಯ ತರಬೇತಿಗಳನ್ನು ನೀಡಲಾಗುತ್ತದೆ. – ರಾಘವೇಂದ್ರ, ಡಿವೈಎಸ್‌ಪಿ, ಡಿಆರ್ ಪೊಲೀಸ್, ಉಡುಪಿ

**(ಉದಯವಾಣಿ 25–2–2022)**

==========================================================================

## ಹಂದಿ ಹೃದಯ ಕಸಿಗೆ ಒಳಗಾಗಿದ್ದವ ಸಾವು

ವಾಷಿಂಗ್ಟನ್: ಮನುಷ್ಯನ ಹೃದಯದ ಜಾಗಕ್ಕೆ ಹಂದಿಯ ಹೃದಯವನ್ನು ಕಸಿ ಮಾಡಿಸಿಕೊಂಡಿದ್ದ ಅಮೆರಿಕದ ಮೇರಿಲ್ಯಾಂಡ್‌ನ ವ್ಯಕ್ತಿ ಮಂಗಳವಾರ ಸಾವನ್ನಪ್ಪಿದ್ದಾರೆ. ಜ.7ರಂದು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದ 57 ವರ್ಷದ ಡೇವಿಡ್ ಬೆನಟ್ 2 ತಿಂಗಳ ಕಾಲ ಹಂದಿಯ ಹೃದಯದ ಸಹಾಯದಿಂದ ಬದುಕಿದ್ದರು.

ಅವರಿಗೆ ಶಸ್ತ್ರಚಿಕಿತ್ಸೆ ಮಾಡಿಸಿದ್ದ ಮೇರಿಲ್ಯಾಂಡ್ ವಿಶ್ವವಿದ್ಯಾನಿಲಯ ವೈದ್ಯಕೀಯ ಕೇಂದ್ರವು ಡೇವಿಡ್ ಅವರ ಸಾವಿಗೆ ನಿಖರ ಕಾರಣವನ್ನು ಕೊಟ್ಟಿಲ್ಲ. ಹಲವು ದಿನಗಳಿಂದ ಅವರ ಆರೋಗ್ಯ ಹದಗೆಟ್ಟಿದ್ದಾಗಿ ತಿಳಿಸಿದೆ. ಈ ಹಿಂದೆ ಕ್ಯಾಲಿಫೋರ್ನಿಯಾದಲ್ಲಿ ಬಾಲಕಿಯೊಬ್ಬಳು

ಮಂಗದ ಹೃದಯ ಕಸಿ ಮಾಡಿಸಿಕೊಂಡು 21 ದಿನ ಬದುಕಿದ್ದಳು. **(ಉದಯವಾಣಿ 10–3–2022)**

==========================================================================

## ಭಯೋತ್ಪಾದನೆ ಅಪರಾಧ: ಒಂದೇ ದಿನ 81 ಮಂದಿಗೆ ಗಲ್ಲುಶಿಕ್ಷೆ ವಿಧಿಸಿದ ಸೌದಿ

ರಿಯಾದ್, ಮಾ. 12: ಸೌದಿ ಅರೇಬಿಯಾದಲ್ಲಿ ಒಂದೇ ದಿನ ಭಯೋತ್ಪಾದನೆಗೆ ಸಂಬಂಧಿಸಿದ ವಿವಿಧ ಅಪರಾಧ ನಡೆಸಿದ 81 ಮಂದಿಯನ್ನು ಗಲ್ಲಿಗೇರಿಸಲಾಗಿದೆ. ಎಂದು ವರದಿಯಾಗಿದೆ.

ಎಲ್ಲರೂ ಹಲವು ಘೋರ ಅಪರಾಧಗಳನ್ನು ಎಸಗಿದ ತಪ್ಪಿತಸ್ಥರೆಂದು ಸಾಬೀತಾಗಿದೆ. ಐಸಿಸ್, ಅಲ್‌ಖೈದಾ, ಯೆಮನ್‌ನ ಹೌದಿ ಬಂಡುಗೋರ ಪಡೆ ಹಾಗೂ ಇತರ ಭಯೋತ್ಪಾದಕ ಸಂಘಟನೆಗೆ ಸೇರಿದವರು ಈ ಪಟ್ಟಿಯಲ್ಲಿದ್ದಾರೆ ಎಂದು ಸರಕಾರಿ ಸ್ವಾಮ್ಯದ ಸೌದಿ ಪ್ರೆಸ್ ಏಜೆನ್ಸಿ(ಎಸ್‌ಪಿಎ) ವರದಿ ಮಾಡಿದೆ. ಜತೆಗೆ, ಸರಕಾರದ ಸಿಬಂದಿಗಳನ್ನು ಪ್ರಮುಖ ಆರ್ಥಿಕ ಸಂಸ್ಥೆಗಳನ್ನು ಗುರಿಯಾಗಿಸಿ ದಾಳಿ ಎಸಗಿದವರು, ಕಾನೂನು ಜಾರಿ ಅಧಿಕಾರಿಗಳನ್ನು ಹತ್ಯೆ ಮಾಡಿದವರು, ಪೊಲೀಸ್ ವಾಹನಗಳನ್ನು ಗುರಿಯಾಗಿಸಿ ನೆಲಬಾಂಬ್‌ಗಳನ್ನು ಈ ಪಟ್ಟಿಯಲ್ಲಿದ್ದಾರೆ. ಅಪಹರಣ, ಚಿತ್ರಹಿಂಸೆ, ಅತ್ಯಾಚಾರ, ದೇಶದೊಳಗೆ ಶಸ್ತ್ರಾಸ್ತ್ರ ಮತ್ತು ಬಾಂಬ್ ಕಳ್ಳಸಾಗಣೆಯ ಅಪರಾಧ ಎಸಗಿದವರಿಗೆ ಈ ಶಿಕ್ಷೆ ವಿಧಿಸಲಾಗಿದೆ. 81 ಮಂದಿಯಲ್ಲಿ 73 ಮಂದಿ ಸೌದಿ ಪ್ರಜೆಗಳು, 7 ಮಂದಿ ಯೆಮನ್ ಪ್ರಜೆಗಳು ಮತ್ತು ಓರ್ವ ಸಿರಿಯಾದ ನಾಗರಿಕ ಎಂದು ವರದಿ ಹೇಳಿದೆ. ಈ ಎಲ್ಲಾ ಪ್ರಕರಣಗಳನ್ನು 13 ನ್ಯಾಯಾಧೀಶರ ಮೇಲುಸ್ತುವಾರಿಯಲ್ಲಿ ಸೌದಿಯ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿ ದೋಷನಿರ್ಣಯ ಮಾಡಲಾಗಿದೆ ಎಂದು ಎಸ್‌ಪಿಎ ವರದಿ ಮಾಡಿದೆ. **(ವಾರ್ತಾಭಾರತಿ 13–03–22)**

==========================================================================

## ಹೆಲಿಪ್ಯಾಡ್, ಸ್ವಿಮ್ಮಿಂಗ್ ಪೂಲ್ ಇರುವ ಕಾರಿಗೆ ಗಿನ್ನೆಸ್ ದಾಖಲೆ ಗರಿ

## ವಿಶ್ವದ ಅತ್ಯಂತ ಉದ್ದದ ಕಾರು

**ಏನೇನಿದೆ?** ಕಾರಲ್ಲಿ ಹಲವಾರು ಟಿವಿಗಳು, ಟೆಲಿಫೋನ್, ಈಜುಕೊಳ, ವಾಟರ್‌ಬೆಡ್, ಬಾತಿಂಗ್ ಟಬ್, ಮಿನಿ ಗಾಲ್ಫ್ ಕೋರ್ಸ್ ಕೂಡ ಇದೆ. ಅದಷ್ಟೇ ಅಲ್ಲದೆ ಕಾರಿನ ಕೊನೆಯ ಭಾಗದಲ್ಲಿ ಹೆಲಿಪ್ಯಾಡ್ ಕೂಡ ಇದೆ.

ವಾಷಿಂಗ್ಟನ್: ಒಂದು ಕಾರು ಎಷ್ಟು ಉದ್ದವಿರಬಹುದು? ಹೆಚ್ಚೆಂದರೆ 15 ಅಡಿ ಎನ್ನುವುದು ನಿಮ್ಮ ಉತ್ತರವಾಗಿದ್ದರೆ ಅದು ತಪ್ಪು. ಏಕೆಂದರೆ ಅಮೆರಿಕದಲ್ಲಿರುವ ಈ ಕಾರಿನ ಉದ್ದ ಬರೋಬ್ಬರಿ 100 ಅಡಿ!

ಹೌದು. ಈ ಹಿಂದೆ 'ದಿ ಅಮೆರಿಕನ್ ಡ್ರೀಮ್' ಎಂದು ಕರೆಸಿಕೊಂಡಿದ್ದ ವಿಶ್ವದ ಅತ್ಯಂತ ಉದ್ದದ ಕಾರು ಇದೀಗ ಮರು ಸ್ಥಾಪನೆಯಾಗಿದ್ದು, ತನ್ನ ದಾಖಲೆಯನ್ನು ತಾನೇ ಮುರಿದಿದೆ. ಈ ಹಿಂದೆ 60 ಅಡಿ ಇದ್ದ ಕಾರು ಇದೀಗ 100 ಅಡಿ, 1.5 ಇಂಚಿದೆ. ಅಂದರೆ ಹೋಂಡಾ ಸಿಟಿ ಸೆಡಾನ್‌ನ 6 ಕಾರಿನ ಒಟ್ಟು ಉದ್ದಕ್ಕಿಂತ ಹೆಚ್ಚು! ಈ ಕಾರು ಈಗ ಗಿನ್ನೆಸ್ ದಾಖಲೆಗೂ ಭಾಜನವಾಗಿದೆ.

ಈ ಕಾರನ್ನು 1986ರಲ್ಲಿ ಕ್ಯಾಲಿಫೋರ್ನಿಯಾದ ಜಯ್ ಓರ್‌ಬರ್ಗ್ ಹೆಸರಿನ ವ್ಯಕ್ತಿ ತಯಾರಿಸಿದ್ದರು. ಆಗ ಭಾರೀ ಪ್ರಸಿದ್ಧಿ ಪಡೆದಿದ್ದ ಕಾರು ಪಾರ್ಕಿಂಗ್ ಸಮಸ್ಯೆಯ ಕಾರಣದಿಂದಾಗಿ ಮೂಲೆ ಸೇರಿತ್ತು.

60 ಅಡಿ ಉದ್ದದ ಅದೇ ಕಾರನ್ನು ಇನ್ನೂ 40 ಅಡಿ ಹೆಚ್ಚಿಸಿ ಒಟ್ಟು 100 ಅಡಿಯ ಕಾರನ್ನಾಗಿ ಮಾಡಲಾಗಿದೆ. ಕಾರನ್ನು ತಿರುಗಿಸಲು ಸುಲಭವಾಗಲೆಂದು ಎರಡು ಭಾಗವಾಗಿ ತಯಾರಿಸಿ ಜೋಡಿಸಲಾಗಿದೆ. ಹಾಗೆಯೇ ಎರಡೂ ಕಡೆಗಳಿಂದಲೂ ಓಡಿಸುವಂತೆ ತಯಾರಿಸಲಾಗಿದೆ. ಇದನ್ನು ನೀವು ಅಮೆರಿಕದ ಡೆಜೆರ್ಲೆಂಡ್ ಪಾರ್ಕ್ ಕಾರ್ ಸಂಗ್ರಹಾಲಯದಲ್ಲಿ ನೋಡಬಹುದಾಗಿದೆ. **(ಉದಯವಾಣಿ 13–3–22)**

==========================================================================

## ಸೌರವ್ಯೂಹದಾಚೆ ಇವೆ 5 ಸಾವಿರ ಗ್ರಹ!

ನ್ಯೂಯಾರ್ಕ್: ನಮ್ಮ ಸೌರವ್ಯವಸ್ಥೆಯ ಹೊರಗೆ 5 ಸಾವಿರದಷ್ಟು ಜಗತ್ತುಗಳಿವೆ ಎಂದು ನಾಸಾ ಹೇಳಿದೆ. ಬ್ರಹ್ಮಾಂಡದ ಗಡಿಯಾಚೆ ಬಾಹ್ಯಾಕಾಶದಾಳದಲ್ಲಿ ಆವಿಷ್ಕಾರಕ್ಕೊಳಪಡಲು ಕಾಯುತ್ತಿರುವ 5 ಸಾವಿರಕ್ಕೂ ಅಧಿಕ ಗ್ರಹಗಳಿವೆ ಎಂಬುದನ್ನು ಕಂಡುಕೊಂಡಿದೆ.

ಅಮೆರಿಕದ ಬಾಹ್ಯಾಕಾಶ ಸಂಸ್ಥೆಯು 65 ಹೊಸ ಗ್ರಹಗಳನ್ನು ಆವಿಷ್ಕರಿಸಿದ್ದು, ನಮ್ಮ ಸೌರವ್ಯವಸ್ಥೆಯ ಹೊರಗೆ ಪ್ರತ್ಯೇಕ ನಕ್ಷತ್ರಗಳ ಕಕ್ಷೆಯಲ್ಲಿ ಸುತ್ತುತ್ತಿರುವ ಸಾವಿರಾರು ಗ್ರಹಗಳ ಅಸ್ತಿತ್ವವನ್ನೂ ಪತ್ತೆಹಚ್ಚಿದೆ.

**ಹೇಗಿವೆ 5 ಸಾವಿರ ಗ್ರಹಗಳು?:** ಸೌರ ವ್ಯವಸ್ಥೆಯ ಹೊರಗೆ ಪತ್ತೆಯಾಗಿರುವ 5 ಸಾವಿರ ಗ್ರಹಗಳು ಒಂದಕ್ಕೊಂದು ಭಿನ್ನವಾಗಿವೆ. ಕೆಲವೊಂದು ಭೂಮಿಯ ಮಾದರಿಯ ಸಣ್ಣ ಗಾತ್ರದ ಶಿಲೆಗಳಿರುವ ಲೋಕಗಳಾದರೆ, ಗುರು ಗ್ರಹಕ್ಕಿಂತಲೂ ದೊಡ್ಡ ಗಾತ್ರದ ಗ್ರಹಗಳು, ನಮ್ಮ ಗ್ರಹಕ್ಕಿಂತ ದೊಡ್ಡದಾಗಿರುವ ಸೂಪರ್–ಅರ್ತ್‌ಗಳು, ನೆಪ್ಚೂನ್‌ನ ಕಿರಿಯ ಸೋದರನಂತಿರುವ ಮಿನಿ ನೆಪ್ಚೂನ್‌ಗಳೂ ಅಲ್ಲಿವೆ. ಏಕಕಾಲಕ್ಕೆ ಎರಡು ನಕ್ಷತ್ರಗಳ ಸುತ್ತ ಸುತ್ತುತ್ತಿರುವ ಗ್ರಹಗಳೂ, ಮೃತ ನಕ್ಷತ್ರಗಳ ಕಕ್ಷೆಯಲ್ಲಿ ಸುತ್ತುತ್ತಿರುವ ಗ್ರಹಗಳೂ ಕಳೆದ 3 ದಶಕಗಳಲ್ಲಿ ಪತ್ತೆಯಾಗಿವೆ. **(ಉದಯವಾಣಿ 23–3–2022)**

## ಉ.ಪ್ರ: ದಲಿತ ಬಾಲಕನಿಗೆ ಥಳಿತ, ಪಾದ ನೆಕ್ಕುವಂತೆ ಬಲವಂತ
## ಕನಿಷ್ಠ 8 ಮಂದಿಯ ಬಂಧನ

ಲಕ್ನೊ, ಎ, 19: ಉತ್ತರಪ್ರದೇಶದ ರಾಯ್ ಬರೇಲಿಯಲ್ಲಿ 10ನೇ ತರಗತಿಯ ದಲಿತ ವಿದ್ಯಾರ್ಥಿಗೆ ಥಳಿಸಿದ ಹಾಗೂ ಆತ ವ್ಯಕ್ತಿಯೋರ್ವನ ಪಾದವನ್ನು ಬಲವಂತವಾಗಿ ನೆಕ್ಕುವಂತೆ ಮಾಡಿದ ಆರೋಪದಲ್ಲಿ ಕನಿಷ್ಠ 8 ಮಂದಿಯನ್ನು ಬಂಧಿಸಲಾಗಿದೆ.

ಈ ಆಘಾತಕಾರಿ ಘಟನೆಯ ವೀಡಿಯೊ ಸಾಮಾಜಿಕ ಜಾಲ ತಾಣದಲ್ಲಿ ವೈರಲ್ ಆಗಿದೆ. ಈ ಘಟನೆ ಎಪ್ರಿಲ್ 10ರಂದು ನಡೆದಿದೆ. ಜಗತ್‌ಪುರ ಪಟ್ಟಣದ ನಿವಾಸಿಯಾಗಿರುವ ಬಾಲಕನನ್ನು ಆತನ ಗೆಳೆಯರು ಬೈಕ್‌ನಲ್ಲಿ ರಾಮ್‌ಲೀಲಾ ಮೈದಾನಕ್ಕೆ ಕರೆದೊಯ್ದಿದ್ದಾರೆ. ಆನಂತರ ಆತನನ್ನು ಸಲೋನ್ ರಸ್ತೆಯತ್ತ ಕರೆದುಕೊಂಡು ಹೋಗಿದ್ದಾರೆ. ಅಲ್ಲಿಂದ ಆತನನ್ನು ಇತರ ಕೆಲವು ಯುವಕರು ಉದ್ಯಾನವೊಂದಕ್ಕೆ ಕರೆದೊಯ್ದಿದ್ದಾರೆ. ಅಲ್ಲಿ ಬಾಲಕನಿಗೆ ಆರೋಪಿಗಳು ಥಳಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಾಲಕನಿಗೆ ಥಳಿಸುತ್ತಿರುವುದು ಹಾಗೂ ಓರ್ವ ಆರೋಪಿಯ ಪಾದ ನೆಕ್ಕುವಂತೆ ಬಲವಂತಪಡಿಸುತ್ತಿರುವುದು ವೀಡಿಯೊದಲ್ಲಿ ದಾಖಲಾಗಿದೆ ಹಾಗೂ ಸಾಮಾಜಿಕ ಜಾಲ ತಾಣದಲ್ಲಿ ವೈರಲ್ ಆಗಿದೆ. ವೀಡಿಯೊ ವೈರಲ್ ಆದ ಬಳಿಕ ಬಾಲಕ ಹಾಗೂ ಆತನ ತಾಯಿ ಪೊಲೀಸ್ ಠಾಣೆಗೆ ತೆರಳಿ ದೂರು ದಾಖಲಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. **(ವಾರ್ತಾಭಾರತಿ 20–4–2022)**

=====================================================================

## ಜಪಾನ್: ಒಂದು ಕೆಜಿ ಚಹಾ ಎಲೆ ಬೆಲೆ 11 ಲಕ್ಷ ರೂ!

ಟೋಕಿಯೊ: ಒಂದು ಕೆಜಿ ಚಹಾ ಪುಡಿ ಬೆಲೆ ಎಷ್ಟಿರಬಹುದು? ನೂರು, ಸಾವಿರದ ಲೆಕ್ಕವನ್ನು ನೀವು ಎಣಿಸಿದ್ದರೆ ನೀವು ಲೆಕ್ಕ ತಪ್ಪಿದ್ದೀರಿ. ಏಕೆಂದರೆ ಜಪಾನ್‌ನ ಒಂದು ಕೆಜಿ ಚಹಾ ಎಲೆ ಬೆಲೆ ಬರೋಬ್ಬರಿ 11.65 ಲಕ್ಷ ರೂ!

ಹೌದು, ಚಹಾ ಎಲೆ ಬೆಳೆಗೆ ಪ್ರಸಿದ್ಧವಾಗಿರುವ ಜಪಾನ್‌ನಲ್ಲಿ ಸಮಿದೋರಿ ಹೆಸರಿನ ಅತ್ಯಂತ ದುಬಾರಿಯ ಚಹಾ ಎಲೆ ಬೆಳೆಯಲಾಗುತ್ತದೆ. ಅದರ ಹರಾಜು ಪ್ರಕ್ರಿಯೆ ಸೋಮವಾರ ಜಪಾನ್‌ನ ಚಹಾ ಮಾರುಕಟ್ಟೆಯಲ್ಲಿ ನಡೆದಿದ್ದು, ಸಮಿದೋರಿ ಚಹಾ ಎಲೆಯನ್ನು ಹೋಲ್‌ಸೇಲ್ ವ್ಯಾಪಾರಿಯೊಬ್ಬರು ಕೆಜಿಗೆ 11.65 ಲಕ್ಷ ರೂ.ನಂತೆ ಖರೀದಿಸಿದ್ದಾರೆ. ಈ ಎಲೆಯನ್ನು ಗ್ರೀನ್ ಟೀ ಮಾಡುವುದಕ್ಕೆ ಬಳಕೆ ಮಾಡಲಾಗುತ್ತದೆ. ಈ ಹಿಂದೆ ಜಪಾನ್‌ನಲ್ಲಿ ಸಮಿದೋರಿ ಚಹಾ ಎಲೆ ಕೆಜಿಗೆ 6.42 ಲಕ್ಷ ರೂ.ನಂತೆ ಮಾರಾಟವಾಗಿ ದಾಖಲೆ ಬರೆದಿತ್ತು. ಫೋರ್ಬ್ಸ್ ಸಂಸ್ಥೆಯ ವರದಿಯ ಪ್ರಕಾರ 2020ರಲ್ಲಿ ಈ ಸಮಿದೋರಿ ಚಹಾ ಎಲೆಯ ಎರಡು ಚಮಚ ಪುಡಿ ಹಾಕಿ ಮಾಡುವ ಒಂದು ಕಪ್ ಚಹಾಕ್ಕೆ ಬರೋಬ್ಬರಿ 2300 ರೂ. ಬೆಲೆಯಿತ್ತು! **(ಉದಯವಾಣಿ 21–4–2022)**

=====================================================================

**ಕವನ**

## ಮುಲ್ಲಾ ಫತ್ವ ಮತ್ತು ಅಹ್ಮದಿಯತಿನ ವಿಜಯ

♦ **ಕೆ.ಎಂ. ಉಮರ್, ಮಡಿಕೇರಿ**

ಮಹ್‌ದಿ ಎಂದು ಅಹ್ಮದ್ ತನ್ನ ವಾದವ ಮುಂದಿಟ್ಟಾಕ್ಷಣದಿ
ಮುಲ್ಲಾ, ಮೌಲವಿ, ಒಟ್ಟಿಗೆ ಸೇರಿ ಕುಫ್ರ್‌ನ ಮಳೆಯನು ಸುರಿಸಿದರು.

ಬೆಳೆಯಲು ಬಿಡದೆ ಚಿಗುರಲೆ ಮುರಿದರೆ ಉಳಿಯದು ಮುಂದೀ ಸಂಘಟನೆ
ವ್ಯಾಮೋಹವ ತಮ್ಮನದಲಿ ತುಂಬಿಸಿ ನಾಶದ ಕೂಪದಿ ಮುಳುಗಿದರು.

ದೇವನು ತನ್ನ ಮಹ್‌ದಿಯ ಸಂದೇಶ ಲೋಕದಲೆಲ್ಲ ಹರಡಿದನು
ದೇವನು ಸತ್ಯ ಮಹ್‌ದಿಯ ಜೊತೆಯಲಿ ಸಜ್ಜನರನ್ನೇ ಮಾಡಿದನು.

ಮುಹಮ್ಮದ್ ನಬಿಯ ದೀನಿಸ್ಲಾಮಿನ ಸುಂದರ ರೂಪವ ಹರಡುತಲಿ
ಮಹ್‌ದಿಯ ಸಂದೇಶ ತಲುಪಿತು ಲೋಕದ ಮೂಲೆ ಮೂಲೆಗೂ ಭರದಲ್ಲಿ.

ನಾಶವಾದರು ಮಹ್‌ದಿ ವಿರೋಧಿಗಳ್ಯಾರೂ ಭುವಿಯಲಿ ಉಳಿಯದೆನೆ
ನಾನಾ ರೂಪದಿ ನಾಶದ ಸುಳಿಯಲಿ ಮುಳುಗುತ ತೇಲುತ ಅವರ ಕೊನೆ.

ಒಂದನೆ ಬಟಾಲವಿ, ಸಾಲಲಿ ಸನಾವುಲ್ಲ, ಫೈಝುಲ್ ರಾಜನ ಗತಿಯೇನು?
ಭುಟ್ಟೋ, ಝಿಯಾಉಲ್ ಹಕ್ಕರ ಪಾಲಿಗೆ ಕೊನೆಯಲಿ ದೇವನ ವಿಧಿಯೇನು?

ಪಾಕಿಸ್ತಾನದಿ ಮಹ್‌ದಿಯ ಶಿಷ್ಯರ ಕಗ್ಗೊಲೆ ಮಾಡುತ ಸಾಗುತಿರೊ
ಪಾಪಿಗಳೇ ನಿಮಗೀ ಉಪದೇಶ ಯಾವ ಪ್ರವಾದಿ ಕಲಿಸಿದರು!

ಪವಿತ್ರ ಜುಮುಅ ನಡೆಯುವ ವೇಳೆ ಸಜ್ಜನರನ್ನು ಗುಂಡ್ಹೊಡೆದು
ಪಾಪಕೃತ್ಯವ ಮಾಡಿದ ಕ್ರೂರರೇ ನಿಮಗಿಲ್ಲೇನು ಲಾಭವಿದೆ!

ಲಾಹೋರಿನ ಧರೆ ಸಾಕ್ಷಿಯಾಯಿತು ಸಜ್ಜನ ಶಹೀದರ ಭಾಗಕ್ಕೆ
ಲಾಭವ ದೊರಕಿಸಿ ಕೊಡುವನು ಸರ್ವೇಶ ಮಹ್‌ದಿಯ ಶಿಷ್ಯರ ಭಾಗಕ್ಕೆ.

ನೆನಪಿಸಿಕೊಳ್ಳಿರಿ ಮುತ್ತು ನಬಿಯರ ಪಾವನವಾದ ನುಡಿ ವಚನ
ನೆಲೆಗೊಳ್ಳುವರು ಆಕಾಶದಡಿಯಲಿ ನಾಶಕಾರಿ ಪಂಡಿತರು.

ಪವಿತ್ರ ಖುರ್‌ಆನ್, ನಬಿಯರ ವಾಕ್ಯ ಮಾತ್ರವೇ ನಮಗೆ ಆಧಾರ
ಪಾರಾಗುವಾ ಈ ಮುಲ್ಲಾ, ಮೌಲವಿ ಸನಿಹದಿ ಬೇಗನೇ ಬಹುದೂರ.

ಮಹ್‌ದಿ ಎಂದು ಅಹ್ಮದ್ ತನ್ನ ವಾದವ ಮುಂದಿಟ್ಟಾಕ್ಷಣದಿ
ಮುಲ್ಲಾ, ಮೌಲವಿ, ಒಟ್ಟಿಗೆ ಸೇರಿ ಕುಫ್ರ್‌ನ ಮಳೆಯನು ಸುರಿಸಿದರು.

ಆರೋಗ್ಯ

# ಔಷಧ ಗುಣಗಳ ಭಂಡಾರ ಜೀರಿಗೆ

■ ಶಿವರಾಮ ಭಟ್, ಹತ್ತೊಕ್ಕಲು

ಜೀರಿಗೆ ಪ್ರತಿನಿತ್ಯ ಅಡುಗೆಗೆ ಬೇಕಾಗುವ ಸಂಬಾರ ಪದಾರ್ಥದ ಕಾಳು ಸುವಾಸನೆಯಿಂದ ಕೂಡಿದ್ದು, ಅಡುಗೆಯಲ್ಲಿ ರುಚಿ ಮತ್ತು ಪರಿಮಳಕ್ಕಾಗಿ ಉಪಯೋಗಿಸುತ್ತಾರೆ. ಮಸಾಲೆ ಪುಡಿ, ಸಾರು, ಪಲ್ಯ, ಕೇಕ್, ಬ್ರೆಡ್, ಉಪ್ಪಿನಕಾಯಿ, ಚೀಸ್ ಮುಂತಾದವುಗಳನ್ನು ತಯಾರಿಸುತ್ತಾರೆ. ಕಾಳುಗಳು ಗಾತ್ರದಲ್ಲಿ ಸಣ್ಣಗಿದ್ದು, ಇದರಿಂದ ತೈಲವನ್ನು ತೆಗೆಯುತ್ತಾರೆ. ಸಸ್ಯದ ಎಲ್ಲ ಭಾಗಗಳಲ್ಲೂ ವಿಶಿಷ್ಟ ಕಂಪು ಇರುತ್ತದೆ.

ಆಯುರ್ವೇದದಲ್ಲಿ ಜೀರಿಕಾದಿ ಲೇಹ್ಯ, ಹಿಂಗಾಷ್ಟಕ ಚೂರ್ಣಗಳಲ್ಲಿ ಇದನ್ನು ಉಪಯೋಗಿಸುತ್ತಾರೆ. ಜೀರಿಗೆಯು ದೀಪನ ಕಾರಿ, ಶೀತಲ, ರುಚಿಕಾರಕ, ನೇತ್ರಕ್ಕೆ ಹಿತಕಾರಿ, ಗರ್ಭಾಶಯ ಶುದ್ಧೀಕಾರಕ, ಬಲಕಾರಕ, ರಕ್ತಕಾರ ನಿವಾರಕ, ಅತಿಸಾರ, ಕೆಮ್ಮು ಮುಂತಾದವುಗಳಲ್ಲಿ ಗುಣಹಾರಿಯು, ವಿಷಹಾರಣ, ಪಿತ್ತವನ್ನು ಶಮನ ಮಾಡುತ್ತದೆ. ಉದರ ಬಾಧೆಗಳನ್ನು, ಜಠರ ದೋಷಗಳನ್ನು ನಿವಾರಿಸುತ್ತದೆ. ಮೂತ್ರ ಕಾರ, ಪಿತ್ತಕಾರಗಳನ್ನು ಶಮನಗೊಳಿಸುತ್ತದೆ. ಆರುಚಿ ನಿವಾರಕ, ದಾಹಪ್ರಶಮನಕಾರಿಯು, ವಾಂತಿ, ವಾಕರಿಕೆಗಳನ್ನು ನಿವಾರಿಸುತ್ತದೆ.

ಜೀರಿಗೆಯಲ್ಲಿ ಬಿಳಿ ಜೀರಿಗೆ (ಶುಕ್ಲಜೀರಿಕ), ಕರಿಜೀರಿಗೆ (ಕೃಷ್ಣಜೀರಿಕ), ಸಹ ಜೀರಿಗೆ ಎಂಬ ಪ್ರಭೇದಗಳಿವೆ. ಜೀರಿಗೆಯನ್ನು ಸಂಸ್ಕೃತದಲ್ಲಿ ಜೀರಿಗೆ, ಹಿಂದಿಯಲ್ಲಿ ಜೀರಾ, ಸಫೇದ್ ಜೀರಾ, ತಮಿಳಿನಲ್ಲಿ ಶಿರಗಮ್, ಸೀರಕಮ್, ತೆಲುಗಿನಲ್ಲಿ ಜಲಕರ, ಇಂಗ್ಲಿಷ್‌ನಲ್ಲಿ ಕ್ಯುಸಿಂನ್ ಸೀಡ್ಸ್ ಎಂದೂ ಸಸ್ಯ ಶಾಸ್ತ್ರಜ್ಞರು ಇದನ್ನು ಕ್ಯುಮಿನಂ ನೈಮಿನಂ ಎಂದೂ ಹೆಸರಿಸಿದ್ದಾರೆ. ಇದು ಏಪಿಯೇಸಿ ಕುಟುಂಬಕ್ಕೆ ಸೇರಿದ ಸಸ್ಯ.

1. ಜ್ವರ ಅರ್ಜೀಣ, ಮೂತ್ರ ತಡೆ, ಮೈ ಉರಿ ನಿವಾರಣೆಗೆ: ಜೀರಿಗೆ, ಮೆಣಸು, ಒಣ ಶುಂಠಿ, ಹಿಪ್ಪಲಿ, ಸೈಂಧವ ಲವಣ ಇವುಗಳನ್ನು ಸಮ ಪ್ರಮಾಣದಲ್ಲಿ ತೆಗೆದುಕೊಂಡು ಚೆನ್ನಾಗಿ ಪುಡಿ ಮಾಡಿ ಇದಕ್ಕೆ ಒಂದಿಷ್ಟು ಹುರಿದಂಗು ಬೆರೆಸಿ 10ಗ್ರಾಂ, ಪ್ರಮಾಣದಲ್ಲಿ ನೀರಿನೊಂದಿಗೆ ಇಲ್ಲವೆ, ಮಜ್ಜಿಗೆಯೊಂದಿಗೆ ಸೇವಿಸಬೇಕು ಉಂಡ ಆಹಾರವು ಚೆನ್ನಾಗಿ ಜೀರ್ಣವಾಗಿ ಜ್ವರ, ಜಠರ ದೋಷಗಳು ನಿವಾರಣೆಯಾಗುವುವು.

2. ಬೆಳಗಿನ ಆಯಾಸಕ್ಕೆ ಪಿತ್ತಕಾರಕ್ಕೆ 10ಗ್ರಾಂ. ಜೀರಿಗೆ ಪುಡಿ, 10ಗ್ರಾಂ ಹುಣಸೆ ಹಣ್ಣು, 10 ಗ್ರಾಂನಷ್ಟು ಬೆಲ್ಲ, ಒಂದು ಚಮಚ ಜೇನು ತುಪ್ಪ ಮಿಶ್ರ ಮಾಡಿ 3 ಉಂಡೆಗಳನ್ನಾಗಿ ಮಾಡಿಕೊಳ್ಳಬೇಕು. ಬೆಳಗ್ಗೆ ತಿಂಡಿ ತಿನ್ನುವುದಕ್ಕೆ ಮುಂಚೆ, ಮಧ್ಯಾಹ್ನ ರಾತ್ರಿ ಊಟಕ್ಕೆ ಮುಂಚೆ ಒಂದೊಂದು ಗುಳಿಗೆಯನ್ನು ತಿಂದು ನೀರು ಕುಡಿಯಬೇಕು. ತಲೆ ಸುತ್ತುವಿಕೆ, ಉಬ್ಬಳಿಕೆ, ವಾಕರಿಕೆ, ಹೊಟ್ಟೆ ತೊಳೆಸುವಿಕೆ, ಮುಂತಾದ ಹೊಟ್ಟೆಕಾರಗಳು ನಿವಾರಣೆಯಾಗಿ ಆರೋಗ್ಯ ವೃದ್ಧಿಯಾಗುವುದು.

3. ವಾಕರಿಕೆ, ಉಬ್ಬಳಿಕೆ, ಕಂಡು ಬಂದಾಗ ಒಂದಿಷ್ಟು ಜೀರಿಗೆಯನ್ನು ಬಾಯಲ್ಲಿ ಹಾಕಿಕೊಂಡು ಅಗಿದು ನುಂಗಬೇಕು, ವಾಕರಿಕೆ, ಉಬ್ಬಳಿಕೆ ಶಮನಗೊಳ್ಳುತ್ತದೆ.

4 ಒಣಕೆಮ್ಮಿಗೆ: ಜೀರಿಗೆ ಕಷಾಯವನ್ನು ಆಗಾಗ ಗುಟುಕರಿಸುತ್ತಿರಬೇಕು.

5. ಗರ್ಭಿಣಿಯರ ವಾಂತಿಗೆ: ಜೀರಿಗೆ, ಧನಿಯ, ಸಮಪ್ರಮಾಣದಲ್ಲಿ ನುಣ್ಣಗೆ ಪುಡಿ ಮಾಡಿಕೊಂಡು 10 ಗ್ರಾಂನಷ್ಟನ್ನು ಹಾಲು ಸಕ್ಕರೆಯಲ್ಲಿ ಬಳಸಿ ದಿನದಲ್ಲಿ 2–3 ಬಾರಿ ಕುಡಿಯಬೇಕು. ಕೆಲವು ದಿನಗಳು ಈ ರೀತಿ ಸೇವಿಸುತ್ತಿರಬೇಕು.

6. ಸುಲಭದ ಹೆರಿಗೆಗೆ: ಗರ್ಭಿಣಿಯರು ಹೆರಿಗೆಗೆ: 2–3 ತಿಂಗಳು ಮುಂಚಿನಿಂದ ಒಂದು ಕಪ್ಪು ಜೀರಿಗೆ ಕಷಾಯಕ್ಕೆ ಸಲ್ಪ ಹಾಲು, ಜೇನು ಬೆರೆಸಿ ಊಟದ ಅನಂತರ ಕುಡಿಯುತ್ತಿರಬೇಕು. ಇದರಿಂದ ಸುಖ ಪ್ರಸವವಾಗುವುದು. ಎದೆ ಹಾಲು ವೃದ್ಧಿಯಾಗುವುದು, ಹುಟ್ಟುವ ಮಕ್ಕಳು ಆರೋಗ್ಯದಿಂದ ಇರುವರು.

7. ಜೀರ್ಣಶಕ್ತಿ ಹೆಚ್ಚಲು: ಬಾಯಿ ಪರಿಮಳಯುಕ್ತವಾಗಿರಲು ಜೀರಿಗೆ, ಬಡೇಸೋಂಪು, ಓಮಕಾಳು, ಇವುಗಳನ್ನು ಒಟ್ಟು ಮಾಡಿ 5ಗ್ರಾಂನಷ್ಟನ್ನು ಬಾಯಲ್ಲಿಟ್ಟುಕೊಂಡು ಅಗಿದು ತಿನ್ನಬೇಕು. ಜೀರ್ಣಶಕ್ತಿ ಹೆಚ್ಚಿ ಬಾಯಿಯ ದುರ್ಗಂಧ ನೀಗುತ್ತದೆ.

8. ಜೀರಿಗೆಯನ್ನು ತುಪ್ಪ ಹಾಗೂ ಸೈಂಧವ ಲವಣಗಳೊಂದಿಗೆ ಬೆರೆಸಿ ನುಣ್ಣಗೆ ಅರೆದು ಸ್ವಲ್ಪ ಬೆಚ್ಚಗೆ ಮಾಡಿ ಚೇಳು ಕಡಿದ ಜಾಗಕ್ಕೆ ಕಟ್ಟುವುದರಿಂದ ಉರಿ ಮಾಯವಾಗುತ್ತದೆ.

9. ಮಕ್ಕಳಲ್ಲಿ ಹೊಟ್ಟೆ ಹುಳುಗಳು ಹಾವಳಿ ಹೆಚ್ಚಾಗಿ ಹೊಟ್ಟೆನೋವು ಇದ್ದಾಗ ಜೀರಿಗೆ ಬೀಜಗಳನ್ನು ನೀರಿನಲ್ಲಿ ಅರೆದು ಹೊಟ್ಟೆಯ ಮೇಲೆ ಲೇಪಿಸಿದಲ್ಲಿ ನೋವು ನಿವಾರಣೆಯಾಗುತ್ತದೆ.

10. ಬಾಣಂತಿಯರು ಜೀರಿಗೆ ಕಷಾಯ ಅಥವಾ ಚೂರ್ಣವನ್ನು ನಿಯುತವಾಗಿ ಸೇಸಿದರೆ ಎದೆ ಹಾಲಿನ ಉತ್ಪತ್ತಿ ಹೆಚ್ಚಾಗುತ್ತದೆ.

11. ಜೀರಿಗೆಯನ್ನು ನಿಯಮಿತವಾಗಿ ಆಹಾರದೊಂದಿಗೆ ಸೇವಿಸುವುದರಿಂದ ಕಣ್ಣಿನ ದೃಷ್ಟಿ ಶಕ್ತಿ ಹೆಚ್ಚುತ್ತದೆ.

**(ಉದಯವಾಣಿ 8–8–2017)**













**ಮಡಿಕೇರಿ:** ಹ್ಯುಮಾನಿಟಿ ಪಸ್ಟ್ ಮಡಿಕೇರಿ ಹಾಗೂ ಲಜ್ನಾ ಇಮಾಇಲ್ಲಾಹ್ ಮಡಿಕೇರಿ ಇವರ ಸಂಯುಕ್ತ ಆಶ್ರಯದಲ್ಲಿ ತಾ. 13/04/22ರ ಬುಧವಾರ ಮಡಿಕೇರಿ ನಗರದಲ್ಲಿ 37 ಬಡವರಿಗೆ  ಆಹಾರ ಸಾಮಗ್ರಿಗಳನ್ನು ವಿತರಿಸಲಾಯಿತು. ಅದರ ನೇತೃತ್ವವನ್ನು ಹ್ಯುಮಾನಿಟಿ ಫಸ್ಟ್ ಇಂಡಿಯಾದ ದಕ್ಷಿಣ ವಲಯ ಉಸ್ತುವಾರಿ ಮೊಹಮ್ಮದ್ ಶರೀಫ್‌ರವರು ವಹಿಸಿದ್ದರು. ಅವರೊಂದಿಗೆ ಕಾರ್ಯಕರ್ತರಾದ ಎಮ್. ಯು. ಉಸ್ಮಾನ್, ಅಬ್ದುಲ್ ಬಾಸಿತ್, ಎಮ್. ಯು. ಸಫಲ್ ಅಹ್ಮದ್, ಕಾಮಿಲ್ ಹ್ಯಾರಿಸ್ ಮುಂತಾದವರು ಭಾಗವಹಿಸಿದ್ದರು.


ಲಜ್ನಾ ಅಧ್ಯಕ್ಷರಾದ ನಸೀರಾ ರಫೀರವರ ನೇತೃತ್ವದಲ್ಲಿ ಸಮಿತಿ ಸದಸ್ಯರು ಆಹಾರ ಸಾಮಗ್ರಿಗಳ ಸಂಪೂರ್ಣ ವೆಚ್ಚವನ್ನು ತಾವೇ ಬರಿಸಿ ಪೊಟ್ಟಣಗಳನ್ನು ಅಚ್ಚುಕಟ್ಟಾಗಿ ಕಟ್ಟಿಕೊಡುವುದರ ಮೂಲಕ ನೆರವಾದರು.





**NEW PUBLICATIONS**

**Contact:**

**NAZARAT NASHRO - ISHA'AT**

**Sadr Anjuman Ahmadiyya**

**Qadian – 143516 (Punjab)**

**Phone: 01872 - 500970**

# Ahmadiyya Muslim Community

Apps for mobile devises

Download free apps developed by Ahmadiyya Muslim Community for your iphone,ipode, and Android

**Quran**
Read the Holy Quran in easy Yassarnal Quran Font

**Conditions of Bai'at**
A pocket reference of Shara't-e-Bai'at in 7 languages

**Sermons**
Huzoor's Friday Sermons In 15 languages


**MTA**
Watch MTA Live, view Schedule and much more

**Ahmadiyya News**
Stay up to date with the Latest jama'at news

View these apps at
alislam.org/apps
or scan the QR code below



Registered with the Registrar of Newspapers for India No. R.N. 27354/75
**Yugarashmi** Kannada Quarterly, **April - 2022.** Price : **Rs. 15/-**




ಮೂರನೇ ಮಹಾಯುದ್ಧದ ಭೀತಿ ದಿನೇ ದಿನೇ ವರ್ಧಿಸುತ್ತಿದೆ.

ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್
ಅಹ್ಮದಿಯಾ ಮುಸ್ಲಿಂ ಜಮಾಅತಿನ ಜಾಗತಿಕ ನೇತಾರ

#STOPWW3

Ahmadiyya Muslim Community, India

## ಜಾಗತಿಕ ಶಾಂತಿಯ ದೂತ ಮುಂದಿರಿಸಿದ ಶಾಂತಿ ಸ್ಥಾಪನೆಯ ಸುವರ್ಣ ತತ್ವಗಳು

1. ಸೃಷ್ಟಿಕರ್ತನನ್ನು ಅರಿಯಿರಿ
2. ಸಂಪೂರ್ಣ ನ್ಯಾಯಪಾಲನೆ ಸ್ಥಾಪಿಸಿರಿ
3. ಜಾಗತಿಕ ಏಕತೆಗೆ ಪ್ರೋತ್ಸಾಹ ಕೊಡಿರಿ
4. ಅಣ್ವಸ್ತ್ರವನ್ನು ಕೊನೆಗೊಳಿಸಿರಿ
5. ಆಯುಧ ವ್ಯಾಪಾರದಿಂದ ಅತಿಲಾಭ ಪಡೆಯುವುದನ್ನು ವರ್ಜಿಸಿರಿ
6. ಆರ್ಥಿಕ ಸಮಾನತೆಯನ್ನು ಸ್ಥಾಪಿಸಿರಿ ಮತ್ತು ಬಡತನವನ್ನು ತೊಡೆದುಹಾಕಿರಿ
7. ದೇಶದ ಏಳಿಗೆಗಾಗಿ ಪ್ರಯತ್ನಿಸಿರಿ
8. ಉಗ್ರವಾದವನ್ನು ತಿರಸ್ಕರಿಸಿರಿ
9. ಮನುಕುಲದ ಸೇವೆ ಮಾಡಿರಿ
10. ಪರಸ್ಪರರ ವಿಶ್ವಾಸಗಳನ್ನು ಆದರಿಸಿರಿ.

1800-103-2131 (Toll Free)

www.lightofislam.in | www.mta.tv
www.alislam.org | www.stopww3.co.uk

islaminind    islaminindia

Edited and Published by Muhammad Yusuf on behalf of Jamath Ahmadiyya at 10-23-1008/1,
Ist Floor, Ansari Road, Mangalore - 575 001. Typing by : U. Basheer Ahmad
Printed at 'Karavali Printers', Azizuddin Road, Mangalore on behalf of Jubilee Printing Press, Mangalore